ಅನುಭವದ ಎತ್ತರಗಳಿಗೆ
ಚಿಂತನೆಯ ಆಳಗಳಿಗೆ

ಮಾನವ

ನವೆಂಬರ್ ೧೯೭೬



ಮಾನವ
ವೇದಿಕೆಯ ಪ್ರಕಟಣೆ

ರೂ. ಒಂದು

ಕನ್ನಡದಲ್ಲಿ ಲೋಹಿಯಾ ಸಾಹಿತ್ಯ ಪ್ರಕಟಿಸುವ ಯೋಜನೆಯಂತೆ ನಾವು ಇಷ್ಟರಲ್ಲಿಯೇ ಹೊರತರಲಿರುವ ಕೃತಿ.

★ ಲೋಹಿಯಾ-ಒಂದು ಪರಿಚಯ

—ಡಿ. ಎಸ್. ನಾಗಭೂಷಣ

★ ಲೋಹಿಯಾ [ಕೆಂಪು ಪುಸ್ತಕ] ಪುನರ್ಮುದ್ರಣ.

—ಸಂ: ಪ್ರೊ|| ಎಂ. ಡಿ. ನಂಜುಂಡಸ್ವಾಮಿ

ಕೆ. ಪಿ. ಪೂರ್ಣಚಂದ್ರ ತೇಜಸ್ವಿ

★ LOHIA-A BIOGRAPHY

—Indumati Kelkar

ಪ್ರತಿಗಳಿಗಾಗಿ

ನೆಲಮನೆ ಪ್ರಕಾಶನ

೩೫೧೪-ಎ, ಕೆ. ಜಿ. ಕೊಪ್ಪಲು

ಮೈಸೂರು-೫೭೦೦೧೪

ಅನುಭವದ ಎತ್ತರಗಳಿಗೆ
ಚಿಂತನೆಯ ಆಳಗಳಿಗೆ

ಮಾನವ

ಮಾಸಪತ್ರಿಕೆ

ನವೆಂಬರ್ ೧೯೭೯ ಸಂಪುಟ : ೧೨ ಸಂಚಿಕೆ : ೭

ಭಾರತದ ರಾಜಕೀಯ ಎಲ್ಲರನ್ನೂ ಗೊಂದಲಕ್ಕೀಡುಮಾಡಿರುವ ಪರಿಸ್ಥಿತಿಯಲ್ಲಿ 'ಮಾನವ' ಹೊಸ ಚೈತನ್ಯ ತಳೆದು ಹೊರಬರುತ್ತಿದೆ. ಜನಜೀವನದೊಡನೆ ನೇರವಾದ ಹಾಗೂ ಪರೋಕ್ಷವಾದ ಸಂಬಂಧ ಹೊಂದಿರುವ ಎಲ್ಲ ರಂಗಗಳು ಸೈದ್ಧಾಂತಿಕವಾಗಿ ದಿವಾಳಿ ಯೆದ್ದಿರುವ ದುರಂತ ನಮ್ಮ ಕಣ್ಣೆದುರಿಗಿದೆ. ಜನಸಾಮಾನ್ಯರನ್ನು ಕಿತ್ತು ತಿನ್ನುತ್ತಿರುವ ಸಮಸ್ಯೆಗಳ ನಿರ್ಮೂಲನೆಗೆ ಮಾರ್ಗವೇ ಇಲ್ಲವೇನೋ ಎಂಬ ದಿಗ್ಮೂಢ ಸ್ಥಿತಿಗೆ ಬಂದು ನಾವು ತಲುಪಿದ್ದೇವೆ.

ರಾಜಕೀಯ ನಾಯಕರುಗಳು ಅಧಿಕಾರವನ್ನು ಪರಮಾವಧಿ ರೀತಿಯಲ್ಲಿ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಅವರಿಗೆ ಜನಸಾಮಾನ್ಯರ ಹಿತಕ್ಕಿಂತ ತಮ್ಮ ಸ್ವಾರ್ಥವೇ ಪರಮಗುರಿ ಎನಿಸಿದೆ. ಬಡತನದ ಬೇಗೆಯಲ್ಲಿ ಬೆಂದು ಹೋಗುತ್ತಿರುವ ಜನರ ದೌರ್ಬಲ್ಯಗಳನ್ನು ಈ ನಾಯಕರುಗಳು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಅವರು ಸಾಮಾಜಿಕ ಬದಲಾವಣೆಯ ಕಪಟ ನಾಟಕವಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ, ದಬ್ಬಾಳಿಕೆಗೆ ತುತ್ತಾಗಿರುವ ಬಡಜನರಲ್ಲಿ ಹೊಸ ಜಾಗೃತಿ ಮೂಡಿಸುವ ಕಾರ್ಯ ಅತ್ಯಂತ ತುರ್ತಾಗಿ ನಡೆಯಬೇಕಾಗಿದೆ. ಈ ದಿಸೆಯಲ್ಲಿ 'ಮಾನವ' ತತ್ವನಿಷ್ಠ ಮಾಧ್ಯಮವಾಗಲು ಪ್ರಾಮಾಣಿಕವಾಗಿ ಯತ್ನಿಸುತ್ತದೆ.

ಅಸಮಾನತೆಯನ್ನು ತೊಡೆದು ಹಾಕಬೇಕೆಂದು ಹಂಬಲಿಸುವವರೆಲ್ಲ ನಮಗೆ ಸರ್ವವಿಧದ ಉತ್ತೇಜನ ನೀಡುತ್ತೀರೆಂದು ನಂಬಿದ್ದೇವೆ. 'ಮಾನವ' ನಿಮ್ಮೆಲ್ಲರ ವೇದಿಕೆ. ಇದನ್ನು ಸಮರ್ಪಕವಾಗಿ ಬಳಸಿಕೊಳ್ಳುವ ಹೊಣೆ ನಿಮ್ಮದು. ಈಗ ಮಾಸಪತ್ರಿಕೆಯಾಗಿ ಪ್ರಾರಂಭ ಗೊಂಡಿರುವ 'ಮಾನವ' ಸದ್ಯದಲ್ಲಿಯೇ ವಾರಪತ್ರಿಕೆಯಾಗಿ ಪರಿವರ್ತನೆಗೊಳ್ಳುವ ಯೋಜನೆಯೂ ಇದೆ. ಸಮಾನತೆಯನ್ನು ಪ್ರೀತಿಸುವ ನೀವೆಲ್ಲರೂ ಪಟ್ಟಭದ್ರ ವ್ಯವಸ್ಥೆಯ ವಿರುದ್ಧ ನಾವು ಹೂಡಿರುವ ಹೋರಾಟದಲ್ಲಿ ಸಹಾಯ ಹಸ್ತ ಚಾಚುತ್ತೀರೆಂದು ನಂಬಿದ್ದೇವೆ.

ಈ ಸಂಚಿಕೆಯಲ್ಲಿ

ಸಂಪಾದಕ
ನಾಗಭೂಷಣ

ಸಹ ಸಂಪಾದಕ
ಎಂ. ಆರ್. ಶಿವಣ್ಣ

ವ್ಯವಸ್ಥಾಪಕ ಸಂಪಾದಕ
ಕೆ. ದೇವೇಗೌಡ

ಸಲಹೆ
ಎಂ. ಡಿ. ನಂಜುಂಡಸ್ವಾಮಿ
ದೇವನೂರ ಮಹಾದೇವ

ಪ್ರಕಾಶಕ
ವೈ. ಮಹೇಶ

ಕಲೆ
ಕೆ. ಟಿ. ಶಿವಪ್ರಸಾದ್

ಕಾರ್ಯಾಲಯ :
''ಮಾನವ'' ಮಾಸಪತ್ರಿಕೆ
೨೫೧೪-ಎ, ಕೆ. ಜಿ. ಕೊಪ್ಪಲು
ಮೈಸೂರು-೫೭೦೦೧೪

ಶಹಾಬಾದ್ : ಕರ್ನಾಟಕ ಸರ್ಕಾರದ ಪೌಷ್ಟಿಕ ಆಹಾರ ಕಾರ್ಯಕ್ರಮದ ಆಶ್ರಯದಲ್ಲಿ ಇಲ್ಲಿಯ ಸುಮಾರು ೧೫೦೦ ಮಕ್ಕಳಿಗೆ "ದಿನಕ್ಕೆ ಒಪ್ಪೊತ್ತಿನ ಊಟ" ಒದಗಿಸಲಾಗುತ್ತಿದೆ. ಈ 'ಪೌಷ್ಟಿಕ ಆಹಾರ'ಕ್ಕಾಗಿ ಪ್ರತಿ ಮಗುವಿಗೆ ಕೇವಲ ೨೦ ಪೈಸೆ ವೆಚ್ಚಮಾಡಲಾಗುತ್ತದೆ. ಮಕ್ಕಳಿಗೆ ಕೊಡಲಾಗುತ್ತಿರುವ 'ಪೌಷ್ಟಿಕ ಆಹಾರ'ವೆಂದರೆ ತಲಾ ಎರಡು ಅರೆಬೆಂದ ಬ್ರೆಡ್ಡಿನ ಚೂರುಗಳು.

—"ಇಂಡಿಯನ್ ಎಕ್ಸ್‌ಪ್ರೆಸ್" ವರದಿ ನ ೧೧

o o

ಎಲ್ಲರಿಗೂ ನ್ಯಾಯ ಒದಗಿಸುವ ಕಲ್ಪನೆಯೇ ಸಂವಿಧಾನದ ಮೂಲ ಸ್ವರೂಪಕ್ಕೆ ವ್ಯತಿರಿಕ್ತವಾದುದು. ಹಕ್ಕುಗಳ ಸದ್ಯದ ಮಟ್ಟವನ್ನು ಪಾಲಿಸಿಕೊಂಡು ಸಮಾನತೆಯನ್ನು ಸಾಧಿಸಲಾಗದು.

—ಅಟಾರ್ನಿ ಜನರಲ್ ಎಲ್. ಎನ್. ಸಿನ್ಹಾ.

o o

ಕಾಂಗ್ರೆಸ್—ಐ ನಾಯಕ ಕಮಲಾಪತಿ ತ್ರಿಪಾಠಿ ಅವರ ಸೊಸೆ ಶ್ರೀಮತಿ ನಳಿನಿ ತ್ರಿಪಾಠಿ ಬರುವ ಲೋಕಸಭಾ ಚುನಾವಣೆಯಲ್ಲಿ ತನ್ನ ಹಿರಿಯ ಅತ್ತಿಗೆ ಚಂದ್ರಾ ತ್ರಿಪಾಠಿ (ರಾಜಕೀಯ ವಲಯಗಳಲ್ಲಿ ಈಕೆ 'ಬಹುಜೀ' ಎಂದು ಪ್ರಸಿದ್ಧರಾಗಿದ್ದಾರೆ)ಯವರ ವಿರುದ್ಧ ಸ್ಪರ್ಧಿಸಲಿದ್ದಾರೆ.

—ಪತ್ರಿಕಾವರದಿ.

o o

ನೀವು ನನ್ನ ದೇಹದ ಗಾತ್ರವನ್ನು ಬಲ್ಲಿರಿ. ನನ್ನ ಮೇಲೆ ಒತ್ತಡ ಹೇರಲಾಗದಷ್ಟು ನಾನು ಸ್ಥೂಲಕಾಯ.

—ವರದಿಗಾರನೊಬ್ಬನೊಡನೆ ರ್‍ಹೊಡೇಶಿಯಾದ ಪ್ಯಾಟ್ರಿಯಾಟಿಕ್ ಫ್ರಂಟ್ ನಾಯಕ ಎನ್. ಕೋಮೋ.

o o

ಜಗತ್ತಿನಲ್ಲೆಲ್ಲೂ ಇಲ್ಲದ ಬಹುಧರ್ಮೀಯ ರಾಷ್ಟ್ರವಾದ ಭಾರತದಲ್ಲಿ ಹಿಂದೂ ರಾಷ್ಟ್ರ ಅಥವಾ ಯಾವುದೇ ಬಗೆಯ ಮತಾಚಾರ್ಯವಾದೀ ಪ್ರಭುತ್ವವನ್ನು ಕುರಿತು ಹುಚ್ಚ ಮಾತ್ರ ಆಲೋಚಿಸಬಲ್ಲ.

—ಜಗಜೀವನರಾಂ.

o o

ಜೆ. ಪಿ. ಅಂತಹ ಮಹತ್ವದ್ದೇನೂ ಮಾಡಿಲ್ಲ ಅವರು ಗಾಂಧೀಜಿಯನ್ನು ಕಾಪಿ ಮಾಡಿದರಷ್ಟೆ.

—ಮೊರಾರ್ಜಿ ದೇಸಾಯಿ, ಜೆ.ಪಿ ನಿಧನದ ಸಂದರ್ಭದಲ್ಲಿ.

ಆಗ ನಂದಿನಿ ಸತ್ಪಥಿ ಒರಿಸ್ಸಾದ ಮುಖ್ಯಮಂತ್ರಿ. ಆಕೆ ತಮ್ಮ ಮಗನ ಹುಟ್ಟಿದಹಬ್ಬವೆಂದೇನೋ ಒಂದು ಸಂತೋಷಕೂಟ ಏರ್ಪಡಿಸಿದ್ದರು. ಅದಕ್ಕೆ ಶ್ರೀಮತಿ ಸತ್ಪಥಿ ಅವರು ಶ್ರೀಮತಿ ಗಾಂಧಿ, ಅವರ ಸಹೋದ್ಯೋಗಿಗಳು ಹಾಗೂ ತಮ್ಮ ಕುಟುಂಬದ ಮಿತ್ರರನ್ನು ಆಹ್ವಾನಿಸಿದ್ದರು.

ಸಂತೋಷಕೂಟಕ್ಕೆ ಜಗಜೀವನರಾಂ, ಚವಾಣ್ ಇತ್ಯಾದಿಯಾಗಿ ಅನೇಕ ಹಿರಿಯ ರಾಜಕಾರಿಣಿಗಳು ಆಗಲೇ ಆಗಮಿಸಿದ್ದರು. ಅವರೆಲ್ಲಾ ಒಟ್ಟಿಗೆ ಸೇರಿ ಆತ್ಮೀಯತೆಯಿಂದ ಹರಟೆ ಹೊಡೆಯುತ್ತಿದ್ದರು. ಇಡೀ ಕೊಠಡಿ ಹರ್ಷದ ಹೊನಲಲ್ಲಿ ಮುಳುಗಿತ್ತು. ಆಗ ಶ್ರೀಮತಿ ಇಂದಿರಾ ಗಾಂಧಿ ಅವರ ಆಗಮನದ ಸುದ್ದಿ ಬಂತು. ಅದರ ಹಿಂದೆಯೇ ಶ್ರೀಮತಿ ಗಾಂಧಿ ಆಗಮಿಸಿದರು. ಇಡೀ ಕೊಠಡಿ ಸ್ತಬ್ಧವಾಯಿತು! ಜಗಜೀವನರಾಂ ಚವಾಣ್‌ರೆನ್ನದೆ ಎಲ್ಲರೂ ತಟಕ್ಕನೆ ಎದ್ದು ನಿಂತು ತಮ್ಮ ನಾಯಕಿಗೆ ಗೌರವ ಸೂಚಿಸಿದರು.

ಶ್ರೀಮತಿ ಗಾಂಧಿ ಶ್ರೀಮತಿ ಸತ್ಪಥಿ ಅವರ ಬಳಿ ಬಂದರು. ಕುಶಲ ಸಂಭಾಷಣೆಗೆ ತೊಡಗಿದರು. ಮತ್ತೆ ಕೊಠಡಿಯಲ್ಲಿ ಗುಸು ಗುಸು ಆರಂಭವಾಯಿತು. ಶ್ರೀಮತಿ ಸತ್ಪಥಿ, ತಮ್ಮ ಪಕ್ಕದಲ್ಲಿದ್ದವರೊಬ್ಬರನ್ನು ಶ್ರೀಮತಿ ಗಾಂಧಿಗೆ 'ಇವರು ಕರ್ನಲ್ ದಾಸ್ ಅಂತ. ನಮ್ಮ ಕುಟುಂಬಕ್ಕೆ ಸೇರಿದವರು' ಎಂದು ಪರಿಚಯ ಮಾಡಿಕೊಟ್ಟರು. ಶ್ರೀಮತಿ ಗಾಂಧಿ, ಅವರೊಂದಿಗೆ ಕೈಕುಲುಕಿದರಾದರೂ ಅವರ ಮನಸ್ಸಿನೊಳಗೆ ಒಂದು ಅನುಮಾನ ಎದ್ದಿತು. ಸತ್ಪಥಿ ಬ್ರಾಹ್ಮಣರು. ಆದರೆ ದಾಸ್? ತಕ್ಷಣವೇ ಅವರು ಮೆಲ್ಲಗೆ ದಾಸ್ ಅವರನ್ನು ಕೇಳಿದರು: 'ಮಿಸ್ಟರ್ ದಾಸ್, ನೀವು ಬ್ರಾಹ್ಮಣರೇನು?'

ಇಂಡಿಯಾದಲ್ಲಿ ಜಾತಿಪ್ರಜ್ಞೆ ಅವನತಿಗೊಳ್ಳುತ್ತಿದೆ ಅಲ್ಲವೆ?

—ಡಾ॥ ಆಂಥೋಣಿ ಎಂಬುವವರು ನೆಹರೂ ಮನೆತನ ಕುರಿತು ಬರೆದಿರುವ ಪುಸ್ತಕವೊಂದರಿಂದ.

ಅನಾವೃಷ್ಟಿಯ ಪರಿಣಾಮವಾಗಿ, ಇನ್ನೊಂದು ವರ್ಷದಲ್ಲಿ ರಾಷ್ಟ್ರದ ಮೀಸಲು ಆಹಾರ ದಾಸ್ತಾನೆಲ್ಲ (೨ ಕೋಟಿಟನ್) ಖಾಲಿಯಾಗಿಹೋಗಲಿದೆ. ೧.೨ ಕೋಟಿ ಟನ್‌ಗಳಷ್ಟು ಖಾರಿಫ್ ಫಸಲು ನಷ್ಟವಾಗಿದೆ. ಮಳೆಯ ಅಭಾವದಿಂದ ಉಳುಮೆ ಮಾಡದೆ ಬಹಳಷ್ಟು ಭೂಮಿ ಹಾಗೇ ಬಿದ್ದಿದೆ. ಈ ನಷ್ಟ ಸುಮಾರು ೬೦ ಲಕ್ಷ ಟನ್‌ಗಳಷ್ಟಾಗಬಹುದು.

—ಭಾನು ಪ್ರತಾಪ ಸಿಂಗ್
ಕೇಂದ್ರದ ಗ್ರಾಮೀಣ ಪುನರ್ನಿರ್ಮಾಣ ರಾಜ್ಯ ಸಚಿವ

o o

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಘೋಷಿಸಿದ ನಂತರ ಅದರ ಅನುಷ್ಠಾನದ ಕ್ರಮವಾಗಿ ತಾಲ್ಲೂಕು ಮಟ್ಟದ ಸರಕಾರೀ ಕಚೇರಿಗಳಿಂದ ಇಂಗ್ಲಿಷ್ ಬೆರಳಚ್ಚು ಯಂತ್ರಗಳನ್ನು ಹಿಂತೆಗೆದುಕೊಳ್ಳಲಾಗುತ್ತಿದೆ. ಮೊದಲ ಹಂತದಲ್ಲಿ ಧಾರವಾಡ, ಚಿತ್ರದುರ್ಗ, ರಾಯಚೂರು ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳ ತಾಲೂಕು ಕಚೇರಿಗಳ ಇಂಗ್ಲಿಷ್ ಬೆರಳಚ್ಚು ಯಂತ್ರಗಳ ಸಂಖ್ಯೆಯನ್ನು ಮುಂಬರುವ ತಿಂಗಳುಗಳಲ್ಲಿ ಅರ್ಧಕ್ಕಿಳಿಸಲಾಗುವುದು.

ತಾಲೂಕು ಮಟ್ಟದ ಸರಕಾರೀ ಕಚೇರಿಗಳಲ್ಲಿ ೨೦೦೦ ಇಂಗ್ಲಿಷ್ ಬೆರಳಚ್ಚು ಯಂತ್ರಗಳಿವೆ ಎಂದು ಅಂದಾಜು ಮಾಡಲಾಗಿದೆ.

—ಪತ್ರಿಕಾ ವರದಿ.

o o

ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಯಾರೇ ಆಗಲಿ ಬಹುಮತಕ್ಕೆ ತಲೆ ಬಾಗಲೇಬೇಕು ಮತ್ತು ಇಂದಿರಾ ಕಾಂಗ್ರೆಸ್ಸನ್ನು ಬೆಂಬಲಿಸಬೇಕು.

—ವೀರೇಂದ್ರ ಪಾಟೀಲ

o o

ಜನತಾ ಪಕ್ಷ ಜನರಿಗೆ ದ್ರೋಹವೆಸಗಿದೆ. ಅದು ಜನರ ಆಶೋತ್ತರಗಳಿಗೆ ಸ್ಪಂದಿಸಲಿಲ್ಲ. ತಮಗೆ ಮತಗಳನ್ನು ತಂದುಕೊಟ್ಟ ಆಶ್ವಾಸನೆಗಳನ್ನು ಗೌರವಿಸಲಿಲ್ಲ. ತನ್ನ ಘೋಷಿತ ಉದ್ದೇಶಗಳಿಗೆ ಅಪ್ರಾಮಾಣಿಕವಾದ ಸಂಘಟನೆಯಲ್ಲಿ ನಾನು ಇರಲಾರೆ.

—ಮೃಣಾಲ್ ಗೋರೆ, "ಆನ್‌ಲುಕರ್."

ಜೆ. ಪಿ ನೆನಪು:

ಒಂದು ಚಾಲಕಶಕ್ತಿ

ರಾಜಕೀಯದೊಂಬರಾಟಗಳಿಂದ ಬೇಸತ್ತು ಹೋಗುತ್ತಿದ್ದ ಈ ದೇಶದ ಜನರಿಗೆ, ತನ್ನ ಅಸ್ತಿತ್ವಮಾತ್ರದಿಂದಲೇ ನೆಮ್ಮದಿ ಉಂಟು ಮಾಡುತ್ತಿದ್ದಆಪ್ತ ವ್ಯಕ್ತಿಯೊಬ್ಬ ಕಣ್ಮರೆಯಾಗಿ ಹೋದ. ಸಂಧಿಸಾಧಕ ರಾಜಕಾರಣಿಗಳಿಂದ ವಂಚನೆಗೊಳಗಾದ ಜೆ. ಪಿ. ಹಾಗೂ ಭಾರತದ ಜನಸಾಮಾನ್ಯರು ಪರಸ್ಪರರನ್ನು ಸಾಂತ್ವನಪಡಿಸುವಷ್ಟು ನಿಕಟವಾಗಿದ್ದರು.


ಸಮಾಜದ ಕಟ್ಟಕಡೆಯ ಮನುಷ್ಯನವರೆಗೂ ತಮ್ಮ ಅಂತಃಕರಣವನ್ನು ಹರಿಯಬಿಟ್ಟಿದ್ದ ವ್ಯಕ್ತಿ, ಸ್ವಾತಂತ್ರ್ಯೋತ್ತರ ಭಾರತದಲ್ಲಿ–ಅದೂ ಸ್ವಾತಂತ್ರ್ಯಹೋರಾಟದ ಘಟಾನುಘಟಿಗಳು ರಾಜಕೀಯ ಚದುರಂಗದಾಟದಲ್ಲಿ ಮೈಮರೆತಿರುವಾಗ–ಜೆ. ಪಿಯವರೊಬ್ಬರೇ. ಅವರ ಸಾರ್ವಜನಿಕ ಜೀವನದ ಐವತ್ತು ವರ್ಷಗಳ ಹಗಲು–ರಾತ್ರಿಗಳು ಬಡವರ ದಯನೀಯ ಪರಿಸ್ಥಿತಿ ಕಂಡು ಮಿಡುಕುವುದರಲ್ಲೇ. ಕುದಿಯುವುದರಲ್ಲೇ ಕಳೆದು ಹೋದವು. ಪ್ಲಾಂಟೇಶನ್‌ಗಳಲ್ಲಿ, ಹೊಲಗಳಲ್ಲಿ ಆಳಾಗಿ ದುಡಿಯುವುದರಿಂದ ಹಿಡಿದು ಹೊಟೆಲ್‌ಗಳಲ್ಲಿ ಪಾತ್ರೆ ತೊಳೆಯುವ ಹಾಗೂ ವೇಟರ್ ಕೆಲಸಗಳನ್ನೂ ಮಾಡಿದ ಜೆ. ಪಿ ಕಡುಬಡತನದ ಎಲ್ಲ ಮಗ್ಗುಲುಗಳನ್ನೂ ಕಂಡವರು, ಅನುಭವಿಸಿದವರು. ದೇಶದ ಈ ಮೂಲ ಸಮಸ್ಯೆಯನ್ನು ಸದೆ ಬಡಿಯಬಲ್ಲಂತಹ ಯಾವ ಸಿದ್ಧಾಂತವನ್ನಾದರೂ ಅಪ್ಪಿಕೊಳ್ಳಲು ಸಿದ್ಧರಾಗಿದ್ದರೆಂಬುದಕ್ಕೆ ಅವರ ವಿಚಾರಯಾತ್ರೆಯಲ್ಲಿ ಕಂಡು ಬರುವ ಅನೇಕ ತಿರುವುಗಳು ಸಾಕ್ಷಿ ನುಡಿಯುತ್ತವೆ.

''ಮಾನಸಿಕ ತಾಕಲಾಟವೊಂದನ್ನು ಮೀರಿ ನಿಲ್ಲಬಲ್ಲರಾದರೆ, ಈ ದೇಶವನ್ನು ಕೊಂಡೊಯ್ಯಬಲ್ಲ ವ್ಯಕ್ತಿ ನೀವೊಬ್ಬರೇ'' ಎಂದು ಡಾ|| ಲೋಹಿಯಾ ಅವರು ಜೆ. ಪಿ ಗೊಮ್ಮೆ ಬರೆದಿದ್ದರು (೧೯೫೪). ಇಂತಹ ಅಸಾಧಾರಣ ಸಾಮರ್ಥ್ಯವುಳ್ಳ ನಾಯಕ ನೈತಿಕ ಮೌಲ್ಯಗಳನ್ನು ಗಾಳಿಗೆ ತೂರಿದ ಭಾರತದ ರಾಜಕೀಯ ವ್ಯವಸ್ಥೆಯ ವಿರುದ್ಧ ಹೋರಾಟ ಆರಂಭಿಸಿದಾಗ ತನ್ನ ಆಸೆಯ ಕಂಗಳನ್ನು ಬೀರಿದ್ದು ಯುವಜನರೆಡೆಗೆ. ಹದಗೆಟ್ಟು ಹೋಗಿದ್ದ ದೇಶದ ಸ್ಥಿತಿಯ ವಿರುದ್ಧ ಯುವಶಕ್ತಿ ಒಂದು ಪರಿಣಾಮಕಾರೀ ಅಸ್ತ್ರ ಎಂದು ಜೆ. ಪಿ ಬಗೆದರು.

"ಸಂಪೂರ್ಣ ಕ್ರಾಂತಿ"ಯ ಕಹಳೆಯೂದಿದಾಗ ಜೆ. ಪಿ. ಯವರ ಹಿಂದೆ ದೇಶದ ಯುವಜನರೆಲ್ಲ ಒಂದೇ ವ್ಯಕ್ತಿ ಎಂಬಂತೆ ಎದ್ದು, ಸಿಡಿಯಲು ಸಿದ್ಧರಾದುದು ಗಾಂಧೀ ನಂತರದ ಭಾರತದಲ್ಲಿ ಒಂದು ರೋಚಕ ಘಟನೆ. ಭ್ರಷ್ಟಾಚಾರ, ಸ್ವಾರ್ಥ, ಸ್ವಜನಪಕ್ಷಪಾತ, ಅಧಿಕಾರ ಲಾಲಸೆ, ಜಾತೀಯತೆ, ನಿರುದ್ಯೋಗ, ಕೆಟ್ಟ ಸಂಪ್ರದಾಯಗಳು–ಇವೇ ಮೊದಲಾದ ಅನಿಷ್ಟಗಳ ವಿರುದ್ಧ ಅವರು ಸಂಘಟಿಸಿದ ಹೋರಾಟ ಇಡೀ ದೇಶವನ್ನೇ ಅವರಿಗೆ ಗೆದ್ದುಕೊಟ್ಟಿತು. ಈ ಗೆಲುವನ್ನು ಕೊಂಡೊಯ್ದು ಜೆ. ಪಿ ಜನತಾ ಪಕ್ಷದ ಉಡಿಗೆ ಹಾಕಿದರು. (ಆನಂತರದ ಕಥೆ ಎಲ್ಲರಿಗೂ ಗೊತ್ತೇ ಇದೆ).

ಭ್ರಷ್ಟ ರಾಜಕೀಯ ವ್ಯವಸ್ಥೆಯ ಪಾಲಿಗೆ ಸಿಂಹಸ್ವಪ್ನರಾಗಿದ್ದ ಜೆ ಪಿ ತುರ್ತು ಪರಿಸ್ಥಿತಿ ಧೂಳೀಪಟವಾದ ನಂತರ ಆರೋಗ್ಯದಿಂದ್ದಿದ್ದರೆ ೧೯೭೭ರ ನಂತರದ ರಾಜಕೀಯ ವಿದ್ಯಮಾನಗಳು ಸಂಭವಿಸುತ್ತಿರಲಿಲ್ಲ. ತಾವು ಕಂಡ ಅನೇಕ ಕನಸುಗಳನ್ನು ಅವರು ತಮ್ಮ ಹಿಂದೆ ಬಿಟ್ಟುಹೋಗಿದ್ದಾರೆ. ಅವರೀಗ ನಮ್ಮ ನಡುವೆ ಇಲ್ಲವೆಂಬ ಕಾರಣಕ್ಕಾಗಿ ರಾಷ್ಟ್ರದ ಪ್ರಗತಿಪರ ಶಕ್ತಿಗಳು ಹತಾಶರಾಗಬೇಕಾದ ಕಾರಣವೇ ಇಲ್ಲ ಜೆ. ಪಿ ಯವರದು ತಾವು ಹೋದನಂತರವೂ ದೇಶ ಬದುಕಬೇಕು, ಮುನ್ನಡೆಯಬೇಕು ಎಂದು ಬಯಸಿದ ಜೀವ. ಅವರು ಪ್ರತಿಪಾದಿಸಿದ ಮೌಲ್ಯಗಳಿಗಾಗಿ ದುಡಿಯುವ, ಅವರು ಹಾಕಿಕೊಟ್ಟ ಆದರ್ಶಗಳನ್ನು ಅನುಸರಿಸುವ ಪಣ ತೊಡುವುದರಿಂದ ಮಾತ್ರ ನಾವು ಅವರನ್ನು ಗೌರವಿಸಬಲ್ಲೆವು. ಈ ದಿಸೆಯಲ್ಲಿ ನಮ್ಮ ಪಾಲಿಗೆ ಅವರ ನೆನಪೇ ಚಾಲಕ ಶಕ್ತಿ ಎನಿಸೀತು.

—ಎಂ. ಆರ್. ಶಿವಣ್ಣ



"....ಮುಚ್ಚಿದ ಬಾಗಿಲುಗಳ ಹಿಂದೆ ಕುಳಿತು ನಾಯಕತ್ವ ಒದಗಿಸುವವರೊಡನೆ ನಾನೆಂದೂ ಸೇರಿಕೊಂಡಿರಲಿಲ್ಲವೆಂದು ಇತಿಹಾಸವು ಎಂದಾದರೂ ಹೇಳದಿದ್ದೀತೇ?......"

—ಜೆ. ಪಿ.

ತರುಣ ಲೋಹಿಯಾವಾದಿಗಳು


ವಿಭಿನ್ನ ಕಾರಣಗಳಿಗಾಗಿ ಹರಿದು ಹಂಚಿ ಹೋಗಿರುವ ರಾಜ್ಯದ ಲೋಹಿಯಾವಾದಿಗಳು ಒಂದು ಸ್ಪಷ್ಟ ತಾತ್ವಿಕ ತಳಹದಿಯ ಮೇಲೆ ಮತ್ತು ನಿರ್ದಿಷ್ಟ ಕಾರ್ಯಕ್ರಮಗಳ ಗುರಿಯೆಡೆಗೆ ಸಂಘಟಿತರಾಗುವ ಒಂದು ಪ್ರಯತ್ನವಾಗಿ "ಕರ್ನಾಟಕ ತರುಣ ಲೋಹಿಯಾವಾದಿಗಳ ಸಮ್ಮೇಳನ"ವನ್ನು ಕರೆಯಲಾಗಿತ್ತು. ಸಮ್ಮೇಳನಕ್ಕೆ ರಾಜ್ಯದ ವಿವಿಧ ಭಾಗಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು.

ಕಿಷನ್ ಪಟ್ನಾಯಕ್ ಅವರು ಪ್ರಮುಖ ಭಾಷಣಮಾಡಿ ಸಮಾಜವಾದಿ ಆಂದೋಲನವನ್ನು ಮುಂದುವರಿಸಿಕೊಂಡು ಹೋಗಲು ಒಂದು ಸಂಘಟನೆಯ, ಅಗತ್ಯವನ್ನು ಒತ್ತಿ ಹೇಳಿ ಸೈದ್ಧಾಂತಿಕ ಸ್ಪಷ್ಟತೆಯ ಅಭಾವ, ದೀರ್ಘಾವಧಿ ಮಾರ್ಗೋಪಾಯದ ಕೊರತೆ ಹಾಗೂ ಕನಿಷ್ಟ ಶಿಸ್ತಿನಿಂದ ಕೂಡಿದ ಸಂಘಟನೆಯಿಲ್ಲದ್ದು ಇದುವರೆಗಿನ ಸಮಾಜವಾದಿ ಆಂದೋಲನದ ವೈಫಲ್ಯವೆಂದು ಗುರ್ತಿಸಿ, ಮುಂದೆ ಈ ನ್ಯೂನತೆಗಳನ್ನು ಸರಿಪಡಿಸಿಕೊಂಡು ಸಮಾಜವಾದಿ ಚಳವಳಿಯನ್ನು ಮುಂದುವರಿಸಿಕೊಂಡು ಹೋಗಬೇಕೆಂದು ಕರೆ ನೀಡಿದರು. ಸಭೆಯ ಅಧ್ಯಕ್ಷತೆಯನ್ನು ಶ್ರೀಮತಿ ನಿರ್ಮಲಾ ರಾಮದಾಸ್ ವಹಿಸಿದ್ದರು.

'ಶೂದ್ರ ಮತ್ತು ಅಸ್ಪೃಶ್ಯರ' ಸಂಬಂಧದ ಬಗ್ಗೆ ಚರ್ಚೆಯನ್ನೆತ್ತಿದ ಬಿ. ರಾಜಣ್ಣ ಅವರು ಅಸ್ಪೃಶ್ಯರಿಗೆ ಮೊದಲ ಶತ್ರು ಪುರೋಹಿತಶಾಹಿಯಾಗಿದ್ದರೂ ಶೂದ್ರ ಊಳಿಗಮಾನ್ಯತೆ ನಿರ್ಲಕ್ಷಿಸಲಾಗದಂಥ ಒಂದು ವಾಸ್ತವ ಕ್ರೌರ್ಯ. ಇದನ್ನು ಗಮನಿಸಿದ ಹೊರತು ಸಮ್ಮೇಳನದ ಗುರಿ ಈಡೇರಲಾರದೆಂದು ಅಭಿಪ್ರಾಯಪಟ್ಟರು. ರಾಜಣ್ಣನವರ ಲೇಖನದ ಬಗ್ಗೆ ಚರ್ಚೆ ಮುಂದುವರೆದು ದಲಿತ ಸಂಘರ್ಷ ಸಮಿತಿ ಆರಂಭವಾಗುವುದಕ್ಕೆ ಸಮಾಜವಾದಿ ಚಳುವಳಿಯ ನಿಷ್ಕ್ರಿಯತೆಯೇ ಕಾರಣ ಎಂಬ ಅಭಿಪ್ರಾಯ ವ್ಯಕ್ತವಾಯಿತು. ಮತ್ತು ಲೋಹಿಯಾವಾದಿಗಳು ಹಾಗೂ ದಲಿತರ ನಡುವೆ ಯಾವುದೇ ತಾತ್ವಿಕ ಭಿನ್ನಾಭಿಪ್ರಾಯ ಇಲ್ಲ, ಒಂದು ಮತ್ತೊಂದಕ್ಕೆ ಪೂರಕವಾಗಿ ಕೆಲಸ ಮಾಡುವ ಸಾಧ್ಯತೆಗಳನ್ನು ಗುರ್ತಿಸಲಾಯಿತು.

"ಜಾತಿ ಒಂದು ರಾಜಕೀಯ ಶಕ್ತಿಯಾಗಿ" ಎಂಬುವರ ಬಗ್ಗೆ ಮಾತನಾಡಿದ ಪ್ರೊ|| ಎಂ. ಡಿ. ನಂಜುಂಡಸ್ವಾಮಿ ಅವರು ಅಂತರ್ರಾಷ್ಟ್ರೀಯ ಆರ್ಥಿಕ ಚೌಕಟ್ಟಿನಲ್ಲಿ ಬ್ರಾಹ್ಮಣ, ಶೂದ್ರ ಮತ್ತು ದಲಿತ ಪರಿಕಲ್ಪನೆಗಳನ್ನು ಅರ್ಥೈಸಿದರು. ದಲಿತರ ಶೋಷಣೆಗೆ ರಾಷ್ಟ್ರೀಯ ಚೌಕಟ್ಟಿನಲ್ಲಿ ಆರ್ಥಿಕ ಸ್ಥಿತಿ ಎಷ್ಟು ಕಾರಣವೋ ಅಂತರ್ರಾಷ್ಟ್ರೀಯ ಆರ್ಥಿಕ ಸಂಬಂಧಗಳು ಅಷ್ಟೇ ಕಾರಣ ಎಂದು ವಿಶ್ಲೇಷಿಸಿದರು. ಕೈಗಾರಿಕಾ ಉತ್ಪನ್ನಗಳ ಬೆಲೆ ಮತ್ತು ಕೃಷಿ ಉತ್ಪನ್ನಗಳ ಬೆಲೆ ನಡುವೆ ಸಮನ್ವಯ ಏರ್ಪಟ್ಟಾಗ ಶೂದ್ರ ಮತ್ತು ದಲಿತರ ನಡುವಣ ಆರ್ಥಿಕ ಸಂಬಂಧ ಉತ್ತಮಗೊಳ್ಳುವ ಸಾಧ್ಯತೆಯನ್ನು ಉದಾಹರಿಸಿದರು. ಈ ಸಭೆಯ ಅಧ್ಯಕ್ಷತೆಯನ್ನು ರಾಜಪ್ಪ ಹಡಪದ ವಹಿಸಿದ್ದರು.

ಮರುದಿನ ಬೆಳಗಿನ ಸಮಾವೇಶದಲ್ಲಿ ನಾಗಭೂಷಣ ಅವರು "ಮುಂದಿನ ಸಂಘಟನೆಯಲ್ಲಿ ವಹಿಸಬೇಕಾದ ಎಚ್ಚರಿಕೆಗಳು" ಎಂಬ



ಸಂಕ್ಷಿಪ್ತ ಲೇಖನ ಮಂಡಿಸಿ, ಸಮಾಜವಾದಿ ಆಂದೋಲನ ದಿಕ್ಕೆಟ್ಟು ಅವನತಿಗೊಳ್ಳಲು ಸಿದ್ಧಾಂತದ ವಿಷಯದಲ್ಲಿ ಮಾಡಿಕೊಂಡ ರಾಜಿಗಳು ಹಾಗೂ ಸಂಘಟನೆಯ ಹಂತದಲ್ಲಿ ಕೆಲವು ನಾಯಕರು ತೋರಿದ ಬೇಜವಾಬ್ದಾರಿತನಗಳೇ ಕಾರಣಗಳು ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿದರು. ಸಮಾಜವಾದೀ ಪಕ್ಷ ಕಂಡ ಅನೇಕ ಒಡಕುಗಳಲ್ಲಿ ಈ ಎರಡು ಅಂಶಗಳನ್ನು ಗುರುತಿಸಿದರು

ಆರ್. ಪಿ. ವೆಂಕಟೇಶಮೂರ್ತಿ ಅವರು "ನಮ್ಮ ಮುಂದಿನ ಸಂಘಟನೆ ಸ್ವರೂಪ"ದ ಬಗ್ಗೆ ಮಾತನಾಡಿದರು. ಸಂಘಟನೆಯನ್ನು ವ್ಯಾಪಕವಾಗಿ ಬೆಳೆಸುವ ದೃಷ್ಟಿಯಿಂದ ಸೈದ್ಧಾಂತಿಕವಾಗಿ ತಯಾರಾದ ಕಾರ್ಯಕರ್ತರು, ಸಂಪನ್ಮೂಲಗಳ ಕ್ರೋಢೀಕರಣ ಸಮಾಜವಾದಿ ಸಾಹಿತ್ಯದ ಪ್ರಕಟಣೆ ಮತ್ತು ಅಧ್ಯಯನ ಶಿಬಿರಗಳು ಈ ಅಂಶಗಳ ಕಡೆ ಗಮನ ಸೆಳೆದರು.

ನಿಸಾರ್ ಅಹಮದ್ ಅವರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಪ್ರತಿನಿಧಿಗಳ ಸಭೆಯಲ್ಲಿ ಭಾಗವಹಿಸಿದ್ದ ಹಲವು ಪ್ರತಿನಿಧಿಗಳು ತಮ್ಮ ಅಭಿಪ್ರಾಯ ಮಂಡಿಸಿದರು. ಮುಂದಿನ ಸಂಘಟನೆಯ ಹೆಸರಿನ ಬಗ್ಗೆ ವ್ಯಾಪಕ ಚರ್ಚೆ ನಡೆದು ಹಿಂದೆ ಇದ್ದ "ಸಮಾಜವಾದಿ ಯುವಜನ ಸಭಾ" ಹೆಸರನ್ನು ಇಟ್ಟುಕೊಳ್ಳಬೇಕೆಂದು ಒಪ್ಪಿಕೊಳ್ಳಲಾಯಿತು.

ರಾಜ್ಯವನ್ನು ನಾಲ್ಕು ವಲಯಗಳನ್ನಾಗಿ ವಿಂಗಡಿಸಿ ಸದ್ಯಕ್ಕೆ ಪ್ರತಿ ವಲಯಕ್ಕೆ ಒಬ್ಬೊಬ್ಬ ಸಂಚಾಲಕರನ್ನು ನೇಮಿಸಬೇಕೆಂದೂ, ಸಂಚಾಲಕರು ಜಿಲ್ಲಾ ಮತ್ತು ತಾಲ್ಲೂಕು ಸಮಿತಿಗಳನ್ನು ರಚಿಸಬೇಕೆಂದೂ, ತೀರ್ಮಾನಿಸಲಾಯಿತು.

"ಸಮಾಜವಾದಿ ಯುವಜನ ಸಭಾ"ದ ರಾಜ್ಯ ಸಂಘಟಕರನ್ನಾಗಿ ಡಾ|| ಎ. ಸಿ. ಮುನಿವೆಂಕಟೇಗೌಡ, ಸಂಘಟಕಿಯಾಗಿ ಸುಚೇತಾ ಚಿಂದಯ್ಯ ಅವರನ್ನು ಹಾಗೂ ವಲಯ ಸಂಚಾಲಕರುಗಳನ್ನಾಗಿ ಎಸ್. ಎನ್. ಮಂಜುನಾಥ ದತ್ತ, ರವಿವರ್ಮ ಕುಮಾರ್, ಹೊ. ಮ. ಪಂಡಿತಾರಾಧ್ಯ ಹಾಗೂ ರಾಜಪ್ಪ ಹಡಪದ ಅವರನ್ನು ಆರಿಸಲಾಯಿತು.

ಸಮಾಜವಾದೀ ಯುವಜನ ಸಭಾದ ಸದಸ್ಯರು ತಮ್ಮ ವರಮಾನದ ಶೇ. ೫ರಷ್ಟನ್ನು ಯುವಜನ ಸಭಾಗೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

ಸೈಟು ಆಕ್ರಮಣ ವಿರುದ್ಧ ಹೋರಾಟ

ನಂಜನಗೂಡು ತಾಲೂಕಿನ ತಗಡೂರು ಗ್ರಾಮದಲ್ಲಿ ದಲಿತರಿಗೆ ಮಂಜೂರಾಗಿದ್ದ ನಿವೇಶನಗಳು ಅವರಿಗೆ ದಕ್ಕದಂತೆ ಮಾಡಲು ಪಟ್ಟಭದ್ರ ಹಿತಾಸಕ್ತಿಗಳು ನಡೆಸಿರುವ ಕುಟಿಲ ಕಾರಸ್ಥಾನಗಳ ವಿರುದ್ಧ ದಲಿತ ಸಂಘರ್ಷ ಸಮಿತಿ ತೀವ್ರವಾದ ಹೋರಾಟ ಕೈಕೊಂಡಿದೆ.

ಮಂಡ್ಯದಲ್ಲಿ ಚರಣ್

ಚುನಾವಣಾ ಪ್ರಚಾರಕ್ಕಾಗಿ ದೇಶಾದ್ಯಂತ ಪ್ರವಾಸ ಕೈಕೊಂಡಿರುವ ಪ್ರಧಾನಿ ಚರಣಸಿಂಗ್ ಅವರು ನವಂಬರ್ ೩ರಂದು ಮಂಡ್ಯದಲ್ಲಿ ಸಾರ್ವಜನಿಕ ಸಭೆಯೊಂದನ್ನುದ್ದೇಶಿಸಿ ಮಾತನಾಡಿದರು.

ಪ್ರಧಾನ ಮಂತ್ರಿಗಳು ತಮ್ಮನ್ನು ಕುರಿತ ಅಪಪ್ರಚಾರಗಳಿಗೆ ಉತ್ತರ ನೀಡಿದರು. ತಮ್ಮನ್ನು ಬಣ್ಣಿಸಲಾಗುತ್ತಿರುವಂತೆ ತಾವು ಹರಿಜನವಿರೋಧಿಗಳಲ್ಲ, ಶ್ರೀಮಂತ ರೈತರ ಪಕ್ಷಪಾತಿ ಅಲ್ಲ ಎಂದರು. ಕಂದಾಯ ಮಂತ್ರಿಯಾಗಿದ್ದಾಗ ತಾವು ಹರಿಜನ ಹಾಗೂ ಬಡಜನರ ಏಳಿಗೆಗಾಗಿ ಜಾರಿಗೆ ತಂದಿದ್ದ ಕಾನೂನುಗಳನ್ನು ಸಭೆಯ ಮುಂದಿಟ್ಟರು.

ತಮ್ಮನ್ನು ಪ್ರಧಾನಿಪದವಿಯಿಂದ ಉಚ್ಚಾಟಿಸಲು ಶ್ರೀಮಂತರು ಹಾಗೂ ಪತ್ರಿಕೆಗಳ ಮಾಲೀಕರ ಪ್ರಯತ್ನಗಳನ್ನು ಚರಣಸಿಂಗ್‌ರು ಕಟುವಾಗಿ ಟೀಕಿಸಿದರು.

ಮಾಜಿ ಉಸ್ತಾದರೊಬ್ಬರ ಹಾಲಿ ಜೀವನ

....ಅವರ ಯಾವ ಅಂಗವೂ ಅವರು ಒಂದಾನೊಂದು ಕಾಲದಲ್ಲಾದರೂ ಕುಸ್ತಿಯ ಪಟುವಾಗಿದ್ದರು ಎಂಬುದನ್ನು ನನಗೆ ರುಜುವಾತು ಪಡಿಸಲಿಲ್ಲ....

ದೇವನೂರ ಮಹಾದೇವ

ಬನ್ನಿಕುಪ್ಪೆ ಎಂಬ ಊರು ಮೈಸೂರು–ಹುಣಸೂರು ರಸ್ತೆಯಲ್ಲಿ ನಿಂತು ನೋಡಿದಾಗ ಬಹಳ ಸಂತೃಪ್ತವಾಗಿರುವಂತೆ ಕಾಣುತ್ತದೆ; ಹಸುರಾಗಿದೆ. ಊರಿನ ಒಳಹೊಕ್ಕು ಹರಿಜನರು ಮತ್ತು ನಾಯಕಕೋಮಿನ ಬೀದಿಗಿಳಿದಾಗಲೇ ಬಡತನ ಮತ್ತು ಕೊಳುಕುತನ ನಮ್ಮ ಕಣ್ಣಿಗೆ ರಾಚುವುದು. ಹರಿಜನ ಮತ್ತು ನಾಯಕ ಕೋಮಿನ ಬೀದಿಗಳು ಗಲೀಜು ತುಂಬಿಕೊಂಡು ವಕ್ರವಾಗಿದ್ದು ಕೆಲವು ಮನೆಗಳೋ ಅರ್ಧ ಕುಸಿದು ಪೂರ್ತ ಕುಸಿಯಲು ಕಾಯುತ್ತಿರುವಂತೆ ಕಾಣಿಸುವುದು. ಮತ್ತು ಪುರಾತನ ಕಾಲದಿಂದಲೂ ಆ ಮನೆಗಳು ಜೀವಿಸಿದಂತಿದ್ದು ಗಾಳಿ ಮಳೆ ಬಿಸುಲಿನ ಹೊಡೆತವನ್ನು ಸಹಿಸೀ ಸಹಿಸಿ ಈಗ ಅವೇ ಬೇಯುತ್ತ ಉರಿಯುತ್ತ ನಿಂತಂತೆ ಕಾಣುತ್ತವೆ.

ಮೇಲಿನಂತಹದೇ ಒಂದು ಮನೆಯಲ್ಲಿ ಹರಿಜನರ ಬೀದಿಯಲ್ಲಿ ಕೆ. ನಿಂಗಯ್ಯ ಇರುವರು. ವಯಸ್ಸು ೬೦ನ್ನು ಮುಟ್ಟುತ್ತಲಿದೆ. ಹೆಂಡತಿ ಮಾದಮ್ಮನಿಗೆ ವಯಸ್ಸು ೪೫ ಇರಬಹುದು. ಇವರಿಗೆ ಅದೃಷ್ಟಕ್ಕೆ ಇಬ್ಬರೇ ಮಕ್ಕಳು, ಆದರೂ ಸಣ್ಣವು. ಒಬ್ಬ ಜನರ–ಸ್ಕೂಲ್‌ಗೆ ಹೋದವನಲ್ಲ, ಇವನನ್ನು ಜೀತಕ್ಕೆ ಇರಿಸಿದ್ದು ಬಿಡಿಸಿಬಿಟ್ಟರು. ಇನ್ನೊಂದು ಹುಡುಗ ಐದು ವರ್ಷದ ಸ್ವಾಮಿಯನ್ನು ಶಿಶುವಿಹಾರಕ್ಕೆ ಕಳಿಸುತ್ತಿರುವರು.

ಈ ಸಂಸಾರ ಜೀವಿಸುತ್ತಿದ್ದ ಮನೆತುಂಬಾ ಒಂದ್ಸಲ ಕಣ್ಣಾಡಿಸಿದೆ. ಒಂದೇ ನೋಟಕ್ಕೆ ಇಡೀ ಹಟ್ಟಿ ಒಳಗಲನ್ನು ನೋಡಬಹುದಿತ್ತು. ರಾತ್ರಿಯಾಗಿದ್ದರಿಂದ ಒಂದು ಸೀಮೆ ಎಣ್ಣೆ ದೀಪ ಉರಿಯುತ್ತಿದ್ದು ಒಂದು ಅಂಕಣವಷ್ಟಿದ್ದ ಆ ರೂಮಿಗೆ ಆ ಬೆಳುಕೇ ಸಾಕಾಗುವಷ್ಟಿತ್ತು. ಅಂದರೆ ಆ ರೂಮು ಅಷ್ಟಗಲವಿತ್ತು. ಆ ರೂಮಿನ ನಡುಭಾಗದಲ್ಲಿ ಒಂದು ಮಂಡಿ ಎತ್ತರದ ತುಂಡು ಗೋಡೆಯೊಂದನ್ನು ಎತ್ತರಿಸಿದ್ದು ಆ ಕಡೆ ಅಡುಗೆ ಕೋಣೆ ಈ ಕಡೆ ಮಲುಗುವ ಕೂರುವ ಇನ್ನಿತರ ಅನುಕೂಲಕ್ಕೆ ಇದ್ದಂಥ ಜಾಗವಾಗಿತ್ತು. ಆ ಅಡುಗೆ ಕೋಣೆಯಲ್ಲಿ ನಾಕಾರು ಮಣ್ಣಿನ ಮಡುಕೆ, ಒಂದು ಬಿಂದಿಗೆ, ಒಂದು ಚೆಂಬು, ಒಂದೆರಡು ಅಲ್ಯೂಮಿನಿಯಂ ಲೋಟ, ಸೌಟಿ ಕಡ್ಡಿ–ಇಷ್ಟಿದ್ದವು. ಇವಕ್ಕಿಂತೂ ಹೆಚ್ಚಿಗೆ ಕಂಡು ಬರಲಿಲ್ಲ. ಹಾಗೂ ಆ ಮಡಕೆಗಳಲ್ಲಿ ಒಳಗೆ ಏನಿದ್ದುವು ಎಂಬುದೂ ಗೊತ್ತಾಗಲಿಲ್ಲ. ಆ ಕೋಣೇಲಿ ಒಲೆ ಮುಂದೆ ಬೆಂಕಿ ಉರುಬುತ್ತ ಮನೆಯ ಯಜಮಾನಿ ಮಾದಮ್ಮ ಕೂತಿದ್ದಳು. ಆಕೆ ಸಣ್ಣಗೆ ಕಡ್ಡಿಯಂತಿದ್ದು ಆಕೆಯ ಮಾತು ನೆನಪಲ್ಲಿ ಉಳಿಯುವಂತೆ ಉಂಡಂಥ ಕಷ್ಟ ಸಾಗರದ ಸಾರಾಂಶದಂತೆ ಇದ್ದುವು. ಆಕೆ ಅಂದಳು : 'ಈಗ ಕೂಲಿ ಸಿಕ್ಕೊ ಕಾಲವಾದ್ದರಿಂದ ನಮ್ಮ ಮನ ಜಲೆ ಉರೀತಾ ಇದೆಕನ್ನಿ ಸ್ವಾಮಿ'.

ನಾನು ಮತ್ತು ಮನೆಯ ಯಜಮಾನ ಈ ಕಡೆ ಜಾಗದಲ್ಲಿ ಕೂತಿದ್ದೆವು. ನಾನು ಕೂರಲು ಒಂದು ಚಾಪೆಯನ್ನು ಹಾಸಿದ್ದರು. ಏನಾದರೂ ಇನ್ನೊಂದು ಚಾಪೆ ಇದೆಯಾ ಎಂದು ನಾನು ಪ್ರಜ್ಞಾಪೂರ್ವಕವಾಗಿ ನೋಡೂ ಕಂಡು ಬರಲಿಲ್ಲ. ಗೋಡೆಯ ಹಗ್ಗದುರಿಯು ಒಂದೆರಡು ಅಂಗಿ ಚಡ್ಡಿ, ಬಹುಶಃ ಅರ್ಧದಷ್ಟಿದ್ದ ಸೀರೆ ಎರಡು ರವುಕೆ ಒಂದು ದುಪ್ಪಟಿ ಒಂದು ಗೋಣಿ ಚೀಲವನ್ನು ಈಜಿಯಾಗಿ ಹೊತ್ತುಕೊಂಡಿತ್ತು. ಅಚ್ಚಲು ಇದ್ದು ಅಟ್ಟ ಸಾರು ಇರಬಹುದಾ ಅನ್ನಿಸಿ ನಾನು ಮೇಲಕ್ಕೆ ನೋಡಿದೆ. ಹೆಂಚುಗಳು ನಕ್ಕವು. ನನ್ನ ಪಕ್ಕದಲ್ಲಿದ್ದ ಟೇಪ ರಿಕಾರ್ಡರ್ ನೋಡ್ತ ಅವರ ಮಕ್ಕಳಿಬ್ಬರೂ ಕೂತಿದ್ದವು. ಅವು ಹಾಕಿದ್ದ ಅಂಗಿ ಚಡ್ಡಿ ಅನ್ನುವುವು ಅವರ ಅಪ್ಪನವುಗಳಂತೇ ಹರಿದಿದ್ದು ಹೊಲೆದು ತೇಪೆ ಹಾಕಲಾಗಿತ್ತು. ಅವಕ್ಕೆ ಬೇರೆ ಇನ್ನೊಂದು ಜೊತೆ ಇತ್ತೊ ಇಲ್ಲವೊ ಕೇಳಲು ನನಗೆ ಸಂಕೋಚವಾಯ್ತು. ಶ್ರೀ ನಿಂಗಯ್ಯನವರಿಗೆ ಈ ಮನೆಬಿಟ್ಟು ಬೇರೇನು ಆಸ್ತಿ ಎಂದು ಪ್ರಶ್ನಿಸಿದೆ. ಅವರ‍್ಕವರು—

'ಈ ಮನೇನು ನನ್ನದಲ್ಲ ಸ್ವಾಮಿ'

'ಅಂದ್ರೆ ನಿಮ್ಮದು ಮನೆ ಇಲ್ವ'

'ಇಲ್ಲ ಸ್ವಾಮಿ, ನಾವು ಬೇರೆಯವರ ಮನೇಲಿ ಇದ್ಕೊಂಡು ಬಂದಿದ್ದೀವಿ'

'ಬಾಡಿಗೆ ಕೊಡ್ತಾ ಇದ್ದೀರಾ ?'

'ಬಾಡಿಗೆ ಕೊಡೋಕೆ ನಮಗೆಲ್ಲಾದ್ದು ಸ್ವಾಮಿ. ಊರಿಗೊಂದು ಒಕ್ಕಲು ಬಂದವರಲ್ಲ ಅಂತ ಕೇರಿ ಮುಖ್ಯಸ್ಥರು ಮುಫತ್ತು ಕೊಡಿಸಿ ಕೊಟ್ಟವರೆ....'

ಆಗಲೇ ನನಗೆ ತಿಳಿದದ್ದು–ಇವರು ಬನ್ನಿಕುಪ್ಪೆಯವರಲ್ಲ,ಮೂಲತಃ ಮೈಸೂರಿನ ಅಶೋಕಪುರಂನವರು. ಅಂತ ಅವರು ಇಲ್ಲಿಗೆ ಬಂದು ನೆಲೆಗೊಂಡು ಆರೇಳು ವರ್ಷಗಳಾಗಿದ್ದುವು. ಸಣ್ಣವರಿದ್ದಾಗ ಕುಸ್ತಿ ಅಂತ ನಿಂತು ಸ್ಕೂಲಿಗೆ ಹೋಗಲಿಲ್ಲ. ರುಜುಮಾಡಲು ಬಾರದಿದ್ದರೂ ಅವರ

ಹೆಸರಿಗೆ ಇನ್ಸಲ್. ಕೆ. ನಿಂತಿವೆ. ಮೈಸೂರು ಮಹಿಮೆ ಇರಬಹುದು. ಮೈಸೂರಲ್ಲಿ ಜೀವನ ಸಾಗಿಸುವುದು ದುಸ್ತರವಾದಾಗ ಹೆಂಡ್ತಿ ಮಕ್ಕಳನ್ನು ಕಟ್ಟಿಕೊಂಡು ಬನ್ನಿಕುಪ್ಪೆಗೆ ಕುಸ್ತಿ ಕಲಿಸಿ ಜೀವನ ಸಾಗಿಸುವ ಅಂದುಕೊಂಡು ಬಂದರು. ಶ್ರೀ ನಿಂಗಯ್ಯ ಕುಸ್ತಿಯ ಉಸ್ತಾದ್ ಆಗಿದ್ದರು ಎಂದಾಗ ನಾನು ಅವರ ಅಂಗಾಂಗಗಳನ್ನು ಉದ್ದೇಶಪೂರ್ವಕವಾಗಿ ನೋಡಿದೆ. ಅವರ ಯಾವ ಅಂಗವೂ ಅವರು ಒಂದಾನೊಂದು ಕಾಲದಲ್ಲಾದರೂ ಕುಸ್ತಿಯ ಪಟುವಾಗಿದ್ದರು ಎಂಬುದನ್ನು ನನಗೆ ರುಜುವಾತು ಪಡಿಸಲಿಲ್ಲ, ಬಡತನವು ಅವರ ಕುಸ್ತಿಯ ಅಂಗಾಂಗಳನ್ನು ನಿರ್ದಯವಾಗಿ ಊಟ ಮಾಡಿದ್ದಿರಬಹುದು. ಆ ಮಾಜಿ ಕುಸ್ತಿಯ ದೇಹದಲ್ಲಿ ಈಗ ದೈನ್ಯತೆ ಮತ್ತು ನಿಟ್ಟುಸುರು ಉಳಿದಿದ್ದುವು. ನಾನು ನಿಟ್ಟುಸುರು ಬಿಟ್ಟು ಒಂದು ಸ್ಟುಪಿಡ್ ಪ್ರಶ್ನೆ ಹಾಕಿದೆ–'ಈಗಲೂ ಯಾಕೆ ನೀವು ಕುಸ್ತಿ ಕಲ್ಸಿಯೇ ಜೀವನ ಸಾಗಿಸಬಾರದು'? ದೇವರ ದಯದಿಂದ ಅವರು ನಗಲಿಲ್ಲ. ಅವರು ಅಂದರು– 'ಈಗ ನನ್ನ ಕೈಲಿ ಸಾಗಬೇಡ್ವ ಸ್ವಾಮಿ, ಶಕ್ತಿ ಸಾಲಲ್ಲ. ಜನರೂ ಕೂಡ, ನಿಮಗೇನೆ ಏಟು ಪಾಟು ಬಿದ್ದಾತು ಸುಮ್ಕಿರಿ ಅಂತರೆ' ಅಂದರು. ಇನ್ನೊಂದು ನಿಟ್ಟುಸುರು ಬಿಡುವುದು ನನ್ನ ಪಾಲಿಗಾಯ್ತು. ಅವರು ತಾವು ಹಿಂದೆ ಕಲಿಸುತ್ತಿದ್ದ ಕುಸ್ತಿ ನೆನಪಿಗೆ ಬಿದ್ದರೇನೋ. ನನಗೆ ಮಾತಾಡಲು ಬಾಯಿ ನಿಂತ್ಹೋಗಿತ್ತು.

ಅವರು ಮಿಕಮಿಕ ಕಣ್ಬಿಡುತ್ತ ಕೂತಿದ್ದರು. ಕುಸ್ತಿ ಕಲಿಸುತ್ತಿದ್ದಾಗ ಅವರು ಹೊಟ್ಟೆಗೆ ಬಟ್ಟೆಗೆ ನೇರವಾಗಿದ್ದರು. ಜನಗಳೂ ಸಹ ಇವರನ್ನು ಗುರುಗಳು ಎಂದು ಪರಿಗಣಿಸಿ ಎರಡು ಹೊತ್ತಿನ ಊಟಕ್ಕೆ ತೊಂದರೆ ಆಗದಂತೆ ನೋಡಿಕೊಳ್ಳುತ್ತಿದ್ದರು. ಕುಸ್ತಿ ಕಲಿಸಲು ಕೈಸಾಗದಾಗ ಗಂಡ ಹೆಂಡತಿ ಕೂಲಿಗೆ ಇಳಿದರು. ಕೂಲಿ ಮತ್ತು ಎರಡು ಸಣ್ಣ ಮಕ್ಕಳನ್ನು ಬಿಟ್ಟರೆ ಇವರಿಗೆ ಬೇರೇನೂ ಇಲ್ಲ. ಇವರ ಹೆಂಡ್ತಿ ಮಾದಮ್ಮನ ಮಾತುಗಳಲ್ಲೇ ಹೇಳುವುದಾದರೆ—'ಕೂಲಿಗೆ ಹೋದ ಜಿನ ಇಟ್ಟು, ಇಲ್ಲದಿದ್ದ ಜಿನ ಇಲ್ಲ....'

ನನ್ನ ಪ್ರಶ್ನೆ : 'ಹಾಗಾದ್ರೆ ಕೂಲಿ ಸಿಗದ ದಿನಗಳಲ್ಲಿ ಏನ್ಮಾಡ್ತೀರಿ....'

'ಅತಾಪೆ ಕಸ್ಟ....'

'ಇದುವರ್ಗೂ ಏನ್ಮಾಡಿಕೊಂಡು ಬಂದ್ರಿ....?'

ಅವರ ಹೆಂಡ್ತಿ ಉತ್ತರಿಸಿದರು–'ನಾವ್ ಏನ್ಮಾನೆ ಮಾಡಕ್ಕಾದ್ದು ಸ್ವಾಮಿ........ ಹಸ್ಕಂಡು ಇರೋದು ಯಾರಾರು ಪುಣ್ಯಾತ್ಮರ ಮನೇಲಿ ಹಿಟ್ಟು ಗಿಟ್ಟು ಈಸ್ಕ ಬಂದು ಕಾಲ ತಳ್ಳೋದು....'

ಗಂಡ ಮುಂದುವರಿಸಿದರು–'ಹಿಂದೆ ನಮ್ಮ ಗುರುಗಳಾಗಿದ್ದವರು ಅಂದು ಕೊಂಡು ಸ್ವಲ್ಪ ಗಟ್ಟು ಮುಟ್ಟಾಗಿರುವವರು ಅಷ್ಟು ಇಷ್ಟು ಕರುಣೆ ಇಟ್ಟವರೆ ಸ್ವಾಮಿ'

ಬನ್ನಿಕುಪ್ಪೆ ಸುತ್ತ ಮುತ್ತ ಗದ್ದೆಗಳು ಇರುವುದರಿಂದ ಬೇರೆ ಬಂಜರು ಊರುಗಳಿಗಿಂತ ಈ ಕಡೆ ಕೂಲಿ ಸ್ವಲ್ಪ ಹೆಚ್ಚು ದಿನಗಳು ಸಿಗುತ್ತವೆ. ಬತ್ತ ರಾಗಿ ನಾಟಿ ಕುಯ್ಲಿನ ಕಾಲ ಕೂಲಿಸಿಗುವ ದಿನಗಳು. ಇದು ಬಿಟ್ಟರೆ ಬೇಸಿಗೆ ಪೂರ್ತ ಕೂಲಿ ಇಲ್ಲದೆ ಇರಬೇಕಾಗುತ್ತದೆ. ಬೇಸಿಗೇಲು ಚೂರು ಪಾರು ಅದು ಇದು ಕೆಲಸ ಸಿಗುವುದಾದರೂ ಅವರು ಕೊಟ್ಟಷ್ಟು ಇವರು ಈಸಿಕೊಂಡಷ್ಟು– ಹನ್ನೆರಡಾಣೆ ಆಗಬಹುದು, ಒಂದು ರೂಪಾಯಿ ಆಗಬಹುದು. ಹೆಚ್ಚೆಂದರೆ ಎರಡು ರೂಪಾಯಿ ಆಗಬಹುದು. ಆಗ ಅದಾದರೂ ಸಿಕ್ಕರೆ ಸಾಕು. ಅನಿಸುತ್ತದೆ ಅಂದರು. ವರ್ಷಪೂರ್ತ ಕೂಲಿ ಯಾವರೂ ಸಿಕ್ಕರೂ ಏನಿಲ್ಲದಿದ್ದರೂ ಊಟವಾಗುತ್ತದಲ್ಲ ಎನ್ನುವ ಸಮಾಧಾನ ಇವರದು. ಆದರೆ ಸತ್ಯ ಇರೋದೆ ಬೇರೆ.

ಇವರಿಗೆ ಈಗ ಜನತಾ ಮನೆ ಸಿಕ್ಕಿದೆ. ಅವಕ್ಕೆ ಗಿಲಾವ್ ಮಾಡಿಸಿಲ್ಲವಾದ್ದರಿಂದ ಇನ್ನೂ ಅಲ್ಲಿಗೆ ಹೋಗಿಲ್ಲ. ಅಲ್ಲಿಗೆ ಹೋದ ಮೇಲೆ ಇವರದೇ ಆದ ಒಂದು ಸ್ವಂತ ಮನೆ ಆದಂತಾಗುತ್ತದೆ. ಕೂಲಿಬಿಟ್ಟು ಮತ್ತಾವ ಉ ಪ ಕ ಸು ಬ ನ್ನೂ ಮಾಡದ ಈ ಸಂಸಾರ ಅಲ್ಲಿಗೆ ಹೋದ ಮೇಲೆ ಅನುಕೂಲವಾದರೆ ಕೋಳಿ ಕುರಿ ಆಡು ಸಾಕಬೇಕು ಅಂದುಕೊಂಡಿರುವರು. ಈ ಮನೆಯಲ್ಲಿ ಜಾಗವಿಲ್ಲ, ಜೊತೆಗೇ ಬೇರೆಯವರನು, ಹೆಚ್ಚಿಗೆ ನೀರು ಚಲ್ಲಿದರೂ 'ಎಲ್ಲಿ ಬಿಟ್ಟುಹೋಗಿ' ಎಂದು ಅನ್ನುತ್ತಾರೋ ಅನ್ನುವ ಭಯದಲ್ಲಿ ವಾಸಿಸುತ್ತಿರುವರು. ಜನತಾ ಮನೆ ಬಿಟ್ಟರೆ ಇವರಿಗೆ ಜೀತ ವಿಮೋಚನೆಯ ಹಣ ೫೦೦ರೂಪಾಯಿ ಸಿಕ್ಕಿದೆ. ಅದು ಸರಿಯಾದ ಟೈಮಲ್ಲಿ ಬೇಸಿಗೇಲಿ ಸಿಕ್ಕಿದ್ದರಿಂದ ಹೊಟ್ಟೆಗೆ ಬಳಸಿಕೊಂಡರು ಈ ಜೀತ ವಿಮೋಚನೆ ಸಾಲ ಯಾವ ರೀತಿಯದು ಎಷ್ಟು ಬಡ್ಡಿಯದು ಹೇಗೆ ತೀರಿಸಬೇಕು ಅದಾವುದೂ ಇವರಿಗೆ ತಿಳಿದಿಲ್ಲ. ಇದು ಬಿಟ್ಟರೆ ಇವರಿಗೆ ಮತ್ತಾವ ಸಾಲವೂ ಇಲ್ಲ. ಕೈಸಾಲ ಮಾಡಿದರೆ ಯಾವ ಮುಂಬಿನಲ್ಲಿ ತೀರಿಸಲು ನಮ್ಮ ಕೈಲಿ ಸಾಧ್ಯ ಎಂದು ಪ್ರಶ್ನಿಸಿದರು. ನಿಜ, ಇವರಿಗೆ ಬೇಕಾಗಿರುವುದು ಮುಂಚು.

(ಈ ಬಗೆಯ ಜೀವನ ಚಿತ್ರಗಳನ್ನು ಓದುಗರು ಮತ್ತು ಲೇಖಕರಿಂದ ಆಹ್ವಾನಿಸುವೆವು. ಸೂಕ್ತವಾದವು ಪ್ರಕಟಣೆಗೊಳ್ಳುವವು).

–ಸಂ

★

ಭಾರತದ ಪಕ್ಷ ರಾಜಕಾರಣ ೧೯೬೭-೧೯೭೭

ಪ್ರೊ|| ಎಂ. ಡಿ. ನಂಜುಂಡಸ್ವಾಮಿ

ಚುನಾವಣಾ ರಾಜಕೀಯವನ್ನು ಗೌಣವಾಗಿ ಕಾಣುವ ಆದರೆ ಭಾರತದ ಸಮಸ್ಯೆಗಳಿಗೆ ಸೈದ್ಧಾಂತಿಕ ಪರಿಹಾರಗಳನ್ನು ಪ್ರಾಮಾಣಿಕವಾಗಿ ಹುಡುಕಲು ಪ್ರಯತ್ನಿಸುತ್ತಿರುವ ಯಾವುದೇ ದೇಶೀಯ ರಾಜಕಾರಣಿಗಾಗಲೀ ಅಥವಾ ಪ್ರಜಾಸತ್ತಾತ್ಮಕ ರಾಜಕಾರಣದಲ್ಲಿ ಆಸಕ್ತಿಯಿರುವ ಪ್ರಬುದ್ಧ ಪ್ರಜಾಪ್ರಭುತ್ವ ರಾಷ್ಟ್ರಗಳಿಂದ ಬಂದು ಭಾರತದ ರಾಜಕಾರಣವನ್ನು ಅವಲೋಕಿಸುತ್ತಿರುವ ಯಾವುದೇ ವಿದೇಶೀ ರಾಜಕೀಯ ವೀಕ್ಷಕನಿಗಾಗಲೀ ೧೯೬೭ ರಿಂದ ೧೯೭೭ರವರೆಗಿನ ಭಾರತದ ರಾಜಕಾರಣ ದಿಗ್ಭ್ರಮೆ ಹಿಡಿಸುವುದರಲ್ಲಿ ಸಂಶಯವಿಲ್ಲ. ಏಕೆಂದರೆ, ಈ ಅವಧಿಯಲ್ಲಿ ಭಾರತದ ಪಕ್ಷ ಪದ್ಧತಿ ಕೆಲಸ ಮಾಡಿದ್ದು ಮತ್ತು ಪಕ್ಷಗಳು ಚುನಾವಣೆಗಳಲ್ಲಿ ಭಾಗವಹಿಸಿದ್ದು ದೇಶದ ಸಮಸ್ಯೆಗಳಿಗೆ ಪರಿಹಾರವಾಗಿ ಮಾಡಬೇಕಾದ ಕಾರ್ಯಕ್ರಮಗಳ ಆಧಾರದ ಮೇಲಾಗಿರದೆ ಜನರ ಸಮಸ್ಯೆಗಳಿಗೆ 'ನೇರ ಪರಿಹಾರವೇ ಅಲ್ಲದಂತಹ ಅಮೂರ್ತ ಘೋಷಣೆಗಳ ಆಧಾರದ ಮೇಲೆ. ೧೯೫೦ರ ಚುನಾವಣೆಯಲ್ಲಿಯೂ ವಿವಿಧ ರಾಜಕೀಯ ಪಕ್ಷಗಳು ಭಾಗವಹಿಸುತ್ತಿರುವುದೂ ಮತ್ತೆ ಇಂತಹ ಅಮೂರ್ತ ಘೋಷಣೆಗಳೊಂದಿಗೆ ಭಾರತದ ಪಕ್ಷಪದ್ಧತಿ ಇಂತಹ ಶೋಚನೀಯ ಪರಿಸ್ಥಿತಿಗೆ ಬಂದಿರುವಾಗ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಮುಂದಾದರೂ ಕ್ರಿಯಾತ್ಮಕವಾಗಿ ಕೆಲಸ ಮಾಡಬೇಕೆಂಬ ಆಸಕ್ತಿಯಿರುವವರು ಈ ಪರಿಸ್ಥಿತಿಗೆ ಕಾರಣಗಳನ್ನು ಹುಡುಕುವುದು ಅತ್ಯವಶ್ಯಕ.

೧೯೬೭ರ ಹೊತ್ತಿಗಾಗಲೇ ಕಾಂಗ್ರೆಸ್ ಪಕ್ಷ ತನ್ನ ದಿಕ್ಕುಗುರಿಯಿಲ್ಲದ ಆರ್ಥಿಕ ಚಟುವಟಿಕೆಯಿಂದ ದೇಶವನ್ನು ಸಂಪೂರ್ಣವಾಗಿ ಹಾಳುಗೆಡವಿತ್ತು. ಕಾಂಗ್ರೆಸ್ಸಿನ ಬಗ್ಗೆ ಜನತೆ ಸಂಪೂರ್ಣವಾಗಿ ಭ್ರಮನಿರಸನಗೊಂಡಿದ್ದರು. ಕಾಂಗ್ರೆಸ್ಸನ್ನು ಅಧಿಕಾರದಿಂದುರುಳಿಸಲು ಪಕ್ವವಾದ ಕಾಲ ಸನ್ನಿಹಿತವಾಗಿದೆಯೆಂದು ತಿಳಿದ ರಾಜಕೀಯ ಮುತ್ಸದ್ದಿಗಳು ಕಾಂಗ್ರೆಸ್ಸೇತರವಾದ (Non-Congressism) ದ ಆಧಾರದ ಮೇಲೆ ವಿರೋಧ ಪಕ್ಷಗಳ ಸಂಯುಕ್ತರಂಗವನ್ನು ರಚಿಸಿಕೊಂಡು ದೇಶದ ಸಮಸ್ಯೆಗಳಿಗೆ ಪರಿಹಾರವೆನ್ನುವ ಒಂದು ನಿರ್ದಿಷ್ಟ ನಿಯತ ಕಾಲಿಕ ಕಾರ್ಯಕ್ರಮದ ಪ್ರಣಾಳಿಕೆಯೊಂದಿಗೆ ೧೯೬೭ರ ಚುನಾವಣೆಯಲ್ಲಿ ಹೋರಾಡಿಸುವು. ನಿಯತ ಕಾಲಿಕ ಕನಿಷ್ಟ ಕಾರ್ಯಕ್ರಮದ ಆಧಾರದ ಮೇಲೆ ನಡೆದ ಆ ಚುನಾವಣೆಯೇ ಮೊದಲನೆಯದು, ಮತ್ತು ಇದುವರೆಗೂ ಅದೇ ಕೊನೆಯದು.

೧೯೬೭ರ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಲೋಕಸಭೆಯಲ್ಲಿ ಸಿಕ್ಕಿದ್ದು ಕೇವಲ ೪೦ ಬಹುಮತ. ದೇಶದ ಸಮಸ್ಯೆಗೆ ಪರಿಹಾರಗಳೇನೆಂದು ತಿಳಿಯದ ಕಾಂಗ್ರೆಸ್ಸಿಗೆ ಸಮಸ್ಯೆಗಳನ್ನು ಬಗೆಹರಿಸದೆ ಈ ಚಿಕ್ಕ ಬಹುಮತದಿಂದ ಅಧಿಕಾರದಲ್ಲಿ ಮುಂದುವರಿಯುವುದು ಅಸಾಧ್ಯವೆಂಬುದು ತಿಳಿದಿತ್ತು. ಯಾವ ಸುಧಾರಣೆಯನ್ನೂ ಮಾಡದೆಯೆ ಯಥಾಸ್ಥಿತಿಯನ್ನು ಮುಂದುವರಿಸಿಕೊಂಡೂ ಅಧಿಕಾರದಲ್ಲುಳಿಯಲು ಮಾಡಬೇಕಾದ ರಾಜಕೀಯ ತಂತ್ರಗಳ ಯುಗ ಭಾರತದಲ್ಲಿ ಪ್ರಾರಂಭವಾದದ್ದು ಈ ಕಾಲದಲ್ಲಿಯೇ.

೧೯೬೯ರಲ್ಲಿ ಆದ ಮೊದಲ ರಾಜಕೀಯ ತಂತ್ರ ನೂರು ವರ್ಷ ವಯಸ್ಸಾಗಿದ್ದ ಮುದಿ ಕಾಂಗ್ರೆಸ್ ಸಂಸ್ಥೆಗೆ ಕಾಯಕಲ್ಪಮಾಡುವ ಪ್ರಯತ್ನ. ಸಂಸ್ಥೆಯೊಳಗಿನ ಕೆಲವು ಮುದಿಯರು ಸುಧಾರಣೆಗೆ ಅಡ್ಡಿಯಾಗಿದ್ದಾರೆಂದು ಆ ಮುದಿ ಪಕ್ಷ ಅವರನ್ನೆಲ್ಲ ಹೊರಗೆಹಾಕಿ ತಾನು ಮತ್ತೆ ಹುಟ್ಟಿದ್ದೇನೆಂದು ಘೋಷಿಸಿಕೊಂಡು ೧೯೭೧ ರಲ್ಲಿ ಮತ್ತೆ ಹೊಸ ಹುರುಪಿನಿಂದ ಚುನಾವಣೆಗೆ ಪ್ರವೇಶಿಸಿತು. ಆದರೆ ಈ ಎರಡು ಗುಂಪಿನ ಕಾಂಗ್ರೆಸ್ಸಿಗರಿಗೂ ದೇಶದ ಸಮಸ್ಯೆಗಳಿಗೆ ಪರಿಹಾರವಾಗಿ ಯಾವ ನಿರ್ದಿಷ್ಟ ಕಾರ್ಯಕ್ರಮವೂ ಇರಲಿಲ್ಲ.

೧೯೬೭ರಲ್ಲಿ ನಿರ್ದಿಷ್ಟ ಕಾರ್ಯಕ್ರಮದೊಂದಿಗೆ ಕಾಂಗ್ರೆಸ್ಸೇತರವಾದದ ನಾಯಕತ್ವ ವಹಿಸಿದ್ದ ಸಮಾಜವಾದಿ ನಾಯಕ ಲೋಹಿಯಾ ಸತ್ತಿದ್ದರು. ಹೀಗಾಗಿ ೧೯೭೧ರ ಚುನಾವಣೆಯಲ್ಲಿ ಹೊರಗೆಸೆಯಲ್ಪಟ್ಟ ಮುದಿ ಕಾಂಗ್ರೆಸ್ಸಿಗರ ನಾಯಕತ್ವದಲ್ಲಿ ನಿರ್ದಿಷ್ಟ ಕಾರ್ಯಕ್ರಮವೇ ಇಲ್ಲದ ವಿರೋಧ ಪಕ್ಷಗಳ ಸಂಯುಕ್ತರಂಗ ಚುನಾವಣೆಯಲ್ಲಿ ಭಾಗವಹಿಸಿತು. ಕಾಂಗ್ರೆಸ್ಸೇತರವಾದ ಸಂಯುಕ್ತರಂಗವಾದ (United-frontism) ಆಗಿ ಮಾರ್ಪಾಡಾಯಿತು.

ಕಾರ್ಯಕ್ರಮರಹಿತ ಘೋಷಣಾ ರಾಜಕೀಯ ಪ್ರಾರಂಭವಾದದ್ದು ಈ ಚುನಾವಣೆಯಿಂದ. ಆಡಳಿತ ಪಕ್ಷದ ಚುನಾವಣಾ ಘೋಷಣೆ "ಸಮಾಜವಾದ" ಆದರೆ ಸಂಯುಕ್ತರಂಗದ ಘೋಷಣೆ "ಪ್ರಜಾಪ್ರಭುತ್ವ" ಆಗಿದ್ದಿತು. ಕಾರ್ಯಕ್ರಮವೇ ಇಲ್ಲದ ರಂಗಗಳ ಈ ಘೋಷಣೆಗಳಿಗೆ ವಿಶ್ಲೇಷಣೆಗಳೂ ಇರಲಿಲ್ಲ.

ಆದರೂ, ಈ ಒಂದೇ ಪದದ ಘೋಷಣೆಯ ಬಲದಿಂದ ಮತ್ತೆ ಕಾಂಗ್ರೆಸ್ಸಿನ ಒಂದು ಗುಂಪು ಪ್ರಚಂಡ ಬಹುಮತ ಪಡೆಯಿತು. ಯಾವುದೇ ನಿರ್ದಿಷ್ಟ ಆರ್ಥಿಕ ಕಾರ್ಯಕ್ರಮಗಳಿಲ್ಲದ ಈ ಮಾಮೂಲಿ ಕಾಂಗ್ರೆಸ್ ಪಕ್ಷದ ಆಡಳಿತ ೧೯೭೩

● ೧೨ನೆಯ ಪುಟಕ್ಕೆ

ಭಾಷೆ ಮತ್ತು ಆಲೋಚನೆ:

ಡಿ. ಎಸ್. ನಾಗಭೂಷಣ

ಕನ್ನಡ, ರಾಜ್ಯಮಟ್ಟದಲ್ಲಿ ಆಡಳಿತ ಭಾಷೆ ಎಂದು ಘೋಷಿತವಾಗಿದೆ. ನನ್ನ ದೃಷ್ಟಿಯಲ್ಲಿ ಇದು ಸಂಭ್ರಮದ ದಿನವಲ್ಲ ; ಬದಲಾಗಿ ಜವಾಬ್ದಾರಿಯ ದಿನ. ಭಾಷೆ, ಹಲವಾರು ವಾಸ್ತವಗಳ ಪ್ರಯೋಗಗಳಿಗೆ ಒಡ್ಡಿಕೊಳ್ಳಲಾರಂಭಿಸುವ ದಿನ. ಅಂದರೆ, ಭಾಷೆಯನ್ನು ಪ್ರೀತಿಸುವ ಜನರು ಈ ಪ್ರಯೋಗಗಳ ಸುಳಿಯಲ್ಲಿ ಭಾಷೆಯು ತನ್ನ ರಕ್ತಮಾಂಸದ ಸೊಗಡನ್ನು ಕಳೆದುಕೊಂಡು ದೂರ ಸರಿಯದಂತೆ, ಪ್ರಜ್ಞಾಪೂರ್ವಕವಾದ ಎಚ್ಚರಿಕೆ ವಹಿಸಬೇಕೆಂದು ಮನವರಿಕೆ ಮಾಡಿಕೊಳ್ಳಬೇಕಾದ ದಿನ. ಯಾಕೆಂದರೆ ಕನ್ನಡವು ತಾಲ್ಲೂಕು ಮತ್ತು ಇನ್ನೂ ಮೇಲಿನ ಮಟ್ಟಗಳಲ್ಲಿ ಆಡಳಿತ ಭಾಷೆಯಾಗಿ, ಕನ್ನಡ ಭಾಷೆ ಮತ್ತು ಕನ್ನಡ ಜನ ಅನುಭವಿಸಿದ ಸುಖವನ್ನು ನಾವೆಲ್ಲಾ ಬಲ್ಲೆವು. ನಮ್ಮ ಪೋಲೀಸ್ ಸ್ಟೇಷನ್‌ಗಳು ಇದ್ದಕ್ಕಿದ್ದಂತೆ ಆರಕ್ಷಕ ಠಾಣೆಗಳಾಗಿದ್ದೂ ಜೂನಿಯರ್ ಎಂಜಿನಿಯರ್‌ಗಳು, ಕನಿಷ್ಟ ಅಭಯಂತರರೆಂದೇನೋ ಆಗಿದ್ದೂ ಕನ್ನಡದ ದೊಡ್ಡ ಹೆಜ್ಜೆಯೋ ತಪ್ಪು ಹೆಜ್ಜೆಯೋ ಎಂಬುದನ್ನು ಈಗ ನಾವು ವಿಮರ್ಶಿಸಬೇಕಾಗಿದೆ. ಅಂದರೆ ಬದುಕು ಮತ್ತು ಭಾಷೆಯ ನಡುವಣ ಸಜೀವ ಸಂಬಂಧಗಳನ್ನು ಸ್ಪಷ್ಟವಾಗಿ ಗುರುತಿಸಬೇಕಾಗಿದೆ.

ಬೇರೆರೀತಿ ಹೇಳುವುದಾದರೆ ಇವೊತ್ತಿನ ಪ್ರಶ್ನೆ, ಕನ್ನಡವನ್ನು ಕ್ರಮೇಣ ಕೆಳಮಟ್ಟಗಳಲ್ಲಿ ಜಾರಿಗೆ ತರಲಾಯಿತು ಎಂದು ಹೇಳಿಕೊಳ್ಳಲಾಗುತ್ತಿದೆಯಲ್ಲಾ,ಅದರಿಂದಾಗಿ ಕೆಲವುಭಾವನಾಲಂಪಟರನ್ನು ತೃಪ್ತಿಪಡಿಸಿದ್ದರ ಹೊರತಾಗಿ, ನಮ್ಮ ಜನಜೀವನದ ಮೇಲೆ ಯಾವುದಾದರೂ ರಚನಾತ್ಮಕ ಪರಿಣಾಮ ಆಗಿದೆಯಾ ಅಂತ ; ನಮ್ಮ ಸಮಾಜದ ಭಯಹುಟ್ಟಿಸುವಂತಹ ನಿಶ್ಚಲತೆಯನ್ನು ಕೆದಕುವ ಸಣ್ಣದಾದರೂ ತಳಮಳ ಆರಂಭವಾಗಿದೆಯಾ ಅಂತ. ಯಾಕೆಂದರೆ ಭಾಷೆ ಎಂದಿನಿಂದಲೂ ಇಂಡಿಯಾದ ಸಮಾಜದಲ್ಲಿ ಎಲ್ಲ ರೀತಿಯ ಸುಲಿಗೆಗಳಿಗೆ ಪೂರಕ ಸಾಧನವಾಗಿ ಕೆಲಸ ಮಾಡಿಕೊಂಡು ಬಂದಿದೆ ; ಈ ಸಮಾಜದ ನಿಶ್ಚಲತೆಗೆ ತನ್ನ ಕೊಡುಗೆಯನ್ನು ಸಲ್ಲಿಸುತ್ತಾ ಬಂದಿದೆ.

ಜನ ಭಾಷೆ ಮತ್ತು ಆಡಳಿತ ಭಾಷೆ ಬೇರೆ ಬೇರೆಯಾಗಿದ್ದು ಆಡಳಿತಕ್ಕೊಳಪಡುವ ಜನ, ಆಡಳಿತವೆಂದರೆ ಯಜಮಾನಿಕೆ ಎಂಬ ಸುಳ್ಳು ಭಯಕ್ಕೆ ಸಿಕ್ಕಿ ಮಾನಸಿಕವಾಗಿ ವಿಕ್ರಾಂತಸ್ಥಿತಿಗೆ ದೂಡಲ್ಪಟ್ಟಿದ್ದಾರೆ. ಆದ್ದರಿಂದ ಜನ ಭಾಷೆಯೊಂದು ಆಡಳಿತ ಭಾಷೆಯಾಗುವುದೆಂದರೆ, ಈ ಸುಳ್ಳುಭಯದ ನಾಶ ಎಂದರ್ಥ ; ಜನ ಮತ್ತು ಆಡಳಿತದ ನಡುವೆ ಸಜೀವ ಸಂಬಂಧದ ನಿರ್ಮಾಣ ಎಂದರ್ಥ. ಆದರೆ ಕನ್ನಡವನ್ನು ಆಡಳಿತ ಭಾಷೆಯೆಂದು ಇವತ್ತು ಘೋಷಿಸುವುದರ ಮೂಲಕ ಈ ಉದ್ದೇಶಗಳು ಎಷ್ಟರ ಮಟ್ಟಿಗೆ ಕಾರ್ಯರೂಪಕ್ಕೆ ಬರುವುವು ಎಂಬುದು ಎಲ್ಲಕ್ಕಿಂತ ಮಹತ್ವದ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನ ಮಾಡಿದರೆ, ಇವೊತ್ತು ಅಂತಹ ವಿಶೇಷ ಸಂತೋಷ ಪಡುವ ದಿನವೇನಲ್ಲ ಅಂತ ಗೊತ್ತಾಗುವುದು. ಇವತ್ತಿನ ಆಡಳಿತ ಸ್ವರೂಪ ನೋಡಿದಾಗ ಅನಿಸುತ್ತದೆ: ಎಲ್ಲ ಸರ್ಕಾರೀ ನಿರ್ಣಯಗಳಂತೆ ಇದೂ ಒಂದು ರಾಜಕೀಯ ಪ್ರಚಾರೋದ್ದೇಶದ ನಿರ್ಣಯವಾಗಿ, ನಮ್ಮ ರಾಜಕೀಯ ಭ್ರಷ್ಟಾಚಾರದ ಒಂದು ಸಾಂಸ್ಕೃತಿಕ ಹೆಗ್ಗುರುತಾಗಿ ಉಳಿಯಬಹುದೇನೋ–ಭಾಷೆ ಎಂಬುದು ಸಾಂಸ್ಕೃತಿಕ ವಿಭಾಗಕ್ಕೆ ಸೇರುವ ವಿಷಯ ತಾನೇ ? ಹಾಗಾಗಬಾರದು ಎಂಬುದೇ ಕನ್ನಡವನ್ನು ಪ್ರೀತಿಸುವ ನಮ್ಮೆಲ್ಲರ ಕಳಕಳಿ ಎಂದು ನಾನು ತಿಳಿದಿರುವೆ.

ಭಾಷೆ ಕುರಿತು ನಮ್ಮಲ್ಲಿ ಬಹಳಷ್ಟು ಜನರಿಗೆ ವಿಚಿತ್ರ ಕಲ್ಪನೆಗಳು ಇರುವಂತಿವೆ. ಇಂಡಿಯಾದಲ್ಲಿ ಜಾತಿ, ಭಾಷೆ ಮತ್ತು ಆಸ್ತಿ–ಈ ಮೂರರ ಬಗ್ಗೆ ಮಾತನಾಡಿದಾಗ ಜನ ವಿಚಿತ್ರವಾಗಿ ವರ್ತಿಸುವುದುಂಟು. ಇಂಡಿಯಾದ ಸದ್ಯದ ದುರವಸ್ಥೆಗೆ ಈ ಮೂರರ ಬಗೆ ಇರುವ ವಿಚಿತ್ರ ಕಲ್ಪನೆಗಳೇ ಕಾರಣ ಎಂದಷ್ಟೇ ಹೇಳಿ ಈ ಮೂರರ ಪೈಕಿ, ಪ್ರಸಕ್ತ ಚರ್ಚೆಯ ವಸ್ತುವಾದ ಭಾಷೆಯ ಬಗ್ಗೆ ಹೆಚ್ಚು ಒತ್ತುಕೊಟ್ಟು ಕೆಲ ಅಭಿಪ್ರಾಯಗಳನ್ನು ನಿಮ್ಮ ಮುಂದಿಡುವೆ. ಮಿಕ್ಕೆರಡನ್ನು ಈಗ ಸಂಪೂರ್ಣವಾಗಿ ಯಾಕೆ ಕೈಬಿಡಲಾರೆನೆಂದರೆ ಬರೀ ಭಾಷೆಯ ಬಗ್ಗೆಯೇ ಬಿಮ್ಮಗೆ ಮಾತಾಡಲು ಸಾಧ್ಯವಿಲ್ಲ ; ಜಾತಿ, ಭಾಷೆ ಮತ್ತು ಆಸ್ತಿ ಸಂಬಂಧಗಳು–ಇವು ಇಂಡಿಯಾದ ಕೊಳಕು ಮುಖದ ಕೆತ್ತನೆಗಾಗಿ ಕೆಲಸಮಾಡಿರುವ ಒಂದೇ ಶಕ್ತಿಯ ಮೂರು ಕೈಗಳು. ಇಂಡಿಯಾದ ಸಮಾಜದೊಳಗಿನ ಯಾವುದೇ ವಿದ್ಯಮಾನದ ಬೇರುಗಳನ್ನು ನಾವು ಈ ಮೂರರ ಹೊರತಾಗಿ ಇನ್ನೆಲ್ಲೂ ಕಾಣಲಾರೆವು. ಈ ಸಮಾಜದ ಚಲನಶೀಲತೆ ನಿರ್ಧಾರವಾಗುವುದು ಈ ಮೂರು ನೆಲೆಗಳಿಂದಲೇ. ಇವತ್ತಿನ ಇಂಡಿಯಾದಲ್ಲಿ ಘನವಂತನಾಗಲು ಅಥವಾ ಪ್ರಭುವರ್ಗಕ್ಕೆ ಸೇರುವಂತಾಗಲು ಇರುವ ಅರ್ಹತೆ ಎಂದರೆ: ಮೇಲ್ಜಾತಿ, ಆಸ್ತಿ ಮತ್ತು ಇಂಗ್ಲಿಷ್ (ಈ ಹಿಂದೆ ಸಂಸ್ಕೃತ)–ಈ ಮೂರರಲ್ಲಿ ಎರಡಾದರೂ ನಿನ್ನದಾಗಿರಬೇಕು. ಕಣ್ಮುಚ್ಚಿ ಹಾಲು ಕುಡಿಯುವ ಬೆಕ್ಕುಗಳು ಈ ವಾಸ್ತವವನ್ನು ಒಪ್ಪುವುದಿಲ್ಲ. ಆದರೆ ಈ ಒಪ್ಪಿಗೆ ಗಿಪ್ಪಿಗೆ ಬಗ್ಗೆ ಜನಸಾಮಾನ್ಯರು ತಲೆಕೆಡಿಸಿಕೊಳ್ಳದಿರುವುದು ಒಳ್ಳೆಯದು. ಜನಸಾಮಾನ್ಯರ ಇಡೀ ಉದ್ದೇಶ ಈ ಅವಾಸ್ತವಿಕವಾದ ವಾಸ್ತವವನ್ನು ನುಚ್ಚುನೂರು ಮಾಡುವುದಾಗಿರಬೇಕು. ಅಂದರೆ ಜಾತಿ, ಆಸ್ತಿ ಮತ್ತು ಭಾಷೆಯ ನಡುವಣ ಗುತ್ತೇದಾರಿ ಸಂಬಂಧಗಳನ್ನು ಕತ್ತರಿಸುವುದಾಗಿರಬೇಕು. ಆಗ ಸಾಮಾಜಿಕ ಕ್ರಾಂತಿಯಲ್ಲಿನ ಭಾಷೆಯ ಅಪೂರ್ವ ಸಾಧ್ಯತೆಗಳು ತಾನೇ

* ಇದು ನವೆಂಬರ್ ೧ರಂದು ಸಮನ್ವಯ ಬಳಗ ಮೈಸೂರಿನಲ್ಲಿ ಏರ್ಪಡಿಸಿದ್ದ ಭಾಷಾ ಅಧ್ಯಯನ ಗೋಷ್ಠಿಯಲ್ಲಿ ಮಂಡನೆಯಾಗಬೇಕಿದ್ದ ಪ್ರಬಂಧ. ಕಾರಣಾಂತರಗಳಿಂದ ಆಗಲಿಲ್ಲ. ಅದನ್ನೀಗ ಇಲ್ಲಿ ಪ್ರಕಟಿಸುತ್ತಿದ್ದೇವೆ.–
ಸಂಪಾದಕ

ತಾನಾಗಿ ಬಿಚ್ಚಿಕೊಳ್ಳಲಾರಂಭಿಸುತ್ತವೆ.

ಭಾಷೆ ಕುರಿತು ಇರುವ ಅನೇಕ ವಿಚಿತ್ರ ಕಲ್ಪನೆಗಳಲ್ಲಿ ಅತ್ಯಂತ ವಿನಾಶಕಾರಿಯೂ, ಆ ಕಾರಣದಿಂದ ಅತ್ಯಂತ ಸುಪ್ರಸಿದ್ಧವೂ ಆದ ಕಲ್ಪನೆ ಎಂದರೆ, 'ಭಾಷೆ ಒಂದು ಸಂಪರ್ಕ ಮಾಧ್ಯಮ' ಎಂಬುದು. ಇದು ವಿಚಿತ್ರ ಏಕೆಂದರೆ, ಮನುಷ್ಯ ಜನಾಂಗದ ಅತ್ಯಂತ ದೊಡ್ಡ ನಾಗರಿಕ ಸಾಧನೆ ಎಂದೆನಿಸಿಕೊಂಡಿರುವ ಭಾಷೆ ಎಂಬುದನ್ನು ಇಷ್ಟು ಸೀಮಿತ ಅರ್ಥಕ್ಕೆ ಹಿಡುಕುವ ಸಂಪ್ರದಾಯ ಬೆಳೆದು ನಿಂತಿದೆ. ಇದು, ಮನುಷ್ಯ ಎಂದರೆ ಒಂದು ಉತ್ಪಾದನಾ ಮಾಧ್ಯಮ ಎಂಬ ಕೆಲವು ಕಮ್ಯೂನಿಸ್ಟರ ಕಲ್ಪನೆಯಷ್ಟೇ ವಿಚಿತ್ರವಾದದ್ದು. ಭಾಷೆಯು ಒಂದು ಸಂಪರ್ಕ ಮಾಧ್ಯಮ ಎಂದು ನಾವು ಹೇಳುವಾಗ, ನಾವು ಭಾಷೆಯ ಉಪಯೋಗೀ ಮೌಲ್ಯದ–use value–ಬಗ್ಗೆ ಮಾತ್ರ ಮಾತಾಡುತ್ತಿದ್ದೇವೆ ಎಂಬ ಅರಿವು ನಮಗಿರಬೇಕು; ಭಾಷೆಯು ಮನುಷ್ಯ ನಾಗರೀಕತೆಯ ಮೊದಲ ಹೆಜ್ಜೆ ಅಥವಾ ಚಾಲನಾಶಕ್ತಿ ಎಂಬ ಎಚ್ಚರ ನಮಗಿರಬೇಕು.

> ....ಇಪ್ಪೊತ್ತೈದು ಪ್ರಶ್ನೆ, ಕನ್ನಡವನ್ನು ಕ್ರಮೇಣ ಕೆಳಮಟ್ಟಗಳಲ್ಲಿ ಜಾರಿಗೆ ತರಲಾಯಿತು ಎಂದು ಹೇಳಿಕೊಳ್ಳಲಾಗುತ್ತಿದೆಯಲ್ಲಾ, ಅದರಿಂದಾಗಿ ಕೆಲವು ಭಾವನಾಲಂಪಟರನ್ನು ತೃಪ್ತಿಪಡಿಸಿದ್ದರ ಹೊರತಾಗಿ, ನಮ್ಮ ಜನಜೀವನದ ಮೇಲೆ ಯಾವುದಾದರೂ ರಚನಾತ್ಮಕ ಪರಿಣಾಮ ಆಗಿದೆಯಾ ಅಂತ.......

ಭಾಷೆ ಮೂಲಭೂತವಾಗಿ ಗುರುತಿಗೆ

ಕೆಲವು ಟಿಪ್ಪಣಿಗಳು

ಸಂಬಂಧಿಸಿದ್ದು. ಸುತ್ತಲಿನ ಪ್ರಪಂಚವನ್ನು ವ್ಯಕ್ತಿ ತನ್ನ ಮನಸ್ಸಿನೊಳಕ್ಕೆ ಗುರುತಿಸಿಕೊಳ್ಳುವ ಅಭ್ಯಾಸವದು. ಜ್ಞಾನವೇ ಆಗಲಿ ವಿಜ್ಞಾನವೇ ಆಗಲಿ ಅವು ಮೂಲಭೂತವಾಗಿ ಮನುಷ್ಯ ಮತ್ತು ಪ್ರಕೃತಿ ನಡುವಣ ಸಂಬಂಧಗಳನ್ನು ಗುರುತಿಸುವ ಅಥವಾ ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಮನುಷ್ಯ ಪ್ರಕೃತಿಯ ಗುರುತನ್ನ ಸಂಪೂರ್ಣವಾಗಿ ತನ್ನ ಅರಿವಿನೊಳಕ್ಕೆ ತಂದುಕೊಳ್ಳುವ ಪ್ರಯತ್ನಗಳ ಮೊತ್ತವಾಗಿದೆ. ಅದ್ದರಿಂದ ಜ್ಞಾನ ಇಲ್ಲವೇ ವಿಜ್ಞಾನವು ಮೂಲಭೂತವಾಗಿ ಭಾಷೆಯ ಬೆಳೆವ ರೂಪಗಳಾಗಿವೆ: ಜ್ಞಾನ ಇಲ್ಲವೇ ವಿಜ್ಞಾನದ ಬೆಳವಣಿಗೆ ಎಂದರೆ ಭಾಷೆಯ ಬೆಳವಣಿಗೆ; ಹಾಗೆಯೇ ಭಾಷೆಯ ಬೆಳವಣಿಗೆ ಎಂದರೆ ಜ್ಞಾನ ಅಥವಾ ವಿಜ್ಞಾನದ ಬೆಳವಣಿಗೆ. ಭಾಷೆಯ ಅರ್ಥವನ್ನ ಈ ಬೇರು ಮಟ್ಟದಲ್ಲಿ ಸೆಳೆಮಿಕೊಳ್ಳುವ ಪ್ರಯತ್ನ ಮಾಡಿದಾಗ ಮಾತ್ರ ನಮ್ಮ ಸಮಾಜದ ಚಲನಶೀಲತೆಯನ್ನು ನಿರ್ಧರಿಸುವ ಜಾತಿ, ಆಸ್ತಿ, ಮತ್ತು ಭಾಷೆ ನಡುವಣ ಒಳ–Intrinsic–ಸಂಬಂಧಗಳನ್ನು ಅರ್ಥಮಾಡಿಕೊಳ್ಳಬಹುದು.

ನಮ್ಮೆಲ್ಲಾ ಚಟುವಟಿಕೆಗಳ ಅಂದರೆ ಜನಜೀವನದ ಮೂಲದ್ರವ್ಯ ಎಂದರೆ ಆಲೋಚನೆ. ಆದರೆ ಈ ಆಲೋಚನೆ ಎಂಬುದಾದರೂ ಏನು? ಅದು ಭಾಷೆಯ ಅಮೂರ್ತ ರೂಪ. ಅಂದರೆ ಭಾಷೆಯು ಆಲೋಚನೆಯ ಮೂರ್ತರೂಪವಷ್ಟೆ. ಆದ್ದರಿಂದ ಭಾಷೆ ಜನಜೀವನ ಪಡೆಮಕೊಳ್ಳುವ ಸಕಲ ಆಯಾಮಗಳ ಎರಕಗಳನ್ನು ನಿರ್ಧರಿಸುವ ಕ್ರಿಯಾ ಶಕ್ತಿ. ಆದರೆ ವಾಸ್ತವ ಇಷ್ಟು ಸಹಜವಾಗದಿರುವುದೇ ಎಲ್ಲ ತೊಂದರೆಗಳ ಮೂಲವಾಗಿದೆ. ಆಲೋಚನೆ ಮತ್ತು ಭಾಷೆಯ ನಡುವೆ ಕಂದರ ನಿರ್ಮಾಣವಾಗಿದೆ. ಭಾಷೆ ಬುದ್ಧಿಯ ಸುಳಿಗೆ ಸಿಕ್ಕಿ, ಆಲೋಚನೆಯ ಮೇಲೆ ಸವಾರಿ ಮಾಡತೊಡಗಿದೆ. ಇಂತಹ ಪರಿಸ್ಥಿತಿಯಲ್ಲಿ ಜನಭಾಷೆಯೊಂದು ಆಡಳಿತ ಭಾಷೆಯಾಗಿ ಎಷ್ಟರ ಮಟ್ಟಿಗೆ ಸಾರ್ಥಕ್ಯ ಪಡೆದೀತು–ಸಾಂಸ್ಕೃತಿಕವಾಗಿ ಹಾಗೂ ಸಾಮಾಜಿಕವಾಗಿ? ನಮ್ಮ ಕಾವ್ಯ ಕಥೆ, ಪಠ್ಯಪುಸ್ತಕಗಳು, ಭಾಷಣಗಳು ಆಕಾಶವಾಣಿ ವಾರ್ತೆಗಳು ಜಾಹೀರಾತುಗಳು ಮತ್ತು ಬೋರ್ಡುಗಳು ಈ ಪ್ರಶ್ನೆಗೆ ಉತ್ತರವಾಗಿ ಸಾಕ್ಷೀಭೂತವಾಗಿ ನಿಂತಿವೆ. ಸಮಷ್ಟಿ ಜೀವನದ ಸಮಗ್ರತೆ–Integrity–ಯನ್ನು ಕಾಪಾಡಬಹುದಾದ ಭಾಷೆಯೇ ಅದನ್ನು ಹಾಳುಗೆಡುಹಿರುವ ದುರಂತವನ್ನು ನಾವು ಕಾಣುತ್ತಿದ್ದೇವೆ. ಹೀಗೇಕೆ? ಒಬ್ಬ ಪ್ರಸಿದ್ಧ ತತ್ವಜ್ಞಾನಿಯ 'ಭ್ರಷ್ಟ ಆಲೋಚನೆ ಭಾಷೆಯನ್ನು ಭ್ರಷ್ಟಗೊಳಿಸುತ್ತದೆ ಮತ್ತು ಭ್ರಷ್ಟ ಭಾಷೆ ಆಲೋಚನೆಯನ್ನು ಭ್ರಷ್ಟಗೊಳಿಸುತ್ತದೆ' ಎಂಬ, ಒಬ್ಬ ಪ್ರಸಿದ್ಧ ಸಾಹಿತಿಯ 'ಭಾಷೆಯೇ ನನ್ನ ಮಿತಿ' ಎಂಬ ಮತ್ತು ಒಬ್ಬ ಪ್ರಸಿದ್ಧ ಭಾಷಾ ವಿಜ್ಞಾನಿಯ 'ನಾನು ಭಾಷಾ ವಿಜ್ಞಾನಿಯಾಗಿ ಹೊರಟು ಸಮಾಜ ವಿಜ್ಞಾನಿಯಾಗಿ ರೂಪುಗೊಂಡಿರುವೆ' ಎಂಬ ಹೇಳಿಕೆಗಳು ನನ್ನ ಮೇಲಿನ ಮಾತುಗಳನ್ನು ಇನ್ನಷ್ಟು ಸ್ಪಷ್ಟಗೊಳಿಸಬಹುದು. ಒಂದು ಖಚಿತ ನಿರ್ದಿಷ್ಟ ಉದಾಹರಣೆಯನ್ನೇ ಕೊಡುವುದಾದರೆ ಜಪಾನೀ ಭಾಷೆಯಲ್ಲಿ 'ಬಿಡುವು' ಎಂಬ ನಮ್ಮ ಪದಕ್ಕೆ ಸಮಾನಾರ್ಥಕವಾದ ಪದವೇ ಇಲ್ಲ ಎಂಬ ಸಂಗತಿ ಇಡೀ ಜಪಾನೀ ಸಮಾಜದ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಕೀಲಿಕೈಯಾಗಬಹುದು....

'ಭಾಷೆ' ಎಂಬುದರ ಕಲ್ಪನೆಯನ್ನು ನಾವು ಈ ಸ್ತರದಲ್ಲಿ ಅರ್ಥಮಾಡಿಕೊಳ್ಳುವುದಾದರೆ, ಜನದ ಭಾಷೆಯೇ ಆಡಳಿತ ಭಾಷೆಯಾದಾಗ ಜನಜೀವನದಲ್ಲಿ ಉಂಟಾಗಬಹುದಾದ ಬದಲಾವಣೆಗಳನ್ನು ಅರ್ಥಮಾಡಿಕೊಳ್ಳಬಹುದು ಮತ್ತು ಮುನ್ನೋಡಬಹುದು ಕೂಡಾ. ಆದರೆ ಈಗ, ವಿವಿಧ ಹಂತಗಳಲ್ಲಿ ಕನ್ನಡ ಆಡಳಿತ ಭಾಷೆಯಾಗಿದ್ದರೂ ಅಂತಹ ಯಾವುದೇ ಬದಲಾವಣೆಯಾಗದಿರಲು ಕಾರಣವೇನು ಮತ್ತು ಇವತ್ತಿನಿಂದಾಚೆಗೂ ಕೂಡಾ ಬದಲಾವಣೆಗಳನ್ನು ನಿರೀಕ್ಷಿಸುವ ಆಸೆ ನಮಗೆ ಇರದಂತಾಗಿರಲೂ ಕಾರಣವೇನು? (ಹಿಂದಿ ನಾಡಿನಲ್ಲಿ ಹಿಂದಿ ಆಡಳಿತ ಭಾಷೆಯಾಗಿ ವರ್ಷಗಳು ಉರುಳಿದರೂ ಏನು ಪ್ರಯೋಜನವಾಗಿದೆ?) ನಮಗೆ ಜಾತಿ, ಆಸ್ತಿ ಹಾಗೂ ಭಾಷೆ ನಡುವಣ ಸಂಬಂಧಗಳು ಈ ಪ್ರಶ್ನೆಗೆ ಉತ್ತರ ದೊರಕಿಸಿಕೊಡುತ್ತವೆ. ಆಡಳಿತ ಸ್ವರೂಪವನ್ನು ನಿರ್ಧರಿಸುವ ಶಾಸಕಾಂಗ ಹಾಗೂ ಕಾರ್ಯಾಂಗವನ್ನು (ನ್ಯಾಯಾಂಗದ ಪ್ರತ್ಯೇಕ ಅಸ್ತಿತ್ವದ ಬಗ್ಗೆ ಮಾತಾಡುವ ಧೈರ್ಯ ನನಗಿಲ್ಲ) ನಿಯಂತ್ರಿಸುವ, ಅಂದರೆ ರಾಜಕಾರಣ ಹಾಗೂ

ಅಧಿಕಾರೀ ವ್ಯವಸ್ಥೆಯನ್ನು ನಿಯಂತ್ರಿಸುವ ಶಕ್ತಿಗಳಾದ ಕ್ರಮವಾಗಿ ಆಸ್ತಿ ಮತ್ತು ಜಾತಿಗಳ ಗುತ್ತೇದಾರಿಕೆ ಸಂಬಂಧಗಳನ್ನು ಅಸ್ತವ್ಯಸ್ತಗೊಳಿಸುವವರೆಗೂ ಜನ ಭಾಷೆ ಮತ್ತು ಆಡಳಿತ ಭಾಷೆಯ ನಡುವೆ ಕೃತಕ ಕಂದರ ಮುಂದುವರಿದೇ ತೀರುತ್ತದೆ; ರೈಲ್ವೇ ಇಲಾಖೆಯಲ್ಲಿ 'ಸಿಗ್ನಲ್' (ಕೈಮರ) ಎಂಬ ಶಬ್ದಕ್ಕೆ ಹಿಂದಿಯಲ್ಲಿ ಮಾಡಿರುವ 'ಲೋಹಪಥ ಗಾಮಿನಿ ಆವಕ ಜಾವಕ ಸೂಚಕ ಯಂತ್ರ' ಎಂಬ ಅದ್ಭುತ ಪಂಡಿತ ಸೃಷ್ಟಿಗಳು ಕನ್ನಡದಲ್ಲೂ ಕಾಣತೊಡಗುತ್ತವೆ. ಸಂಸ್ಕೃತದ ಮೂಲಕ, ಇಂಗ್ಲಿಷ್‌ನ ಮೂಲಕ, ಕೊನೆಗೆ ಹಿಂದಿ ಮೂಲಕ ಕೂಡಾ ಜನ ಹಾಗೂ ಆಡಳಿತದ ನಡುವೆ ಕಂದರವನ್ನೇ ಉಳಿಸಿಕೊಂಡು ಬಂದ ಪಟ್ಟಭದ್ರ ಹಿತಗಳು ಕನ್ನಡದ ಮೂಲಕವೂ ಇದನ್ನೇ ಮಾಡಬಹುದಾಗಿದೆ. ಹಾಗಾದಲ್ಲಿ ಕನ್ನಡವೆಂಬ ಮೂರಕ್ಷರಗಳನ್ನು ಕೇಳೇ ರೋಮಾಂಚನಗೊಳ್ಳುವ ಇಲ್ಲವೆ ರೋಮಾಂಚನಗೊಂಡಂತೆ ನಟಿಸುವ ಕನ್ನಡ ನಾಯಕರುಗಳಿಗೆ ಹೊರತಾಗಿ ಇನ್ನಾರಿಗೂ ಯಾವುದೇ ಪ್ರಯೋಜನವಾಗದು.

ನಾನು ಹೇಳುವುದಿಷ್ಟೆ: ಕನ್ನಡ ಆಡಳಿತ ಭಾಷೆಯಾಗಿ ಸಾರ್ಥಕ್ಯ ಪಡೆಯುವುದು, ಅದು ಜನ ಜೀವನದಲ್ಲಿ ಹೊಸ ಚೇತರಿಕೆಗೆ ಚಾಲಕ ಶಕ್ತಿಯಾಗಿ ಕೆಲಸಮಾಡತೊಡಗಿದಾಗ ಮಾತ್ರ. ಹಾಗಾಗಬೇಕಾದರೆ, ಹಾಗಾಗದ ಹಾಗೆ ನಿರ್ಬಂಧಿಸುತ್ತಿರುವ ಗುತ್ತೇದಾರಿ ಆಸ್ತಿ ಹಾಗೂ ಜಾತಿ ಸಂಬಂಧಗಳನ್ನೂ ಕೂಡಾ ಗುತ್ತೇದಾರಿ ಭಾಷಾ ಸಂಬಂಧಗಳನ್ನು ಧ್ವಂಸಗೊಳಿಸುವುದರ ಜತೆಯಲ್ಲೇ ಧ್ವಂಸಗೊಳಿಸಬೇಕು. ಆಪೊತ್ತು ನಿಜವಾಗಿಯೂ ನಾವೆಲ್ಲಾ ಸಂತೋಷಪಡಬಹುದು; ತೀರಾ ಭಾವನಾಮಯಿಗಳಾದವರು ಆನಂದಬಾಷ್ಪಗಳನ್ನೂ ಸುರಿಸಬಹುದು– ಸಾಮಾಜಿಕ ಕ್ರಾಂತಿಯ ನಾಂದಿ ಎಂದು.

(ಇದು, ನಾನು ಸಿದ್ಧಪಡಿಸುತ್ತಿರುವ 'ಭಾಷೆ ಮತ್ತು ಆಲೋಚನೆ' ಎಂಬ ದೀರ್ಘ ಪ್ರಬಂಧವೊಂದಕ್ಕಾಗಿ ಮಾಡಿಕೊಳ್ಳುತ್ತಿರುವ ಟಿಪ್ಪಣಿಗಳಲ್ಲಿ ಕೆಲವನ್ನು ಆಧರಿಸಿ ಸಾಂದರ್ಭಿಕವಾಗಿ ಬರೆದ ಲೇಖನ. ಆದ್ದರಿಂದ ಇಡೀ ಲೇಖನಕ್ಕೆ ಒಂದು ಚೌಕಟ್ಟು ಇರದೇ ಹೋಗಿರಬಹುದು ಈ ಸಂಭವನೀಯ ಪ್ರಮಾದಕ್ಕಾಗಿ ಕ್ಷಮೆ ಇರಲಿ–ಡಿಎಸ್ಸೆನ್)

> ಹೆಣಭಾರ! ಹೆಣಭಾರ! ಸಾಕೀ ಬಲಾತ್ಕಾರ;
> ಸಾಕು ನಿಲ್ಲಿಸಿ, ನಿಮಗೆ ಬೇಕಾದರುದ್ಧಾರ
> ಇಂಗ್ಲೀಷಿನ ಚಪ್ಪಡಿಯಡಿಯ ಹಸುಳೆ ಚೀತ್ಕಾರ
> ಕೇಳಿಸದ ಕಿವುಡರಿರ, ನಿಮಗೇಕೆ ಅಧಿಕಾರ?
> ಕೇಳಿಯೂ ದಿನ್ನನಿತೆ, ಕೋಟಿ ಧಿಕ್ಕಾರ!
>
> —ಕುವೆಂಪು
> "ಕನ್ನಡ ದೀಕ್ಷೆ"

೯ನೇ ಪುಟ ದಿಂದ

ಭಾರತದ ಪಕ್ಷ ರಾಜಕಾರಣ–

ರ ವರೆಗೆ ರಾಜ್ಯಮಾಡುವಷ್ಟರಲ್ಲಿ ದೇಶದ ಆರ್ಥಿಕ ಪರಿಸ್ಥಿತಿ ೧೯೭೭ರಲ್ಲಿ ಹದಗೆಟ್ಟಿದ್ದಕ್ಕಿಂತ ಎರಡರಷ್ಟು ಹದಗೆಟ್ಟು ವಿವಿಧ ರಾಜ್ಯಗಳಲ್ಲಿ ಜನತಾ ಹೋರಾಟಗಳು ಸರ್ಕಾರದ ವಿರುದ್ಧ ಸಂಘಟಿತವಾಗಲು ಪ್ರಾರಂಭವಾದುವು. ೧೯೭೪ ರಿಂದ ೧೯೭೫ರವರೆಗೆ ಜನತೆಯ ಅಸಮಾಧಾನ ದೇಶದಾದ್ಯಂತ ವ್ಯಕ್ತವಾಗಿ ಆಡಳಿತ ಪಕ್ಷಕ್ಕೆ ನಡುಕ ಹುಟ್ಟಿಸಿತು. ಇಂತಹ ಸನ್ನಿವೇಶದಲ್ಲಿ ಒಂದು ದಿಕ್ಕುಗುರಿಯಿಲ್ಲದ ನಿಷ್ಕ್ರಿಯ ಆದರೆ ಅಧಿಕಾರ ದಾಹವಿರುವ ಅಧಿಕಾರಾರೂಢ ರಾಜಕೀಯ ಪಕ್ಷ ತಳೆಯುವ ನಿಲುವನ್ನು ಕಾಂಗ್ರೆಸ್ ಪಕ್ಷ ತಳೆಯಿತು. ವಿರೋಧವನ್ನು ಹತ್ತಿಕ್ಕುವ ಸರ್ವಾಧಿಕಾರವನ್ನು ೧೯೭೫ರಲ್ಲಿ ಜಾರಿಗೆ ತಂದಿತು.

ಈ ತುರ್ತುಪರಿಸ್ಥಿತಿಯ ವಿರಾಮದ ನಂತರ ನಡೆದ ೧೯೭೭ರ ಚುನಾವಣೆಯ ೧೯೭೧ ರಲ್ಲಿ ನಡೆದ ಚುನಾವಣೆಗಿಂತ ಅಷ್ಟೇನೂ ಭಿನ್ನವಲ್ಲ. ಈ ಚುನಾವಣೆ ನಡೆದದ್ದು ಎರಡು ಪದಗಳ ಘೋಷಣೆಗಳ ಆಧಾರದ ಮೇಲೆ. ಅಧಿಕಾರಾರೂಢ ಪಕ್ಷದ ಘೋಷಣೆ "ಭದ್ರತೆ ಅಥವಾ ಸರ್ವನಾಶ"; ವಿರೋಧ ಪಕ್ಷಗಳ ಘೋಷಣೆ "ಪ್ರಜಾಪ್ರಭುತ್ವ ಅಥವಾ ಸರ್ವಾಧಿಕಾರ" ಆಗಿತ್ತು. ದೇಶದ ವಿವಿಧ ಸಮಸ್ಯೆಗಳಿಗೆ ಪರಿಹಾರವಾಗಿ ಯಾವ ಕಾರ್ಯಕ್ರಮದ ಬಗ್ಗೆಯೂ ಈ ಪಕ್ಷಗಳು ಚುನಾವಣಾ ಕಾಲದಲ್ಲಾಗಲೀ ಆನಂತರವಾಗಲೀ ನಿರ್ದಿಷ್ಟವಾಗಿ ಜನರ ಮುಂದೆ ಚರ್ಚಿಸಲೇ ಇಲ್ಲ. ಏಕೆಂದರೆ ಇವರೆಲ್ಲ ಮೂಲತಃ ಯಥಾಸ್ಥಿತಿವಾದಿಗಳಾದ್ದರಿಂದ. ವಿಚಿತ್ರವೆಂದರೆ, ಸರ್ವಾಧಿಕಾರಿ ಶಕ್ತಿಗಳಿಗೆ ಸೋಲಾದ ಮೇಲೂ ೧೯೮೦ರ ಚುನಾವಣೆಯಲ್ಲೂ ಅಧಿಕಾರಕ್ಕೆ ಬಂದ ಪಕ್ಷ ತನ್ನ ಕಾರ್ಯಕ್ರಮವನ್ನು ಜನರ ಮುಂದೆ ಚರ್ಚಿಸದೆ ಮತ್ತೆ ೧೯೭೭ರ ಘೋಷಣೆಗಳನ್ನೇ ಜನರ ಮುಂದಿಟ್ಟಿತು.

ಈಗ ಮತ್ತೆ ೧೯೮೦ಕ್ಕೆ ವಿವಿಧ ರಾಜಕೀಯ ಪಕ್ಷಗಳು ರಂಗಗಳನ್ನು ರಚಿಸಿಕೊಳ್ಳುತ್ತಿವೆ. ಪುನಃ ಇವುಗಳ ಘೋಷಣೆಗಳು ಒಂದು ಪದ ಇಲ್ಲವೇ ಎರಡು ಪದಗಳದ್ದು. ಒಬ್ಬರದು "ಪಕ್ಷಾಂತರಿಗಳ ವಿರೋಧಿ"; ಮತ್ತೊಬ್ಬರದು "ಸರ್ವಾಧಿಕಾರಿ ವಿರೋಧಿ, ಮತೀಯ ಶಕ್ತಿಗಳ ವಿರೋಧಿ"; ಒಬ್ಬರದು "ನೆಹ್ರೂವಾದ"; ಮತ್ತೊಬ್ಬರದು "ಮುಂದಿನ ಪ್ರಧಾನಿ ಯಾರು." ಈ ಚುನಾವಣೆಯಲ್ಲಿಯೂ ರಚಿತವಾಗುವ ಹೊಂದಾಣಿಕೆಗಳು ತಾವು ಸಂಯುಕ್ತ ಸರ್ಕಾರ ರಚಿಸಿದರೆ ಏನು ಮಾಡುತ್ತೇವೆನ್ನುವ ನಿರ್ದಿಷ್ಟ ನಿಯತಕಾಲಿಕ ಕಾರ್ಯಕ್ರಮವನ್ನು ಜನರ ಮುಂದಿಡುತ್ತಿಲ್ಲ. ಇದಕ್ಕೆ ಕಾರಣ ಮತ್ತೆ ಇವರೆಲ್ಲ ಯಥಾಸ್ಥಿತಿವಾದಿಗಳಾಗಿರುವುದು.

೧೯೮೦ರ ಚುನಾವಣೆಯ ನಂತರವೂ ಈ ವಿಚಿತ್ರ ಸಂಗಾತಿಗಳ ಸಮ್ಮಿಶ್ರ ಸರ್ಕಾರದಿಂದ ಭಾರತದ ಜನತೆ ತಮ್ಮ ಸಮಸ್ಯೆಗಳಿಗೆ ಪರಿಹಾರಗಳನ್ನು ಅಪೇಕ್ಷಿಸಲು ಸಾಧ್ಯವಾಗುವುದಿಲ್ಲ. ಇದಕ್ಕೆ ಕಾರಣ ಈಗಿರುವ ಯಾವ ರಾಜಕೀಯ ಪಕ್ಷಕ್ಕೂ ಸ್ಪಷ್ಟ ಸೈದ್ಧಾಂತಿಕ ಚೌಕಟ್ಟೇ ಇಲ್ಲದಿರುವುದು.

ಇಂತಹ ಶೋಚನೀಯ ಪರಿಸ್ಥಿತಿಯಿಂದ ಭಾರತದ ರಾಜಕಾರಣವನ್ನು ಹೊರಗೆಳೆದು ರಕ್ಷಿಸುವುದು ಹೊಸ ಪೀಳಿಗೆಯ ಜವಾಬ್ದಾರಿ. ಮಾಮೂಲಿ ಶಕ್ತಿ ರಾಜಕಾರಣದ ಹೊಲಸಿನಿಂದ ದೂರವುಳಿಯುವ ಸಂಕಲ್ಪ ಮಾಡಿ, ಭಾರತದ ವಿವಿಧ ಸಮಸ್ಯೆಗಳಿಗೆ ವೈಜ್ಞಾನಿಕವಾಗಿ ಪರಿಹಾರವನ್ನು [illegible]ದಗಿಸಬಲ್ಲ ಸಿದ್ಧಾಂತವನ್ನು ಶ್ರದ್ಧೆಯಿಂದ ಹುಡುಕಿ ಆರಿಸಿ ಕೊಂಡು, ಸ್ವಂತ ಶ್ರೀಮಂತಿಕೆಯ ಕನಸನ್ನು ಮರೆತು ಪ್ರೀತಿ ವಿಶ್ವಾಸಗಳಿಂದ ಸಂಘಟಿತರಾಗಿ ಹೊಸದೊಂದು ರಾಜಕೀಯ ವೇದಿಕೆಯನ್ನು ರಚಿಸಿಕೊಂಡು ಕಾರ್ಯೋನ್ಮುಖರಾದರೆ ಭಾರತದ ರಾಜಕಾರಣಕ್ಕೆ ಅವಶ್ಯ ಬೇಕಾಗಿರುವ ತಿರುವನ್ನು ಕೊಡಲು ಸಾಧ್ಯ.

ಆ. ಶಾ. ರಂಗೇಗೌಡ

ಬಾಗಿಲನು ತೆರೆದು....

ಬೆಳಗಾಗಿತ್ತು. ಚೆನ್ನಾಗಿ ಬೆಳಕಾಗಿರಲಿಲ್ಲ. ಸ್ನಾನ ಮಾಡಿದ ಮೈಗೆ ಗಾಳಿ ರೊಯ್ಯನೆ ಬಡಿದು ಮೈ ಹಿಡಿಝಾಗುತ್ತೆ. ಆಷಾಢದ ಮೋಡ ಹಿಂಡು ಹಿಂಡು ತೇಲುತ್ತಿವೆ. ಏನು ಮಳೆ ಈ ಸಲ ! ಎಷ್ಟು ವರ್ಷವಾಗಿತ್ತೊ ಹೊಳೆ ತುಂಬಿ ಬಂದು, ಈಗ ಸೊಕ್ಕಿ ಹರಿಯುತ್ತಿದೆ. ಕತ್ತಲು ಗುಡಿಸಿಕೊಂಡು, ಮೋಡ ಕಚ್ಚಿಕೊಂಡು, ಜರ‍್ರನೆ ಮಳೆ ಬಡಿಯತೊಡಗಿತೆಂದರೆ ಆಚೆ ಹೊರಡುವಂತಿಲ್ಲ. 'ಅದ್ರಿ ದನ ಬಂದಂಗ್ ಬತ್ತಿತೆ' ಅಂದಿದ್ದ ಕೆಂಗ. ಒಂದು ಸೂರವ್ವ ಬಡಿದು ಹೊಳವಾಗಿ, ಬೆಳಕು ತುಳುಕುತ್ತದೆನ್ನುವಾಗ ಪಡುವಲಿಂದ ರಾಶಿ ರಾಶಿ ಮೋಡ ಬಂದು ತುಂಬಿ ಬಿಡುತ್ತವೆ. 'ಇಶ್ಷ್'ಏನು ಇರಿಚಲ್ಯೋ ಕಾಣೆ, ಮಂಗನೋ ಕೋತ್ತಿಯೋ ನೆಗೆದಿರಬೇಕು. ಮೂಲೆಯ ಹೆಂಚು ಒಡೆದಿದೆ. 'ಅವರ ಮನೆಹಾಳಾಗ' ನಡುಮನೆಯ ಸಗಣಿ ನೆಲ ನೆನೆದು, ಒಂಥರಾ ಗಬ್ಬುನಾತ. ಹಟ್ಟಿಯಲ್ಲಿ ಊರೊಳಗಿಂದ ನುಗ್ಗಿದ ನೀರು ಚರಂಡಿ ಕಟ್ಟಿಕೊಂಡಿರಬೇಕು. ಊರಿನ ಗಲೀಜೆಲ್ಲಾ ತಂದು ಇಲ್ಲಿ–ನನ್ನ ಮುಂದೆಹರಡಿಕೊಂಡು ನಿಲ್ಲುತ್ತೆ. 'ಏನು ಗಲೀಜಿನ ಊರಪ್ಪ !, ಅಲ್ಲ ಜನವಪ್ಪ!' ಕೊಟ್ಟಿಗೆಗೆ ಹೋಗಿ ಎತ್ತಿಗೆ ಹುಲ್ಲು ಹಾಕಿದೆ. ಬಾಗಿಲು ಹಾಕಿ ಒಳಗೆ ಬಂದೆ.

'ಜನಕ್ಕೆ,ದನಕ್ಕೆ, ಒಂದೇ ಸೂರಿನ ಆಶ್ರಯ!' ಎಂದು ಅಚ್ಚರಿಸುತ್ತಾ, ಹೆಟ್ಟಿಗೆಯಿಂದ ಬುಟ್ಟಿ ಕೆಳಕ್ಕಿಳಿಸಿ ಹುಡುಕಿದೆ. ಅರೆ ಎಲ್ಲಿ ಹೋಯಿತು. ತಂತಿ ನೋಡಿದೆ ; ಇಲ್ಲ. ಕರ‍್ರನೇ ಅಂಗಿ ಚಳಿಯಲ್ಲಿ ಹಿಡಿಯಾಗಿ ಹೋದೇನು. ಸಂಜೆ ಹೊಳೆಯಿಂದ ಒಗೆದು ತಂದೆನೋ ಇಲ್ಲವೋ. ಇಕ್ಕಿರುವ ಸೀಲಿಯದು ಎರಡು ಕಡೆ ಹರಿದಿದೆ. ಮತ್ತೆ ಶುರುವಾಯಿತಲ್ಲ ಈ ಮಳೆ. ಈ ಮಳೆಯಲ್ಲೇ ಗದ್ದೆಗೆ ಸೂಪರ‍್ರೋ, ಯೂರಿಯವೋ ಹಾಕಬೇಕು. ಮತ್ತೆ ಇರಿಚಲು. ಆಚೆಯಿಂದ ಬಂದು ಸರಿಮಾಡಬೇಕು. ಅಂಗಿ ನೆನೆದರೆ ಬೇರೆ ಇಲ್ಲವಲ್ಲ ಆ ಕುಂಬಾರ‍್ರ ರಂಗ ಹಾಗನ್ನಬಹುದಾ ? ಸಾವಿರ ಸಾವಿರ ಜೋಡಿ ಹೆಂಚು ಸುಡುತ್ತಾನೆ. ಒಂದು ಜೋಡಿ ಕೇಳಿವರೆ–'ಓ ಐಯ್ಯಾರೇ ಈ ಮಳೇಲಿ ಆವಿಗೆ ಹಾಕಾಕಾತೀತಾ ? ಬ್ಯಾಸಿಗ್ಗೆ ನಿಮಿಗೊಂದು ನೂರು ಜೋಡಿ ಬೇಸ್ತೀನಿ'– ಅಂದಿದ್ದ.

ಆಗಾಗ ಬೆಳಗಿನಾಗ ಈರ ಬಂದರೆ, ಇವನಿಗೂ ರೊಟ್ಟಿಯೋ, ಅನ್ನವೊ, ಕೊಡುತಿದ್ದೆ. 'ಏನೋ ಬಂದೆ'– ಅಂದರೆ, 'ಓ ಸುಮ್ನೇ' ಅಂದವನು 'ಕುಡಿತಕ್ ದುಡ್ಡಾ–' ಅಂದರೆ ಕೆಂಬಲ್ಲು ಬಿಟ್ಟು, ಅರೆಬಿಳಿ ತಲೆ ಕೆರೆಯುತಿದ್ದ ದಿನಗಳಿಗೆ ಲೆಕ್ಕವಿಲ್ಲ. ಈರನಿಗೂ ಇವನಿಗೂ ಒಳ್ಳೆಜೋಡಿ. ಈ ಹರಕು ಅಂಗಿಯಲ್ಲಿ ಮಳೆಗಾಲ ಹೇಗೆ ಕಳೆಯೋದು ! ಪೇಟೆಯಲ್ಲಿ ಕಡವಾದರೂ ತಂದು ಹೊಲಿಸಿಕೋಬೇಕು. 'ಓ ಮರ್ತೆನಲ್ಲಾ !' ಗಕ್ಕನೆ ಎದ್ದೆ. ಆಚೆ ಹೋಗಿ ಹೊಳವಾದದ್ದು ಕಂಡು ನಾಕು ಹೂವು ತಂದು, ಬುಟ್ಟಿಗಿಟ್ಟೆ. ಹೊರಟಾಗ ಹಸಿರು ಬೆಟ್ಟ ಬೆಳಗುತ್ತಿತ್ತು.

ಕಲ್ಲುಕಟ್ಟೆಯ ಹತ್ತಿರ ಜನರ ಗುಂಪು ಏನೋ ಪಿಸುಗುಟ್ಟುತಿತ್ತು. ಕೈ ಬಾಯಿ ಆಡಿಸುವದಷ್ಟೇ ಕಂಡದ್ದು. 'ನನಗೇನಂತೆ'– ನಡೆದೆ. ಈರ ಬರುತ್ತಿದ್ದ. ಅದರೊಳಗಿಂದಲೇ ಇರಬೇಕು. ಊರುತಿದ್ದ ಕೋಲು ಕಂಕುಳಿಗೆ ಸಿಕ್ಕಿಸಿ ಅವುಚಿಕೊಂಡ ಕೈ ಎತ್ತಿ ಸನ್ನೆ ಮಾಡಿದ. ನಿಂತ. ಕರ‍್ರನೆಯ ಗಾಡ ಹೊದೆದಿದ್ದ. ಆದಾದರೆ ಸರಿ. ನನ್ನ ಅಂಗಿಯ ಹಾಗಲ್ಲ. ಗಾಡದ ನಾತ ತೇಲಿತು. ಬೇಡ. ಚಳಿ ಜ್ವರ ಬಂದ್ರೆ ಬರಲಿ– ಅಂದುಕೊಂಡೆ. ತೀರಾ ಹತ್ತಿರ ಬಂದು "ಕೈ ಮುಗ್ದೆ" ಅಂದ. "ಪೂಜೆಗೋ?" ಕೇಳಿದ. ನಾನು ಕತ್ತು ಹಾಕಿರಬೇಕು. ತುಸು ನಕ್ಕ. ಚಳಿಗೆ ಒಂದು ಮೊಗೆ ಕುಡಿದು ಬಂದಿರಬೇಕು. ಸುಮ್ಮನೆ ನಿಂತಿದ್ದ. "ಏನಂತೆ" ಕೇಳಿದೆ, ಕಟ್ಟೆಯ ಕಡೆ ಕೈಮಾಡಿ. ಕ್ಷಣಕ್ಕೆ ಕುತೂಹಲ ತುಳುಕಿಸಿ ಬಿಟ್ಟ. ಗಾಡ ಎಳೆದು ಬಿಗಿಯಾಗಿ ಹೊದ್ದುಕೊಂಡ. ತುಟಿಯ ಮೇಲೆ ಎರಡು ಬೆರಳಿಟ್ಟು ಚಲ್ಲನೆ ಉಗಿದ, ಚರಂಡಿಗೆ. "ರಾತ್ರೆ, ಆನೆ ಬಂದುತ್ತಂತೆ! ಕೆಂಗನ ಗದ್ದೆ ಪಚ್ಚ ಮಾಡೀತಂತೆ! ಸದ್ಯ ಊರೊಳಿಕೆ ಬಂದುಲ್ಲ ನೋಡಿ, ಮಕ್ಕಳು, ಮರಿ ಆಡೋ ಹೊತ್ನಲ್ಲಿ......."
"ಆನೆಯೋ, ಪಡಾಲಿಂದ ಬಂದುರಬೇಕು, ನಮ್ಮ್ ಗದ್ದೆ ಹಳ್ಳಕ್ಕೆ ಇಳುದ್ರೇನಪ್ಪಾ ಗತಿ!" ಅಂದೆ. ಸುಮ್ಮನೆ ನಿಂತೇ ಇದ್ದ. ನಾನು ಹೊರಟೆ.

‘ಆನೆ ಬಂದರೇನಂತೆ’ ಧೈರ್ಯಮಾಡಲು ನೋಡಿದೆ. ‘[illegible]’ [illegible] ನೂಡಿತು. “[illegible] [illegible] ಸೈತು ಗೊಬ್ಬರವಾದರೆ ಗೌಡರೇನಂದಾರು! ನಕ್ಕರೆ, ಕೈ ಕಟ್ಟೆ ನಕ್ಕರೆ, ಫಲ ಇಳುಕಿತು. ಬೆಳೆದ ಗದ್ದೆ ಮಣ್ಣೊಳಗೆ ಕಲಸಿಹೋದದ್ದು ಕಂಡರೆ, ಗಿರಿಯನಿಗೆ ತೃಪ್ತಿ ಯಾದೀತು. ಹುಚ್ಚಪ್ಪ ಇನ್ನೊಂದು ನೊಗೆ [illegible] [illegible]. ಮತ್ತೆ ಬಂತಲ್ಲಪ್ಪ ಹಾಳು ಗಾಳಿ, ಮಳೆ. ಓ ಆಗ್ಲೇ ಗುಡ್ಡದ ಮೇಲೆ ಕರ್ರಗೆ ಜೇನು ಕಟ್ಟಿದ ಹಾಗೆ ಮೋಡ, ಹೆಜ್ಜೆ ಇಡುವಾಗ ಸುರಿಯಕೊಳ್ಳುತ್ತೆ. ಏನು ನೋಡಗಳಪ್ಪ, ಕಡಿಸಿದಹಾಗೆ ಅಬ್ಬರಿಸು ತ್ತಾವೆ. ಹೊಳೆ ಬಂದಿತ್ತು. ಬುಟ್ಟಿ ಇಟ್ಟು ಕೈ ಕಾಲಿಗೆ ನೀರು ಹಾಕಿಕೊಂಡೆ. ನೀರೊಳಗೆ ಹಸಿರು ಅಂಚು.

ಊರ ಕಡೆಗೆ ನೋಡಿದೆ. ಹೋರಿಯ ಹಾಗೆ ನುಗ್ಗುವ ಗಾಳಿಗೆ ಹಿತ್ತಿಲ ನೀಲಗಿರಿ ಮರಗಳು ಬಾಗುತ್ತಾ, ಏಳುತ್ತಾ, ಇವೆ. ಮಳೆಗೆ ಹೆದರಿದ ಕೋಳಿಗಳ ಹಾಗೆ ಮುಸುರಿಕೊಂಡು ಒತ್ತಾಗಿ, ಕುಳಿತ ಮನೆಗಳು. ಗೌಡರೊಬ್ಬರದೇ ಮಂಗ ಳೂರು ಹೆಂಚಿನ ಮನೆ. ಊರಿಗೆಲ್ಲಾ ಸ್ವಲ್ಪ ದೊಡ್ಡದು; ಗೌಡರ ಹಾಗೆ. ಆಚೆಗೆ ಅವರದ್ದೇ ಮಾವಿನ ತೋಪು. ಊರಿಂದ ಮುಂದಕ್ಕೆ ಅಲಾ ದದ ಕಾಣುವ– ನಾನಿರುವ ಮನೆ. ಹಿತ್ತಿಲಲ್ಲಿ ಕೆಂದಿ, ಅದರ ಕರು. ಕೊಟ್ಟಿಗೆಯಲ್ಲಿ ಉಕ್ಕೆ ಗಿಡ್ಡ ಗಳು. ಮನೆ ಅರ್ಧ ಬಿದ್ದಿದೆ. ಎಷ್ಟು ದಿನ ವಾಯಿತೋ? ಮುಂಡ ಗೋಡೆಗಳ ನಡುವೆ ಮುಳ್ಳು ಗುತ್ತಿಗಳು! ಆಚೆಯ ಪಕ್ಕಕ್ಕೆ ಹತ್ತಾರು ಬಾಳೆಯ ಮರಗಳು. ಆನೆಗೆ ಬಾಳೆ ಎಂದರೆ ತುಂಬಾ ಇಷ್ಟವಂತೆ! ಮನೆ!?

ಇನ್ನು ಎರಡೇ ಮಾರು. ಇಷ್ಟು ದೂರ ಬಂದು ಈಗ ನೆನೆದರೆ ಹೇಗೆ? ಮಳೆ ಪಟ ಪಟ ಉದು ರಲು ಶುರುವಾಯಿತು. ಅವಸರಿಸಿ ಹೋದೆ. ಬಾಗಿಲು ತೆಗೆದಿತ್ತು. ಸಂಶಯ ಮೂಡಿತು. ಮೆಲ್ಲಗೆ ಇಣುಕಿ ನೋಡಿದೆ. ಗೌಡರು ನಿಂತಿ ದ್ದಾರೆ! ಎತ್ತರಕ್ಕೆ ಬಿತ್ತರಕ್ಕೆ ಹೀಗೆ ಬರುವುದು ಅಪರೂಪ. ಕಾರ್ತಿಕದಲ್ಲೋ, ಮತ್ತೊಮ್ಮೆಯೋ ಬಂದರೆ ಮುಗಿಯಿತು. “ಶರಣೂ” ಅಂದರು. ನಾನೂ ಅಂದೆ, ಅವರನ್ನೇ ನೋಡುತ್ತಾ. ‘ಈಟು ದೂರ?’–ಕೇಳಿದೆ, “ಮೂಡ್ಲ ಹೊಲ್ದ ಆಗಸು ಕಡಿಯಾಕೆ ಆಳು ಬಂದವ್ರೆ. ನೋಡಾನ ಅಂತ ಬಂದೆ” ನಿಧಾನವಾಗಿ, ಆಳವಾಗಿ ಕೊರೆಯುವ

ನಮ್ಮೊಂದಿಗೆ ಕಣ್ಮರೆಯಾಗಿರುವ ರಂಗೇಗೌಡ ಸಮಾಜವಾದೀ ಚಟುವಟಿಕೆಗಳಲ್ಲಿ ಹೊಸ ಹರುಪಿನೊಡನೆ, ಸಕ್ರಿಯವಾಗಿ ಭಾಗವಹಿಸುತ್ತಿದ್ದ ಬಗ್ಗೆ–ನಾವು ಅವರನ್ನು ಮರೆಯದಂತೆ ಮಾಡಿದೆ. ಅವರು ಒಳ್ಳೆಯ ಕಾರ್ಯಕರ್ತರಷ್ಟೇ ಅಲ್ಲದೆ ಸೃಜನಶೀಲ ಬರಹಗಾರರೂ ಆಗಿದ್ದರು ಎಂಬುದಕ್ಕೆ ಅವರ “ಬಾಗಿಲಸು ತೆರೆದು....” ಕಥೆಯೇ ಸಾಕ್ಷಿ.

—ಸಂ

ಹಾಗೆ ಅಂದರು–“ಮಳೆ ಮಕ ಕಂಡು ಇತ್ಲಾಗಿ ಓಡ್ದೆ” ಸೇರಿಸಿದರು. ಗೌಡರ ದನಿ ಗುಡಿಯ ತುಂಬ ತುಂಬಿ ಕೇಳಿಸಿತು. ಪೂಜೆ ಮುಗಿದಾಗ ಬಾರಿಸಿದ ಗಂಟೆಯೂ ಹಾಗೆ ಸದ್ದು ಮಾಡಲಿಲ್ಲ. ಜೋರುಮಾಡಿದೆ, ಮಂತ್ರವನ್ನೂ, ‘ಉಹುಂ’ ನೆಲಕ್ಕಿಟ್ಟೆ. ತೀರ್ಥ, ಪ್ರಸಾದ ತಂದು ಕೊಟ್ಟೆ. ಅಡ್ಡ ಬಿದ್ದ ಗೌಡರ ಬಾಯಿ ಮಣ ಮಣಿಸಿತು.

ಈಚೆ ಬಂದು ಗೌಡರ ಎದುರು ಕೂತೆ. ಗೋಡೆಯನ್ನು ನೋಡಿದೆ, ಮುಖನೆಸುರೇ ಎದ್ದು ಮೇಲಕ್ಕೆ ಹೋದ ಹಾಗೆ ಕಂಡಿತು. ಕಿಟಕಿ ಇರ ಲಿಲ್ಲ. ಅರೆಗತ್ತಲು. ನನ್ನ ಪೂಜೆ ಹೊಗಳಿದರು. “ಮುವ್ವತ್ತಕ್ಕೇ!” ಅಚ್ಚರಿ ಬೀರಿದರು. ನನ್ನ ಗದ್ದೆ ಹೇಗಿದೆ ಎಂದು ಕೇಳಿದರು. “ಚೆನ್ನಾಗೀತೆ. ಚೂರು ಕಳೆ ಇತ್ತು, ನಾಳೆ ನಾಡ್ದು ಕೀಳು ಸ್ತೀನಿ” ಅಂದೆ. ಕಳೆದ ವರ್ಷ ಕದ್ದು ಹೊದ ಪೂಜಾರಿಯನ್ನು ವಿವರಿಸಿದರು. ‘ಅಯ್ಯೋ ಒಂದೇ, ಎರಡೇ’ ಆವನು ಕದ್ದದ್ದರ ಪಟ್ಟಿ ಮಾಡಿದರು. ಬೇಸಗೆಯಲ್ಲಿ ಗೋಡೆಗೆ ಸುಣ್ಣ, ನೆಲಕ್ಕೆ ಗಾರೆ ಹಾಕಿಸುವ ಮಾತಾಡಿದರು. ತಮ್ಮ ಕಾಫಿ ತೋಟದ ಕುರಿತು ಹೇಳಿದರು. ನಾನು ಕೇಳುತ್ತಾ–“ತ್ವಾಟೊಳ್ಳೆ ವೈನಾಗೀತೆ ಗೌಡ್ರೆ” ಅಂದೆ. “ಮತ್ತೇ” ತಮ್ಮ ಕಷ್ಟ, ಹೆಮ್ಮೆ, “ಅಪ್ಪೇ” ನ್ಯಾಯ ನಿಯತ್ತು ಎಲ್ಲ ಬಿಚ್ಚಿದರು. “ನಾ ನ್ಯಾಯ ಮೀರೋನಲ್ಲ” ಹೆಮ್ಮೆ ಪಟ್ಟರು, “ಕಳ್ಳು ನನ ಮಕ್ಕಳು ಒಂದಕ್ಕೆ ಹತ್ತು ಹೇಳ್ತಾರೆ.” ಹೊಲೆಯರಿಗೆ ಮೋಸ ಮಾಡಿದ್ದು. ಅನ್ಯಾಯಕ್ಕೆ ತ್ವಾಟ ಬೆಳೆಸಿದ್ದು, ದುಡ್ಡು ತಿಂದದ್ದು, ಸುಳ್ಳು, ಹಾದರ ಎಲ್ಲ ಸುಳ್ಳು” ಅಂದರು, “ಹೇಳಿದೋನ ಬಾಯಿಗೆ ಮಣ್ಣಾಕ” ದೂರಿದರು. ನನಗೆ ಏಳುವ ಆತುರ. ‘ಒಂಟ ಸಿಕ್ಕಿದೆನೆಂದು ಕಂತೆ ಬಿಚ್ಚುತಿದ್ದಾರೆ, ತಮ್ಮನ್ನ [illegible] ‘[illegible]ವದ್ದಾರೆ’ ಅನ್ನಿಸಿ ‘ಶರಣಾಯ್ತು. ಬೆಳ್ಳಗಾಗೋ ಮಾತಾಡ್ತಾರೆ’ ಸಿದ್ಧನಾಗಿ “ಹೊರಟಾತು” ಅಂದೆ. “ಅನ್ನೆ ಹೊತ್ತಾಗೀನೆ, ನಮ್ಗೆ ಹೇಗಾರ ಆಗ್ಲಿ. ದೇವ್ರು, ದೇವ್ರ ನೆಲ ಚೆಂದಾಗಿ ನೋಡ್ಕಳ್ಳಿ” ಅನ್ನುತ್ತಾ ಎದ್ದುಹೋದರು. ನಾನೂ ಹೊರಟೆ.

★ ೨ ★

ಬರುವಾಗ ತಲೆತುಂಬ ಅವರೇ ಮಾತಾಡು ತ್ತಿದ್ದರು. ಶನಿವಾರ ಗಿರಿಯನೂ ಹೀಗೆ ಮಾಡಿದ್ದ. ಮಾತೆಲ್ಲ ಸತ್ಯ, ನ್ಯಾಯದಬೇ ಅದ್ದಿ ಆಡುತ್ತಿದ್ದ. ತೀರ ಹತ್ತಿರ ಬರುವಹಾಗೆ ತೋರಿಸಿ ಗುಟ್ಟಿನ ಗೋರಿಯಲ್ಲಿ ಮಳುಗುತ್ತಿದ್ದ. ಏನು ಗಲೀಜು ಊರಪ್ಪ! ಅಲ್ಲ, ಜನವಪ್ಪ! ಮಳೆನೀರು ಎಲ್ಲ ವನ್ನೂ ಕೊಚ್ಚಿಕೊಂಡು ಬಂದು ನನ್ನ ಮುಂದೆ ಹರಡಿಕೊಂಡು ನಿಲ್ಲುತ್ತೆ! ಇಂತಾ ಚಳಿಯಲ್ಲಿ ಈ ಅಂಗಿ ಸಾಕೇ, ‘ಸೋರುವ ಮನೆಯಲ್ಲಿ ಮಳೆ ಗಾಲ ಕಳೆಯುವದು ಹೇಗೆ? ಓ ಏನು ತಲೆ ನಂದು! ಹೊಳೆಯ ದಾರಿಬಿಟ್ಟು ಈ ಉಸುಬಿನ ದಾರಿಯಲ್ಲಿ ಬಂದೆನಲ್ಲ! ಮಳೆಗಾಲದಲ್ಲಿ ಇಲ್ಲಿ ತಿರುಗಿದವರೇ ಇಲ್ಲ. ಈ ದಾರಿಗೆ ಮಳೆಗಾಲದಲ್ಲಿ ಹಸಿವಾಗುತ್ತೆ! ಈ ಕಡೆ ಬರುವ ದನವೋ, ಎಮ್ಮೆಯೋ, ಜನವೋ ನುಂಗುವ ಹಸಿವು. ನಕ್ಕೆ. ಕಾಲು ಹೂಳಿಕೊಳ್ಳುತ್ತಿದೆ. ಹಾಳು ಜಿಗಣೆಗಳು ಬೇರೆ. ಕಚ್ಚಿಕೊಂಡರೆ ಬಿಡುವುದೇ ಇಲ್ಲ; ಎಳೆದು ಅರ್ಧಕ್ಕೆ ಹರಿದು ಹೋದರೂ! ಆಗಲೇ ಮೂರೋ ನಾಲ್ಕೋ ಕಚ್ಚಿಕೊಂಡಿವೆ. ಹೀರು ತ್ತಿವೆ. ಒಂದರ ತುದಿ ಹಿಡಿದು ಎಳೆದೆ. ಉದ್ದ ವಾಯಿತು, ರಬ್ಬರಿನ ಹಾಗೆ. ಬಿಡಲಿಲ್ಲ, ಮತ್ತೆ ಕಿತ್ತೆ. ರಕ್ತ ಚಿಲ್ಲನೆ ಹಾರಿ ಕಾಲಿನ ಮೇಲೆ ಇಳಿ ಯಿತು. ಕೈಹಾಕಿದರೆ ಸಿಕ್ಕದೆ ನುಣುಚಿಕೊಳ್ಳು ತ್ತವೆ. ಮಳೆ ಬರುವ ಹಾಗಾಗಿತ್ತು. ಧಡ ಧಡ ಸುರಿಯುತ್ತೆ. ಮಾವಿನ ಮರದ ಕಾವಲಲ್ಲಿ ದನ ಮೇಸುತ್ತಿದ್ದ ಕರ್ಯ ಕೂಗುತಿದ್ದ–“ಅಲ್ಲಿ ಹೋಗ್ ಬ್ಯಾಡೀ. ಇತ್ಲಾ ಇತ್ಲಾಗ್ ಬನ್ನೀ....” ಸ್ವಲ್ಪ ಅಡ್ಡ ಹೊರಳಿದೆ. ಗಟ್ಟಿ ನೆಲ ಸಿಕ್ಕ ಹಾಗೆ ನೀಸಿ ಮುಂದೆ ಹೋದರೆ ಮತ್ತೆ ಹೂಳಿಕೊಂಡೆ. ಮಳೆ ಜೋರಾಯಿತು. ಹೂಳಿಕೊಳ್ಳುವ ಕಾಲು, ಅಂಟಿ ಹೀರುವ ಜಿಗಣೆ. ‘ನಾನ್ಯಾಕೆ ಇಲ್ಲಿ ಬಂದೆ; ಹೊಲದ ದಾರ್ಯಲ್ಲಾದರೂ ಹೋಗಬಹು ದಿತ್ತು. ಈತನ ಗದ್ದೆ ಇರಾದು ಅಲ್ಲೇ, ಒಂದ್ಸಲ ನೋಡ ಬೈದಿತ್ತು: ಇನ್ನೊಂದೇ ತಿಂಗಳಂತೆ

ಮಗನ ಮದುವೆ. ಗದ್ದೆ ನೋಡಿ, ಯಾವುದನ್ನು ನಿರ್ಧರಿಸ ಬಹುದಿತ್ತು. ಸಾಲ ಮಾಡಿಯಾದರೂ ಅವನಿಗೆ ದುಡ್ಡು ಕೊಡ ಬಹುದಿತ್ತು. ಬೇಗ ಈ ಉಸುಕಿನಿಂದ, ಪಾರಾಗಬೇಕೆನಿಸಿತು. ಬೇಡದ ಪೂಜೆ! ಏನು ಜಿಗಣೆಗಳಪ್ಪಾ! ರಕ್ತ ಮುಗಿದರೂ ಬಿಡುವ ಹಾಗಿಲ್ಲ! ಗೌಡರ ಹಾಗೆ.... ಉಸುಬು ಕೆಳಕ್ಕೆಳೆಯುತ್ತದೆ. ಅದರ ಗರ್ಭದ ಕತ್ತಲಿಗೆ, ನಾನು ಮೆಲಕ್ಕೆಳೆಯುತ್ತೇನೆ. ಹೊಳೆ ಸೊಕ್ಕಿ ಬೋರಾಡುತ್ತಿದೆ. ಬೇಗ ಆಚೆಗೆ, ದೂರಕ್ಕೆ, ಬೆಳಕಿಗೆ ಹೋಗಿ ಬಿಡಬೇಕು. ಈರನ ಗದ್ದೆ ಉತ್ತು ನಾಕು ಹೇರು ಭತ್ತ ಬೆಳೆದು ಹಂಗಿಲ್ಲದೆ ಬದುಕೇನು. ಯಾರಿಗೆ ಬೇಕು ಇವರ ವಂಚನೆ, ಮೋಸ, ದರ್ಪ, ಭ್ರಮೆ–ಕಳೆದ ಒಂಪು ವರ್ಷದ ಬದುಕೇನು ? ಎಂದು ನೋಡಿವೆ. ಅಲ್ಲಿ ಏನೂ ಕಾಣಲಿಲ್ಲ. ಎಲ್ಲ ಭ್ರಮೆ. ಸತ್ತ ಅಪ್ಪನಿಗೂ ನನಗೂ, ಶವಕ್ಕೂ ನನಗೂ ವ್ಯತ್ಯಾಸ ಕಾಣದೆ ಕೊರಗಿದೆ. 'ಹ್ದತ್' ನೆನ್ನೆ ಯೋಚನೇಲಿ, ಉಸುಬಿನಲ್ಲಿ ಸಿಕ್ಕಿ ಕೊಳ್ಳುತ್ತಿದ್ದೇನೆ. ಯಾಕೆ ಹೀಗೆ ಭ್ರಮೆಯಲ್ಲಿ ಬದುಕುತ್ತಿದೇನೆ. ಯಾವುದು ನಿಜ ? ಯಾವುದು ಭ್ರಮೆ ? ಗೌಡರೋ ? ನಾನೋ ? ದೇವರೋ ? ಈರನೋ ? ಗದ್ದೆಯೊ? ಥ್ಥೇ ಎಂಥಾ ಉಸ್ರಬು ಇದು, ಉಸುಬೇ ಹೀಗೆ. ಮತ್ತೆ ಉಸುಬಿಗೇ ಇಳಿಯುತಿದ್ದೇನಲ್ಲ. ಯಾಕೆ ಹೀಗೆ ಮನಸ್ಸೆಲ್ಲ ಕೆಸರು ಮಾಡಿಕೊಂಡಿದ್ದೇನೆ ? ಯಾಕೆ ಗಟ್ಟಿಯಾಗಿ ಯೋಚಿಸಲೂ ಆಗುತ್ತಿಲ್ಲ ? ಕೆಸರು ಕಾಲಿಟ್ಟ ಕಡೆ ನಗುತ್ತೆ, ತೊಸ ತೊಸನೆ, ನುಂಗುತ್ತೆ !

ತಲೆಯ ನೀರು ಮುಖದ ಮೇಲೆ ಹನಿ ಹನಿ ಇಳಿಯುತ್ತಿತ್ತು. ಕೊಡೆಯಾದರೂ ತರಬಹುದಿತ್ತಲ್ಲ. ಅದಕ್ಕೊಂದು ಲಕ್ಷ ತೂತು ಮಾಡಿದೆ ಹೆಗ್ಗಣ ; ರಾತ್ರಿಯ ಆಕಾಶದ ಹಾಗೆ. ಬಳಸು ದಾರಿ ಹಿಡಿದು ಮನೆಗೆ ಬರುವಾಗ ತುಂಬ ಹೊತ್ತಾಗಿತ್ತು. ಜಗಲಿಯ ಮೇಲೆ ಈರ ಕೂತಿದ್ದ. ಕಾಲಿನಲ್ಲಿ ನಾಕಾರು ಕಡೆರಕ್ತ!

"ಈವತ್ತು ಪೂಜೆ ಭಾಳಾ ಉದ್ದಾಯ್ತು" ಅಂದು ನಕ್ಕ.

ಯಾವಾಗ್ ಬಂದ್ಯೊ ? ಅಪ್ಪಾರಾ ಹೊತ್ತಾಯ್ತಾ ? ಕೇಳಿದೆ. ಈಗ ತಾನೇ ಬಂದನೆಂದು ತಿಳಿಸಿದ. ಕಾಲು ತೊಳೆದೆ. ಉರಿ, ಉರಿ. ಜಿಗಣೆಗೆ ಜೈದೆ. ಕಲ್ಲ ಮೇಲೆ ನೀರಿನೊಂದಿಗೆ ರಕ್ತ. ಈರನಿಗೊಂದು ರೊಟ್ಟಿ ಕೊಟ್ಟೆ. ನಾನೂ ತಿಂದೆ. ನೀರು ಒಣಗಿ ಕಲ್ಲ ಮೇಲೆ ರಕ್ತದ ಕಲೆ. ಬಾಳೆ ಹಿತ್ತಲಲ್ಲಿ ಕರು.

'ಮಳೆ, ಬೆಳೆ, ಗಾಳಿ, ಆನೆ' ಅಂಥ ನಾಕು ಮಾತು ನಕ್ಕ. ಇಬ್ಬರು ಮಕ್ಕಳೂ ಗೌಡರ ತೋಟಕ್ಕೆ ಹೋದರೆಂದ. "ದ್ಯಾಗ ಹೆಂಡಕ್ಕೆ ನೀರು ಬೆರುಸ್ತಾನೆ" ಬೈದ. "ಸಣ್ಣಕಟ್ಟೇ ಕುಚ್ಚಿನ್ ಮೀನು ಏನು ರುಚಿ ಅಂತೀರಿ" ಕೆಂಬಾಯಿಂದ ನೀರು. ಎಲೆ, ಅಡಿಕೆ, ತೆಗೆದು ಕುಟ್ಣಿಗೆ ಹಾಕಿ ನುರಿಸತೊಡಗಿದ. ಸುಗ್ಗಿ ಕುಣಿತ, ದ್ಯಾಗ ದೋಣಿ ಹಿಡಿದದ್ದು, ಮಾರಿಗೆ ಜೋಡಿಕೋಳಿ.... ಮಳೆ ನಿಲ್ಲುವ ತನಕ ಹೇಳಿದ. "ಸಂದ್ಯಾಗ ಗೌಡ್ರು...." ಶುರು ಮಾಡಿದಾಗ ಕಿವಿ ಹೊಸದು ಮಾಡಿದೆ. ಲಗ್ಗೆಗೆ ಬುಸುಗುಡುವ ಹೋರಿಯಂತೆ ತಕ್ಷನೆ ನಿಂತರು ಗೌಡರು. "ಆಮ್ಯಾಲೇ...." ಕುತೂಹಲ ತೋರಿದೆ. "ನನ್ನ ಕರೆಸಿದ್ರು ಎವ್ವೆ, ಎವ್ವೆ ಆ ಕಣ್ಣು ಕೆಂಡವೇಸೈ "ಜೋ ಈರಾ ಗದ್ದೆ ಕೊಡ್ತೀಯೆನ್ಲಾ ಆ.... ಅಂದ್ರು. ನಂಗ್ ಹೆದ್ರಿಕ್ಯಾಗೀ ನಾಲಿಗೇ ಹೊಳ್ಳುನುಳ್ಳ. ಎದ್ದು ಬಂದ್ರು ಕೋಲ ತಗಂದು ಬೆನ್ನಿಗೊಂದೇಟು ಕೊಟ್ರು ...., ಆಹ ಹಾ ಇನ್ನೂ ಹ್ಯಾಂಗ್ ನೊಯ್ತಾ ಈತೆ ಅಂತೀರಿ "ನೀ ಏನಾರ ಅವ್ರನ್ಗೆ ಗದ್ದೆ ಮಾರ್ದ್ರೆ ಸಿಗ್ದು ತ್ವಾರ್ಣ, ತ್ವಾರಣ ಕಟ್ತೀನಿ ಹುಂ" ಅಂದ್ರು ಈರನ ಮಾತು ಮುಗಿದಾಗ ಕಣ್ಣಲ್ಲಿ ನೀರು. ಧೈರ್ಯ ಹೇಳಿದೆ.

ಸ್ವಲ್ಪ ಹೊತ್ತು ಸುಮ್ಮನಿದ್ದೆ ಕೇಳಿದೆ–"ಗದ್ದೆ ನಂಗೆ ಕೊಡ್ತೀಯಾ?" ಗೆಲುವು ಚಿಮ್ಮಿದ ಮೆಲ್ಲಗೆ ಅಂದ.–"ಒಂದ್ಸಲ ಆಡಿದ್ದು ಮಾತಲ್ವ.... ಹೇಳಿ...ನಿಮ್ ಮನ್ಸು ದೊಡ್ದು ಐಯ್ಯಾರೇ.... ನಿಮ್ ಮನ್ಯೊನಂಗೆ ನನ್ನ ಸಾಕಿದೀರಿ.... ನಿಮ್ಮುಟ್ಟಿ ನಾಲ್ಗೆ ಎಲ್ಡು ಮಾಡಿ ನಾ ಬದುಕೇನ ಆ ಮಾರವ್ವ ನನ್ನ ಬುಟ್ಟಾಳ"

ಒಳಕ್ಕೆ ಹೋಗಿ, ಮುಂದ್ಲಿಕೆ ತಂದು ಬಿಚ್ಚಿ ಕೂತೆ. "ಈರಾ" ಅಂದೆ. "ಓ, ಏನಂದ್ರಿ" ಅವನೂ ಏನೊ ಚಿಂತಿಸುತ್ತಿರಬೇಕು. ಊಹಿಸಿದೆ. "ಈರಾ ಒಂದ್ ಮಾತು ಹೇಳ್ತನಿ ಆ ಹುಚ್ಚಪ್ಪ ಆಚಾರಿ 'ದೇವ್ರ ಗದ್ದೆ ನಂಗೆ ಕೊಡ್ಲಿ ನಾನೇ ಪೂಜೆ ಮಾಡ್ತನಿ' ಅಂದ್ನಂತೆ. ಇವತ್ತು. ನಿನ್ನುಟ್ಟಿ ಹೇಳ್ತಾ ಇದೀನಿ, ದೇವ್ರ ಪೂಜೆ ನಂಗೆ ಬ್ಯಾಡ ಈರಾ. ಆ ಹಂಗಿನ್ ಗದ್ದ್ಯೂ ಬ್ಯಾಡ. ಹಾಳು ಬಿದ್ದೈತಲ್ಲೊ ನಿನ್ನಗದ್ದೆ. ಅದ್ನೇ ಉಳ್ತೀನಿ. ನನ್ ಪಾಡಿಗ್ ನಾ ಬಾಳ್ವೆ ಮಾಡ್ತೀನಿ. ನೋಡು ಈರಾ, ಈ ಗೌಡ, ಈ ಗಿರಿಯ, ಹುಚ್ಚ ಯಾರ ಮ್ಯಾಲೂ ನಂಗೆನಂಬ್ಕೆ ಇಲ್ಲ. ಎಲ್ಲ ಗುಳ್ಳೇ ನರಿಗೊಳುಕನೋ ಮುಂಡ್ಲೆ ಮುಂಗಾರಲ್ಲಿ ನನ್ನಗದ್ದಿಗೆ ಆರು ಹೂಡಿದ ದಿನ ನಂಗೂ ಈ ಪೂಜೆಗೂ ಈ ಗುಳ್ಳೆ ನರಿಗೊಳಿಗೂ ಸಮ್ಮಂದ ನೆಗದ್ ಬಿತ್ತು ಅಂತಾ ತಿಳಿ" ಕೇಳುತಿದ್ದ ಈರ, ಏನೋ ಹೇಳಲು ಹೊರಟ. ಎದ್ದ. ಆಚೆ ಹೋಗಿ ಉಗಿದು ಬಾಯೊರಸಿ ಬಂದ, ಗಾಡ ಎಳೆದು ಕೊಳ್ಳುತ್ತಾ. "ಏನ" ಕೇಳಿದೆ. "ಅ ಹುಚ್ಚಪ್ಪ.... ನೀವ್ ಕಂಡಂಗೆ ಆ ಮುಂಡೆ ಮನೆ ನುಂಗ್ದ. ಇನ್ನ ದ್ಯಾವ್ರು...." ಅವನ ಮಾತಿನ ನಿಧಾನ ಕತ್ತರಿಸಿ ಅಂದೆ– "ಗೊತ್ತೋ ಈರಾ, ಅದೆಲ್ಲ ಈಗ್ ಬ್ಯಾಡ.... ನಂಗೆ ತಲೆ ನೊಯ್ತಾ ಐತೆ" "ಸಾಳೀಕ್ ಬತ್ತೀನಿ. ಒಂದ್ ನಿದ್ದೆ ಮಾಡಿ, ಎಲ್ಲ ಸುಮ್ನಾಯ್ತಿತೆ" ಅಂದು ಹೋದ. ಎತ್ತಿದೆ ಹುಲ್ಲು ಹಾಕಿ ನೀರಿಟ್ಟು ಬಂದೆ ಕೆಂದಿ ಬಾರೆಗೆ ಹೋಗಿತ್ತು. ಕೂತೆ ಬಾಳೆಯ ಮರದ ಕೆಳಗೆ ಕರು. ಈಚೆ ಬಂದೆ. ಹಾಳು ಗೋಡೆಗಳ ನಡುವೆ ಮುಳ್ಳು ಗುತ್ತಿಗಳು! ಕಲ್ಲಿನ ಮೇಲೆ ರಕ್ತದ ಕಲೆ.

★ ೩ ★

ದೆವ್ವ ಮಳೆ. ರಾತ್ರಿಯೆಲ್ಲಾ ಮಳೆ ಸೊಕ್ಕಿ ಬಡಿದರೂ ಮೋಡದ ಒತ್ತಡ ಸಡಿಲಿರಲಿಲ್ಲ. ಬಾಳೆಯ ಗಂಗಳ ಮೇಲೆ ಹನಿಗಳು ಟಪಟಪ ಸದ್ದು ತುಂಬುತಿದ್ದವು. ಮಳೆ ತೆಳುವಾದಾಗ ಹೊಳೆಯ ಅಬ್ಬರ ನುಗ್ಗುತ್ತೆ. ಮಾಡಿನ ಹೆಂಚಿನ ಮೇಲೆ ಯಾರೋ ಹೆಜ್ಜೆ ಇಟ್ಟು ನಡೆದಂತೆ ಸದ್ದು. ಕಂಬಳಿಯೊಳಗೆ ಮಗ್ಗಲು ಬದಲಿಸಿದೆ. ಮಂಗನೋ, ಕೊತ್ತಿಯೋ, ಎಂದುಕೊಂಡೆ. ಹೆಂಚಿನ ಸಂದಿ ಗಾಳಿ,ಗಾಳಿಯ ಜತೆ ಗೌಡರ, ಈರನ, ಗಿರಿಯನ ಚಿತ್ರಗಳು; ಅವರ ಮಾತುಗಳು ಕಲಸಿಕೊಂಡು ನುಗ್ಗುತಿದ್ದವು. ಊರೊಳಗಿಂದ ಸಪೂರ ದನಿ. ಆಲಿಸಿದೆ. ರಾಗಿ ಬೀಸುವರಿರಬೇಕು, ಪದ ಹೇಳುತಿದ್ದಾರೆ. ಬೇಸರ ಕಳೆಯಲು; ಅಲ್ಲ ಸಂಕಟ ತೊಳೆಯಲು–

"ಬೀಸೊ, ತಂಗಾಳ್ಯಾಗೋಯ್ ...
ಏಸೊಂದು ರಾಗಗಳೋಯ್...."

ನಿದ್ದೆ ಬಂದಿರಬೇಕು. ಹಾಡು ಕೇಳಿಸುತ್ತಿರಲಿಲ್ಲ.

ಫಡರ್ರನೆ ಭಾರೀ ಸದ್ದಾಗಿರಬೇಕು. ಎಚ್ಚರನಾಯಿತು. ಇಡಿಯ ಮೈಯನ್ನು ಏನೋ ಅಪ್ಪಚಿಕೊಂಡಹಾಗಿತ್ತು. ಒಂದು ಕೈ ಕಂಬಳಿಯಿಂದ ಈಚೆ ತೆಗೆದೆ. ಹೊಟ್ಟೆಯ ಮೇಲೆ ತಡವರಿಸಿದೆ. ಹೆಂಚು, ಕಡ್ಡಿ ಗೀರಿದೆ. ಪಕ್ಕದ ಹೊರಮನೆಯ ಮಾಡು ಬಿದ್ದಿರಬೇಕು. ಮಲಗಿಕೊಂಡೇ ಊಹಿಸಿದೆ. ಹೆದರಿರಬೇಕು. ಮೈ ಬೆವೆತಿತ್ತು. 'ದೀಪ ಕಚ್ಚಿ ಆಚೆ ಹೋಗಿ ನೋಡಲೇ' ಯೋಚಿಸಿದೆ ಆನೆ ಬಂದಿದ್ದರೆ! ಏಳುವ ಧೈರ್ಯವಾಗಲಿಲ್ಲ. ಹಾಗೇ ಮಲಗಿದ್ದೆ. ಮಾವಿನ ತೋಪು, ಒಂದು ಮರ ಅಲ್ಲಾಡುತ್ತಿದೆ! ನಡೆಯುತ್ತಿದೆ. ಆನೆಯ . ಹಾಗೆ ಕಂಡಿತು. ತೇಲಿದ ಹಾಗೆ ಕಂಡಿತು. ಕರ್ರಗಾಗುತ್ತಿದೆ. ಮುಖ ನೋಡಿದೆ. ಗೌಡರ ಮುಖ! ಆನೆಯ ಮೈ ತೇಲುತ್ತಿದೆ. ಕತ್ತಲು ತೆವಳಿ ಬಂದ ಹಾಗೆ. ಬಂದು ತಬ್ಬಿ ಹಿಸುಕಿದ ಹಾಗೆ! ಗಿರಿಯನ ಮುಖ! ಅಲ್ಲ ಹುಚ್ಚಿ, ಈರ, ರಂಗ, ದೇವಿ, ಮಾಳಿ ಹೆದರಿ ನೋಡಿವೆ. ಮನೆಯ ಕಡೆಗೇ ಬರುತ್ತಿದೆ; ನಿಧಾನವಾಗಿ, ಎದೆಯ ಮೇಲೇ ನಡೆದು ಹೋದ ಹಾಗೆ! ಈಗ ನೋಡುತ್ತೇನೆ ಕಣ್ಣು ಮುಖ ಏನೂ ಇಲ್ಲ! ಬರಿಯ ಕಪ್ಪು ಮುದ್ದೆ! ಜನಗಳ ಗದ್ದಲ. ಕಣ್ಣು ಬಿಟ್ಟೆ ಗೋಡೆಯ ಮೇಲೆ ಬಿಸಿಲು ಗೋಲಗಳು ಮೂಡಿದ್ದವು. ಯಾರೋ ಬಾಗಿಲು ನೂಕಿದರು. ಇಣುಕಿತು; ಒಂದು ಕಪ್ಪು ಮುಖ. ಯಾರೆಂದು ನೋಡಿದೆ. ಸರಕ್ಕನೆ ಆಚೆ ಹೋಗಿ ಮತ್ತೆ ಬಾಗಿಲು ಹಾಕಿದರು. ಎದ್ದು ಕೂತೆ. ಏನಾಯಿತೆಂದು ಯೋಚಿಸಿದೆ. ಹೊಳೆಯಲಿಲ್ಲ. ಹೋಗಿ, ಬಾಗಿಲು ತೆಗೆದು ಆಚೆ ನೋಡುತ್ತೇನೆಂದು ಎಳೆದೆ. ಬಾಗಿಲು ಬರಲಿಲ್ಲ. ಹೊರಗಿಂದ ಚಿಲಕ ಹಾಕಿಕೊಂಡಿದ್ದರು. ಹೊರಗೆ ಸದ್ದಿಲ್ಲ."ಬಾಗಿಲು ತಗೀರಿ"– ಕೂಗಿದೆ. "ಯಾರು ಆಚೆ ಬಾಗ್ಲು ಬಾಗ್ಲೂ" ಜೋರಾಗಿ ಕೂಗಿದೆ. ಯಾರೂ ಬಂದಂತಿಲ್ಲ. ಬಾಗಿಲು ಜೋರಾಗಿ ಬಡಿದೆ. ಯಾರೂ ಬಾಗಿಲು ತೆಗೆಯಲಿಲ್ಲ. ಮತ್ತೆ ಹೋಗಿ ಹಾಸಿಗೆಯಲ್ಲಿ ಕೂತೆ. ಕೊಟ್ಟಿಗೆ ಬಿದ್ದಿದೆ. ಎತ್ತು ಏನಾಗಿದ್ದಾವೋ! ಎಲ್ಲರ ಮೇಲೆ ಸಿಟ್ಟು ಬಂತು. ಹೊಟ್ಟೆ ಉರಿಯಿತು. ಹತ್ತು ಸೂಜಿ ನುಂಗಿದ ಹಾಗೆ. ಮತ್ತೆ ಹೋಗಿ ಕೂಗಿ ಬಂದೆ 'ಅನ್ನ ಬೇಯಿಸುವಾ' ಎಂದು ಅಕ್ಕಿ ತೊಳೆದು ಒಲೆಯ ಮೇಲಿಟ್ಟೆ. ಒಲೆಯಲ್ಲಿ ಬೆಂಕಿ ಇಲ್ಲ. ಬರಿಯ ಬೂದಿ. ಆಚೆ ಯಾರೋ ನಕ್ಕ ಹಾಗೆ. "ಯಾರು?" ಕೂಗಿದೆ. "ಬಾಗಿಲು ತೆಗೀರಲೋ". ಬೆಂಕಿ ಪೊಟ್ಟಣಕ್ಕಾಗಿ ಹುಡುಕಿದೆ, ಸಿಗಲಿಲ್ಲ. ಮೆಲ್ಲಗೆ ಬಿಸಿಲು ಗೋಲಗಳು ಮಾಯವಾಗಿ ಕತ್ತಲಾಯಿತು. ಮೋಡ ಬರುತ್ತಿದೆ. ಮಳೆ ಹನಿ ಹೆಂಚಿನ ಮೇಲೆ ಉದುರುವುದನ್ನು ನಿರೀಕ್ಷಿಸಿದೆ. ಮಾಡಿನಲ್ಲಿ ಸದ್ದು; ಕಲ್ಲು ಬಿದ್ದಹಾಗೆ.

ಅಡಿಗೆ ಕೋಣೆಗೆ ನುಗ್ಗಿದೆ. ಕಿಟಕಿ ತೆಗೆದು ನೋಡಿದೆ, ಯಾರೂ ಕಾಣಲಿಲ್ಲ. "ಸತ್ತು ಹೋಗ್ಯವ್ರೆ ಗುಳ್ಳೇ ನರಿಗೋಳು" ಎತ್ತಿ ಬಡಿದೆ. ಅಲ್ಲಾಡಿ, ಅಂಚಿನ ಮಣ್ಣು ನೆಲಕ್ಕೆ ಬಿತ್ತು. ಹಲ್ಲು ಕಚ್ಚಿ ನರಿಗಳ ಮೇಲಿನ ಸಿಟ್ಟೆಲ್ಲ ತಂದು ಮತ್ತೊಂದು ಏಟು ಹಾಕಿದೆ. ಕಿಟಕಿ ಕಳಚಿಕೊಂಡು ಆಚೆ ಬಿತ್ತು. ಹಾರಿ ಅಲ್ಲೇ ಎದ್ದೆ. ಕಂಡಿಯಿಂದ ಈಚೆ ಹಾರಿದೆ. 'ಯಾರಿದ್ದಾರೆ?' ಸುತ್ತಲೂ ನೋಡಿದೆ. 'ಇತಲಿ ಸೂಳೇಮಕ್ಕಳು.' ಕೊಟ್ಟಿಗೆಯ ಕಡೆ ಹೋದೆ. ಮಾಡು ಪೂರ್ತಿ ಬಿದ್ದಿದೆ. ಎತ್ತಿಲ್ಲ. ಕೆಂದಿಯೂ ಇಲ್ಲ. ಬಾಳೆಯ ಹಿತ್ತಿಲಲ್ಲಿ ಕರು. ಆನೆಯೇ ಇರಬೇಕು. ಬಾಳೆ ಎಲೆ ಒಂದೂ ತಿಂದಿಲ್ಲವಲ್ಲ! ಹೆಜ್ಜೆಗಾಗಿ ಹುಡುಕಿದೆ; ಕಾಣಲಿಲ್ಲ. ಮಳೆ ಹನಿಯುತ್ತಿತ್ತು.

ಊರೊಳಗೆ ಏನು ಗಲೀಜಪ್ಪ! ಈ ಇಕ್ಕಟ್ಟನಲ್ಲಿ ಹೇಗೆ ಸಲೀಸು ತಿರುಗಾಡುತ್ತಾರೆ! ನೀರು ನುಗ್ಗಿ, ನಡೆದು ಕೊರಕಲು ಬಿದ್ದಿದೆ. 'ಅಯ್ಯಪ್ಪ' ಎಡವಿದೆ. ಕತ್ತೆಗಳಿಗೆ ಹೊರತು ನಮಗಲ್ಲ. "ಶರಣೂ ಬನ್ನಿ"ಹಟ್ಟಿಯಲ್ಲಿದ್ದ ಗೌಡರು ಅಂದರು. ನಾನು ಸುಮ್ಮನೆ ನೋಡಿದೆ. ನಗುತ್ತಿದ್ದರು. ಒಂದು ನಮೂನೆಯಾಗಿ ... ಹೇಗಿರಬಹುದು ? ಅವರನ್ನೇ ಯೋಚಿಸಿದೆ. ಸಣ್ಣಗೆ .... ಇರಿಯುವಂತೆ.... ಹರಿತವಾಗಿ ನಗುತ್ತಿದ್ದಾರೆ. ಮಧ್ಯೆ ಮಾತು—

"ಕೂತುಕೊಳ್ಳಿ, ಏ ಇನ್ನೇ ಇವರಿಗೊಂದು ಮುಂದ್ಲಿಕ್ಕೆ ಹಾಕೋ, ಆ....ಸಂತೋಸ....ಆ.... ಈರನ ಗದ್ದೆ ನೀವು ಮಾಡಿಕೋತೀರಂತೆ. ಮಾಡ್ಬೇಕು .... ಮೈಮುರ್ದು ದುಡೀಬೇಕು. ಅಲ್ದೇ ಹೋದ್ರೆ ಆತದಾ?"

"ನಮ್ ಅನ್ನ ನಾವ್ ದುಡ್ಕೊಳ್ಳೋಬ್ಯಾಡ್ವಾ" ಅಂದೆ ನಯವಾಗಿ.

"ಅದ್ ನೋಡಿ ಸತ್ತಿವಾದ್ ಮಾತು...." ಹತ್ತಿರಕ್ಕೆ ಬಂದು ಕುಳಿತರು. ಮನೆಯ ಸುದ್ದಿ ಹೇಳಿದೆ—ಅದ್ಕೇ ಬಂದೆ, ಎತ್ತು ಕಾಣಲಿಲ್ಲ, ಕೆಂದಿಯೂ ಇಲ್ಲ, ಚಿಲಕ ಹಾಕಿದ್ದರು,–ಎಲ್ಲ ತಿಳಿಸಿದೆ. ಸುಮ್ಮನಿದ್ದರು. ನಾನು ಮುಗಿಸಿದ ಕೂಡಲೇ–

"ಛೆ! ಛೆ! ಯೆಂತಾ ಕೆಲ್ಸಾಗೋತು! ಆನೇನೇ ಬಂದುರ್‌ಬೇಕು ಫಡಾರ್ ಅಂದೇಟ್ಗೆ ಎತ್ತು ಬೆದರಿ ಓಡ್ಯವೆ, ಪಾಪ" 'ಇವನ ಮೀಸೆ ಮಣ್ಣು ತಿನ್ನ' 'ತಲೆತರ್ದು ಉಪ್ಪೆ ಉಜ್ಜ, ಎಲ್ಲಾ ಇವ್ನಂದೇ ಕೆಲ್ಸ' ಇವನ ಗುಡಾಣದ ಹೊಟ್ಟೆಗೆ ದಪ ದಪ ನಾಕು ಗುದ್ದಿ ಬಿಡಲೇ! 'ಹಾರಿ ತಂದು ಇವ್ನ ಮನೇನೂ ಉಂಡುಸ್ಲಾ' "ಗೌಡ್ರೇ" ಕರೆದೆ. ತಿರುಗಿದರು. ಕಿವಿಯ ಒಂಟೆ ಅಲುಗಿದವು. "ಒಂದ್ ಗುಡ್ಸಾರ ಹಾಕ್ಯತೀನಿ. ನಿಮ್ ಮಂದ್ಯಳದಲ್ಲೇ ಜಾಗ ಕೊಡಿ"–ಅಂದೆ. ಸುಮ್ಮನಿದ್ದರು."ಎತ್ತು ಯಾವನೋ ಕದ್ದು ಹೊಡ್ದವ್ನೆ" ಅಂದೆ. ಇವನು ಪಟೇಲ ಜೇರೆ ಅಂತೆ. 'ನೀನೇ ಎತ್ತು ಕದ್ದೋನು, ಮನೆ ಮುರ್ದೋನು' ಎಂದು ಮುಖಕ್ಕೆ ಕಿರುಚುತ್ತೇನೆ ಅಂದುಕೊಂಡೆ. ಎದ್ದು ಒಳಗೆ ಹೋದರು. ಕಾದೆ. ತುಂಬ ಹೊತ್ತು ಕಾದೆ. ಬರಲಿಲ್ಲ. ಎದ್ದು ಬಂದೆ. ದೊಂಡೆ, ದೊಂಡೆದಾರಿ. ಹನಿ, ಹನಿ ಮಳೆ.

ಅನ್ನ ಬೇಯಿಸಿ–ಉಣ್ಣುವಾ ಎಂದು ಗಂಗಳ ತೊಳೆಯುತಿದ್ದೆ. ಜಗಲಿಯಲ್ಲಿ ಯಾರೋ ಸುಳಿದಂತಾಯಿತು. 'ಈರನೋ' ಎಂದೆ. ಮೌನ. 'ಯಾರೂ ಇಲ್ಲ' ಅಂದುಕೊಂಡು, ಅನ್ನ ಉಕ್ಕಿಕೊಂಡು ಎಸರು ಹಾಕಿಕೊಂಡೆ. 'ಅಯ್ಯಾರೇ' ಯಾರೋ ಕೂಗಿದರು. ದನಿ ಈರನದೋ ಅಲ್ಲವೋ. ಎದ್ದು ಈಚೆ ಬಂದು ನೋಡಿದೆ.

"ಕೂತುಕೊ" ಅಂದೆ. ಕುಳಿತ. ಮಾತಾಡಿದ ಸಣ್ಣಗೆ, ನಯವಾಗಿ ನಿಟ್ಟಾಗಿ, ದೃಢವಾಗಿ ಬಯ್ಯುತ್ತಾ .... ಎಲ್ಲಕ್ಕೂ ನಾನು ಸುಮ್ಮನೇ ಕುಳಿತದ್ದಕ್ಕೆ ಅವನಿಗೆ ಆಶ್ಚರ್ಯ ಅಥವಾ ಸಿಟ್ಟು. "ಎತ್ತು ಕದ್ದದ್ದು ಯಾರು?" ಕೇಳಿದ. "ನಿನ್ನಂಥವನೇ" ಅಂದೆ. ಹಲ್ಲು ಸದ್ದು ಮಾಡಿದ. "ಬೀಗ ಯಾರ್ ಹಾಕಿದ್ರು ಗೊತ್ತಾ ?" ಅಂದ "ಯಾರಾದ್ರೂ ಒಂದೇ" ಅಂದೆ. "ನೀವು ಒಳ್ಳೆರು ಸೂಳೇಮಕ್ಕಳು ಹೆಂಗ್ ಮಾಡಿದ್ರು" ಅಂದ ಕತ್ತು ಹಾಕಿದೆ. "ನಾನೇ ಎತ್ತು ಕದ್ದೋನು" ಅಂದ. ಕತ್ತು ಹಾಕಿದ "ನೀವು ಈರನ ಗದ್ದೆ ನಂಗ್ ಕೊಡ್ರಿ. ನಿಮ್ಮೆತ್ತು ನೀವ್ ತಗಳಿ" ಅಂದ. "ಎತ್ತು ಬಾಡ್ವಾ?" "ಹಸ ?" ಅವನಿಗೆ ತೀರಾ ಸಿಟ್ಟು ಬಂದಿರಬೇಕು "ಲೋ" ಗೆ ಇಳಿದ."ಈನ್ನ ಗದ್ದೆ ನೀನ್ ಹ್ಯಂಗ್ ತಗತೀಯ ನಾನೂ ನೋಡ್ತೀನಿ" ಅಂದ. "ನೋಡಪ್ಪಾ" ನಕ್ಕೆ "ನನ್ ಮಾತು ಕೇಳ್ದೆ ಅವ್ನೆನಾರ ನಿಂಗ್ ಕೊಟ್ರಾ ಗದ್ದೆಯೂ, ಕೋಳಿ, ಕೋಳಿ ಮೆಟ್ರೆ

ಮುರ್ದಂಗ್ ಮುರೀತೀನಿ, ಗೊತ್ತಾತಾ ?" ಅಂದು ಮುಗಿಸಿರಲಿಲ್ಲ, ನಾನು ಎದ್ದು ನಿಂತೆ. ಕುದಿಯುತಿದ್ದೆ. ಅವನೂ ಎದ್ದು ನಿಂತ. ಹಟ್ಟಿಗಿಳಿಯ ಹೊರಟ. ಅಂಗಿ ಹಿಡಿದು ನಿಲ್ಲಿಸಿದೆ. ತಿರುಗಿ ದುರದುರ ನೋಡಿದ. ಮೀಸೆ ಮದ ಚೆಲ್ಲುತಿದ್ದವು ಕೆನ್ನೆಗೆ ಒಂದೇಟು ಬಲವಾಗಿ ಗುದ್ದಿದೆ. ಗಾಬರಿ ಬಿದ್ದು "ಲೋ ನಿನ್ನ್" ಅಂದ ಗಿರಿಯ ಕೈಯೆತ್ತುವಾಗ ಮತ್ತೊಂದು ಏಟು ಕೊಟ್ಟೆ. ದಪದಪ ಹೊಟ್ಟೆಗೆ ಗುದ್ದಿದೆ. ಮಾತಾಡದೆ ಅವನೂ ಹೊಡೆದಿರಬೇಕು. ನನಗೆ ಎಚ್ಚರವಾದಾಗ ಸಂಜೆಯಾಗುತಿತ್ತು. ಗಾಯ ಇರಲಿಲ್ಲ. ಮೈಕೈ ವಿಪರೀತ ನೋಯುತಿತ್ತು. ಮಿದುಳನ್ನುಒದರಿ ರಾಶಿ ಹಾಕಿದ ಹಾಗಾಗಿತ್ತು. ತಲೆಗೂ ಪೆಟ್ಟು ಬಿದ್ದಿರಬೇಕು. ಕೂತಿದ್ದೆ. ಬಾಳೆ ಹಿತ್ತಿಲಲ್ಲಿ ಕರು. ಕಲ್ಲ ಮೇಲೆ ರಕ್ತ.

ಈರ ಬಂದ. ಕುಂಬಾರ್‍ರ ರಂಗನೂ ಅವನೂ ಬೀಡಿ ಸೇದುತ್ತಾ ಮಾತು ಎರಚಾಡುತಿದ್ದರು, ಖುಷಿಯಾಗಿ. ಮೈಕೈಯೆಲ್ಲಾ ಹುಣ್ಣಾದ ಹಾಗೆ ಪಟಗುಟ್ಟುತಿತ್ತು. ಮೆಲ್ಲಗೆ ಒಳಕ್ಕೆ ಹೋಗಿ ಅವಲಕ್ಕಿ ತಂದುಕೊಟ್ಟೆ. ಇಬ್ಬರೂ ತಿಂದು ಕೂಡಿ ತಕ್ಕೆ ದುಡ್ಡು ಬೇಡಿ ಇಸಿದುಕೊಂಡು ಹೋದರು. ಕರುಳೆಲ್ಲ ಕೆಂಡವಾಗಿ ಕೆದರಿಕೊಂಡು ಕುದಿಯುತಿತ್ತು. ಯಾವಯಾವದೊ ಶಬ್ದಗಳು, ಚಿತ್ರಗಳು ತಲೆಯ ಸುತ್ತಲೂ ಗಿರಗಿರ ತಿರುಗುತಿದ್ದವು.

ಗೌಡರ ಹಟ್ಟಿಗೆ ಬಂದಿದ್ದೆ. ಇವತ್ತು ಇವರನ್ನು ಮುಗಿಸುತ್ತೇನೆ. ಗಪ ಗಪಾ ಅಗಿದು ಗೋಪವೆಲ್ಲ ಕಕ್ಕಿ ಕೊಳ್ಳುತ್ತೇನೆ. ಇವರೊಂದಿಗೆ ಒಪ್ಪಂದ ಮಾಡಿಕೊಂಡು ತೆಪ್ಪಗೆ ಬಾಳಲಾರೆ. ಇವತ್ತು ನನ್ನ ಬೇರೆಲ್ಲ ಕಿತ್ತು ಇವರ ಮುಂದೆ ಒದರಿಬಿಡುತ್ತೇನೆ. ಇವರ ಸಣ್ಣತನವನ್ನೆಲ್ಲ ಈಚೆಗೆಳೆದು ಖುಷಿಪಡುತ್ತೇನೆ. ಬೆನ್ನಲ್ಲಿ ವಿಪರೀತ ನೋವು. ಬಲಕೆನ್ನೆ ಊದಿಕೊಂಡಿತ್ತು. ಅಂಗಿ ಹರಿದಿತ್ತು. ಹಟ್ಟಿಯಲ್ಲಿ ಮಕ್ಕಳು ಆಡುತ್ತಿವೆ. ಗೌಡರ ಹುಡುಗಿ ನಿಂತಿದ್ದಳು. "ಅವ್ರಾ, ಗೌಡ್ರು" ಕೇಳಿದೆ. ನನ್ನಕಡೆ ತಿರುಗಿದಳು. ದುರದುರ ನೋಡಿ ಒಳಕ್ಕೆ ಓಡಿದವಳು ಬಹಳ ಹೊತ್ತು ಈಚೆ ಬರಲಿಲ್ಲ. ಸಿಟ್ಟು ವಿಪರೀತವಾಗುತ್ತಿತ್ತು. ಮಣ್ಣಲ್ಲಿ ಮಕ್ಕಳು. ಗೌಡರ ಹುಡುಗಿ ನಡುಮನೆಯಲ್ಲೇ ನಿಂತು ಕೈ ಅಲ್ಲಾಡಿಸಿದ್ದ ಕಂಡು ತಿರುಗಿ ಬಂದೆ. ತಡೆದು, ತಡೆದು ಬಂದೆ.

ದಾರಿಯಲ್ಲಿ ಹುಚ್ಚ ಅಡ್ಡ ಬಂದ. ಏನೇನೋ ಹೇಳುತಿದ್ದ. ಏನೂ ತಿಳಿಯಲಿಲ್ಲ. "ನವ್‌ಕಂಡಿಬಂತಾ" ಕಿವಿಗೆ ಅರಚಿದ. ಈ ಕುಳ್ಳ ನನ್ನ ಅಡ್ಡ ನಿಂತು ಕಿಚಗುಡುತಿದ್ದಾನೆ! ಇವನ ಕೂಡ ಹೊಡದಾಡಬೇಕೆನಿಸಲಿಲ್ಲ. ಅದಲ್ಲ ವ್ಯರ್ಥ, ಹಾಸ್ಯಾಸ್ಪದ. ಇವರನ್ನೆಲ್ಲ ಒಟ್ಟಿಗೆ ಬೆಂಕಿಗೆ ಎಸೆದರೂ ಏನೂ ಆಗುವದಿಲ್ಲ. ನಾನು ಬಿದ್ದರೂ ಅಷ್ಟೇ ಸೂರ್ಯ ಸತ್ತಿರಬೇಕು. ಹಕ್ಕಿಗಳು ಗೂಡಿಗೆ ಮರಳುತ್ತಿವೆ. ನನ್ನಹಾಗೆ. ಕೋಳಿಯ ಹಿಂಡು ಕೊರಗುಡುತಿದ್ದವು. ಮೇದ ದನ ಬಾರೆಯಿಂದ ಕೊಟ್ಟಿಗೆಗೆ ನುಗ್ಗುತ್ತಿವೆ. ಯಾರೋ ಸುತ್ತಲೂ ನಕ್ಕ ಹಾಗೆ ಕೇಳಿಸಿತು. ನಾನಿದ್ದ ಮನೆ ಪೂರ್ಣ ನೆಲಸಮವಾಗಿತ್ತು. ನಾನು ನಿಲ್ಲಲಿಲ್ಲ-"ಯಾಕ್ ನಗ್ತಾ ಇದೀರಿ" ಕೇಳಲಿಲ್ಲ.

★ ★ ★

ಕತ್ತಲು ಅವಚಿಕೊಳ್ಳುತಿತ್ತು. ಊರು ನನ್ನಿಂದ ದೂರ ಉಳದಿತ್ತು. ಅಥವಾ ನಾನು ಊರಿಂದ. 'ಹೆದ್ರಿ ಹೋಗ್ತಾ ಇದೀನಾ?' ಕೇಳಿಕೊಂಡೆ. ಅಲ್ಲೇ ನಿಂತಿದ್ರೆ ಮನೆಯ ಗತಿ ನನಗೂ ಸೇರಿಸಿಕೊಂಡೆ. ಜೈಲಿನಿಂದ ಹೊರಬಂದವನ ಹಾಗೆ ಖುಷಿಯಾಪಿ. ಏನಾದರೂ ಹಾಡಬೇಕೆನಿಸಿತು. ಏನೂ ನೆನಪಾಗಲಿಲ್ಲ. ಕತ್ತಲು ಪಟ್ಟವಾಗಿ ಹಬ್ಬುತ್ತಿತ್ತು.

ನನ್ನ ಗದ್ದೆಯ ಕಡೆಗೆ ನೋಡಿದೆ. ಅಲ್ಲ ಗದ್ದೆಯ ಕಡೆಗೆ ನೋಡಿದೆ ಕರ್‍ರಗೆ ಕಂಡಿತು. ಗಕ್ಕನೆ ನಿಂತೆ. ದೇವಸ್ಥಾನದ ಬಾಗಿಲಿಗೆ ಬಂದದ್ದು ಕಂಡು ಹಿಂದಕ್ಕೆ ಬಂದು ಬಳಸಿ ನಡದೆ. ಸೀಗೆಯ ಮೆಳೆಯ ಹತ್ತಿರ ಬಂದಾಗ, 'ಇದ್ರ ಒಳಿಕ್ಕೆ ಹೋದೋರು ಯಾರೂ ಈಚೆ ಬಂದಿಲ್ಲ' ಈರನ ಮಾತು ಸೀಗೆ ಮೆಳೆಯೊಳಗಿಂದಲೇ ನುಗ್ಗಿ ಬಂದ ಹಾಗೆನಿಸಿತು. ಮುಳ್ಳಿಗೆ ಸಿಕ್ಕ ಅಂಗಿ ಮುಳ್ಳಿಗೇ ಅಂಟಿ ಕೊಂಡಿತು. ಮೈ ಬರಿದಾಯಿತು. ಮುಳ್ಳು ಹೆಜ್ಜೆಹೆಜ್ಜೆಗೆ ರಾಚುತಿತ್ತು. ಕತ್ತಲು ಕತ್ತು ಹಿಸುಕುತಿತ್ತು.

ಕೈ ಮೈ ತುಂಬ ಈ ಮೆಳೆಯ ಅಂಚು ಹಿಡಿಯುವೆನೆಂಬ ಹಂಬಲ ತುಂಬಿ ಬರುತಿತ್ತು. ಬಿದ್ದು,ಎದ್ದು ನಡೆದೆ. ನೂಕಿದ ಕೈ ಕಾಣಲಿಲ್ಲ. ಹನಿ,ಹನಿ ಮಳೆ. ನರಿ ಕೂಗು. ತೋಳ ಕಿರುಚು, ಗೂಬೆ ಗೊಗ್ಗರು. ಕತ್ತಲ ಮೌನ. ಗದ್ದಲ ಕಿವಿ ತುಂಬಿ, ತಲೆ ತುಂಬಿ ಮೈ ತುಂಬಿ ಸಿಡಿದು ಹೋದೇನೆಂಬ ಮೌನ. ದೂರದಲ್ಲಿ ಮೋಟಾರು ಸಿಳ್ಳೆ ಹಾಕಿದ ಸದ್ದು. ಸೀಗೆಯ ಮೆಳೆಯ ನುಗ್ಗಿ ಬಂದ ಬೆಳಕಿನ ಕೋಲು, ಎರಡು, ಸರಸರ ನುಗ್ಗಿದೆ. [illegible] ಯಿಂದಾಚೆಯ ಬಯಲಿನ, ಬೆಳಕಿನ, ಹೂವಿನ ಟಾರು ರಸ್ತೆಗೆ. ತಿರುವಿನಲ್ಲಿ ಸರ್‍ರನೆ ತಿರುಗಿ, ಗುಪ್ಪಕ್ಕೆ ಬೆಳಕೆರಚಿ ದೂರಕ್ಕೆ ಪಾರಾಯವಾಯಿತು ಬೆಳಕು. [illegible] ಸೀಗೆಯ [illegible] ಯಿತು. ನರಳಿದೆ; ಕತ್ತಲಿನ ಹಾಗೆ. ಮುಳ್ಳೆಲ್ಲ ಮೈ ನಾಟಿ ಬಿಸಿರಕ್ತದಲ್ಲೀಳಿದವು. ಜೊಂಪೆ ಮೈಗಂಟಿತು. ಮುಳ್ಳು ಹೊಕ್ಕಲೆಲ್ಲ ತಣ್ಣನೆಯ ಬೊಟ್ಟು, ರಕ್ತ ಹರಿದು. ಮಾಂಸ ಖಂಡಕ್ಕೆ ಹೊಕ್ಕ ಮುಳ್ಳುಗಳು ಮತ್ತೆ ಬಿಡಲಿಲ್ಲ. ಗಾಳಿಗೆ ತೂಗಾಡುತಿದ್ದ ಹಿಂದಿನ ರೆಂಬೆಯೊಂದು ಬಂದು ಬೆನ್ನಿಗೆ ಬಡಿಯಿತು. ನುಕ್ಕಿ ನರಳಿದೆ, ಒಂಟಿತನದ ದುಃಖಕ್ಕೆ ಸುಖಕ್ಕೆ. ಕಿರುಚಬೇಕು, ಜೋರಾಗಿ, ಊರಿಗೆ ಕೇಳುವಂತೆ. ಬೇಡ ಅವರೆಲ್ಲ ಬಂದುಬಿಟ್ಟಾರು. ನನ್ನ ಅಪ್ಪಿಬಿಟ್ಟಾರು ಧೃತರಾಷ್ಟ್ರನ ಹಾಗೆ. ಈ ಸೀಗೆಯುಪ್ಪಿನಲ್ಲಿ ಕರಗುವುದೇ ವಾಸಿ. ಮುಂದೆ ಹೋಗಲೆಂದು ಕಾಲು ಅಲುಗಿಸಲು ನೋಡಿದೆ ಆಗಲಿಲ್ಲ. ಅಂಗ, ಉಪಾಂಗಗಳೂ ನನ್ನ [illegible] ಲಿಲ್ಲ. ಇಲ್ಲ. ಇವ್ಯಾವೂ ನನ್ನವಲ್ಲ. ಈ ನೆಲ, ಜಲ, ಗದ್ದೆ, ಕೈ, ಮೈ. ಯಾವೂ ನನ್ನವಲ್ಲ. ಇಷ್ಟಬಂದಂತೆ ಕುಣಿಯಲು, ನಾನು ಸ್ವತಂತ್ರನಲ್ಲ. ನಾನು ಸ್ವತಂತ್ರನಲ್ಲ. ಈ [illegible] ಬಾಗಿಲು ಯಾರೂ ತೆಗೆಯುವದಿಲ್ಲ. ಅಥವಾ ಇದಕ್ಕೆ ಬಾಗಿಲೆಂಬುದೇ ಇಲ್ಲ. ಸುತ್ತಲೂ ಬೇಲಿ. ಮುಳ್ಳು ಬೇಲಿ. ಒಳಗೆ ಬುಸುಗುಡುವ ಹಂದಿ, ನರಿಗಳು.

ಗದ್ದೆ ಬಿಟ್ಟು ಹೋಗಬೇಕೆ? ಅತ್ತಿದ್ದೆ. ಮಣ್ಣೇ ಹೀಗೆ ಅಂದುಕೊಂಡೆ ಇದರದ್ದು ವಿಲಕ್ಷಣ ಸಂಬಂಧ. ಇದರಿಂದ ನಾನು ಸ್ವತಂತ್ರನಲ್ಲ. ಜೈಲಿಗೆ ಬಾಗಿಲಿಲ್ಲ. ★

[illegible]

ನಿಜಲಿಂಗಪ್ಪನವರ ಹೊಸ ನಂಬಿಕೆ

"ನಿಜಲಿಂಗಪ್ಪನವರು" ಎಂಬುದು ಕರ್ನಾಟಕದ ರಾಜಕೀಯದಲ್ಲಿ ಮತ್ತು ಸ್ವಲ್ಪ ಮಟ್ಟಿಗೆ ಇಂಡಿಯಾದ ರಾಜಕೀಯದಲ್ಲಿ ಕೂಡಾ ಒಂದು ವಿಚಿತ್ರ ಸಂಗತಿ. ಅವರೀಗ ಜನತಾಪಕ್ಷಕ್ಕೆ, ಕರ್ನಾಟಕದ ಮಟ್ಟಿಗಾದರೂ, ಧರ್ಮಗುರು ಇದ್ದಂತೆ. ಮುಂದಿನ ಚುನಾವಣೆಗಳಿಗಾಗಿ ಪೂರ್ವಭಾವಿಯಾಗಿ ಅವರು ಊರೂರುಗಳಲ್ಲಿ ಭಾಷಣ ಮಾಡುತ್ತಾ ಜನರಿಗೆ ನೀತಿ ಧರ್ಮಗಳ ಪಾಠಗಳನ್ನು ಹೇಳುತ್ತಿದ್ದಾರೆ. ಮೊನ್ನೆ ಅವರು ಮೈಸೂರಿನಲ್ಲಿ ಪಾಠ ಹೇಳುತ್ತಾ, ನೀತಿ ಇಲ್ಲದ ರಾಜಕೀಯಕ್ಕೆ ಜನ ಬೆಂಬಲ ಇಲ್ಲ ಎಂಬುದಕ್ಕೆ ಮೈಸೂರಿನ ಜನತೆ ಜಾರ್ಜ ಫರ್ನಾಂಡೀಸ್‌ರಿಗೆ ನೀಡಿದ ಸ್ವಾಗತವೇ ಒಂದು ನಿದರ್ಶನ ಎಂದು ತಮ್ಮ ಪಾಠವನ್ನು ಸೋದಾಹರಣಗೊಳಿಸಿದ್ದಾರೆ.

— ನಿಜಲಿಂಗಪ್ಪನವರು ಹೀಗೆ ಮಾತಾಡುವುದರಲ್ಲಿ ಆಶ್ಚರ್ಯವೇನಿಲ್ಲ. ಅವರೆಂದೂ ರಾಜಕಾರಣವನ್ನು ಅದರ ಎಲ್ಲ ಆಳಗಳೊಂದಿಗೆ ಅರ್ಥ ಮಾಡಿಕೊಂಡಿರಲಿಲ್ಲ. ಸ್ವಾತಂತ್ರ್ಯ ಸಂಗ್ರಾಮದ ಪ್ರಮುಖ ಜನತಾ ಆಂದೋಲನವಾಗಿ ಬೆಳೆದು ನೂರು ದಶಕಗಳ ಕಾಲ ರಾಜಕೀಯ ಪಕ್ಷವಾಗಿ ದೇಶವನ್ನಾಳಿದ ಕಾಂಗ್ರೆಸ್, ಇವರ ಅಧ್ಯಕ್ಷತೆಯಲ್ಲೇ ತನ್ನ ಅವನತಿಯನ್ನು ಕಾಣಬೇಕಾಯಿತು ಎಂಬ ಸಂಗತಿ ಏನನ್ನಲ್ಲವಾದರೂ ನಿಜಲಿಂಗಪ್ಪನವರ ಭೋಳೇ ರಾಜಕೀಯ ಪ್ರಜ್ಞೆಯನ್ನು ಪರಿಚಯ ಮಾಡಿಕೊಡುತ್ತದೆ. ಈ ಇಳಿವಯಸ್ಸಿನಲ್ಲಿ ನಿಜಲಿಂಗಪ್ಪನವರಿಗೆ ನೀತಿಧರ್ಮದ ಬಗ್ಗೆ ಕಾಳಜಿ ಹೆಚ್ಚಾಗಿರುವುದು ಅರ್ಥಮಾಡಿಕೊಳ್ಳಬಹುದಾದ ಸಂಗತಿಯಾದರೂ ಅವರ ಈ ನೀತಿಧರ್ಮವೂ ಅವರ ರಾಜಕೀಯ ಪ್ರಜ್ಞೆಯಷ್ಟೇ ಭೋಳೆಯಾಗಿರುವುದು ವಿಷಾದದ ಸಂಗತಿ. ದೇಶದ ರಾಜಕೀಯದಲ್ಲೇ ತಮ್ಮ ಜೀವನ ಕಳೆದ ಇವರಿಗೆ, ಇಂತಹ ರಾಜಕೀಯವನ್ನು ಒಲ್ಲದೆ ಹೊರಬಂದ ಜಾರ್ಜ್‌ರ ಮೇಲೆ ಕೋಪ ಇರುವುದು ಸಹಜವೇ. ಪಕ್ಷ ತಾನು ನಂಬಿಕೊಂಡ ಆದರ್ಶಗಳು ಹಾಗೂ ಕಾರ್ಯಕ್ರಮಗಳನ್ನು ಬಿಟ್ಟರೂ ಸರಿಯೇ ಪಕ್ಷವನ್ನು ಮಾತ್ರ ಯಾರೂ ಬಿಡಬಾರದು. ಇದು ನಿಜಲಿಂಗಪ್ಪನವರ ನೀತಿ ಧರ್ಮ. ಅವರ ದೇಶದ ರಾಜಕೀಯದ ನಿಯಮಾವಳಿ ಪ್ರಕಾರ ಯಾರೊಬ್ಬನ ನಿಷ್ಠೆ ಇರಬೇಕಾದುದ್ದು ಘೋಷಿತ ಆದರ್ಶಗಳು ಹಾಗೂ ಕಾರ್ಯಕ್ರಮಗಳಲ್ಲಿ ಅಲ್ಲ; ಬದಲಾಗಿ ಇವನ್ನೆಲ್ಲಾ ಬರೀ ಅಲಂಕಾರಕ್ಕಾಗಿ ಇಟ್ಟುಕೊಂಡ ಪಕ್ಷವೆಂಬ ಅಧಿಕಾರ ಸಾಧನದಲ್ಲಿ! ಇಂಡಿಯಾದ ರಾಜಕಾರಣದಲ್ಲಿ ಜನತೆಗೆ ದ್ರೋಹ ಬಗೆಯುವುದು ಮಾಮೂಲು, ಅದನ್ನು ಪ್ರಶ್ನಿಸುವುದೆಂದರೆ ಇಂತಹ ರಾಜಕಾರಣದಲ್ಲಿ ಅನೀತಿಯುತವಾದದ್ದು. ನಿಜಲಿಂಗಪ್ಪನವರು ಇಂತಹ ರಾಜಕಾರಣದ ಆಧಾರ ಸ್ತಂಭಗಳಲ್ಲಿ ಒಬ್ಬರು ತಾನೇ ?

ಜಾರ್ಜ್‌ರ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳಿರಬಹುದು. ಅದು ಸಹಜಕೂಡಾ. ಆದರೆ ಅವರು ಹೇಳುವುದನ್ನು, ಬಂದ ಜನ ಆಲಿಸದಂತೆಕೂಡಾ ಪುಂಡಾಟಿಕೆ ನಡೆಸುವುದು ಯಾವ ಥರದ ರಾಜಕೀಯ ಸಭ್ಯತೆಯೋ ಎಂಬುದನ್ನು ಸಭ್ಯರಾಜಕಾರಣದ ಧರ್ಮಗುರುಗಳಾದ ನಿಜಲಿಂಗಪ್ಪನವರು ಹೇಳಬೇಕು (ಜಾರ್ಜರನ್ನು ಪಕ್ಷದ್ರೋಹಿ ಎಂದು ಬಗೆ ಬಗೆಯಾಗಿ ಹೀಯಾಳಿಸಿದ ಶಕ್ತಿಗಳೇ ಅಂದು ಜಾರ್ಜರನ್ನು ಪಕ್ಷದ್ರೋಹಿ ಎಂದೂ ಹೀಯಾಳಿಸಿದ್ದು ಒಂದು ವಿಪರ್ಯಾಸ) ಕಾಂಗ್ರೆಸ್ ಅವನತಿಯ ಸಮಯದಲ್ಲಿ ದೆಹಲಿಯ ಜಂತರ್ ಮಂತರ್‌ನಲ್ಲಿ ಒಮ್ಮೆ ಕಾಂಗ್ರೆಸ್ ಕಾರ್ಯಕರ್ತರು ತಮಗೆ ನೀಡಿದ 'ಸ್ವಾಗತ'ದ ಪರಿಯನ್ನು ನೆನಪಿಸಿಕೊಳ್ಳುವಂತೆ ಈ ಸಂದರ್ಭದಲ್ಲಿ ನಿಜಲಿಂಗಪ್ಪನವರಿಗೆ ಹೇಳುವುದು ಬರೀ ತುಂಟತನವಾಗಲಾರದು. ನಿಜಲಿಂಗಪ್ಪನವರು ಇಳಿವಯಸ್ಸಿನಲ್ಲಿ ಪುಂಡಾಟಿಕೆ ರಾಜಕಾರಣದಲ್ಲಿ ನಂಬಿಕೆ ಬೆಳೆಸಿಕೊಳ್ಳಲಾರಂಭಿಸಿರುವುದು ಒಂದು ಸ್ವಾರಸ್ಯಕರ ರಾಜಕೀಯ ಬೆಳವಣಿಗೆ ಅಲ್ಲವೇ ?

ಕುರ್ಚಿಯ ಮೇಲಿನ ಹಾವುಗಳು

'ರಾಜನಾರಾಯಣ್' ಎಂಬುದು 'ನಿಜಲಿಂಗಪ್ಪನವರು' ಎಂಬುವಕ್ಕಿಂತ ವಿಚಿತ್ರವಾದದ್ದು. ಸಭ್ಯರಾಜಕಾರಣದ ಧರ್ಮಗುರುಗಳೆಲ್ಲರ ಕಣ್ಣಲ್ಲಿ ಈತ ಮಹಾ ಪಾತಕಿ. ರಾಜನಾರಾಯಣ್ ಇಂಡಿಯಾದ ರಾಜಕಾರಣದಲ್ಲಿ ಅತ್ಯಂತ ಒರಟು ಹಾಗೂ ಅಸಭ್ಯವಾದ ರಾಜಕಾರಣಿ ಇರಬಹುದು. ಅವರು ಆಡುವ ಅನೇಕ ಮಾತುಗಳು ಅಪ್ರಬುದ್ಧವಾಗಿಯೇ ಇರುತ್ತವೆ, ಮಾಡುವ ಅನೇಕ ಕೆಲಸಗಳು ಬಾಲಿಷವಾಗಿಯೇ ಕಾಣುತ್ತವೆ. ರಾಜನಾರಾಯಣ್ [illegible] ಒಬ್ಬರಾಗಿ ಮೂಡಿರುವುದರಿಂದ ಅವರ [illegible] ಗಮನ ಸೆಳೆಯುತ್ತದೆ. ಆದ್ದರಿಂದಲೇ ಅವರಿಗೆ ಮಿತ್ರರು ಹೆಚ್ಚಾಗಿರುವಷ್ಟೇ ಶತ್ರುಗಳೂ ಹೆಚ್ಚಾಗಿದ್ದಾರೆ. ಡಾ|| ರಾಮಮನೋಹರ ಲೋಹಿಯಾ ಅವರ ಬಂಡಾಯದ ಗರಡಿಯಲ್ಲಿ ಪಳಗಿದ ರಾಜನಾರಾಯಣರು ಲೋಹಿಯಾ ಅವರ ಸಾವಿನ ನಂತರ ಹತೋಟಿ ತಪ್ಪಿದ ಬಂಡಾಯಗಾರರಾಗಿದ್ದಾರೆ. ಆದರೆ ಅವರ ಬಂಡಾಯದ ಒಳಸಾರ ಮಾತ್ರ ಬದಲಾಗಿಲ್ಲ. ಅವರೀಗ. ಜನತಾ ಸರ್ಕಾರವನ್ನು ಉರುಳಿಸಿದ ವಿದ್ರೋಹಿಯಾಗಿ ಭೋಳೆ ರಾಜಕಾರಣಕ್ಕೆ ಬದ್ಧರಾದ ಮಧ್ಯಮವರ್ಗದ ಜನರಿಗೆ ಕಾಣುತ್ತಿದ್ದಾರೆ ಎಂಬುದು ಸತ್ಯ. ಬಹುಶಃ ಇದಕ್ಕೆ ಕಾರಣ, ರಾಜನಾರಾಯಣರ ಕಾರ್ಯವಿಧಾನದ ಒರಟುತನ. ಆದರೆ ಈ ಒರಟುತನ ಅವರ ಪ್ರಾಂಜಲ ಆಶೋತ್ತರಗಳನ್ನು ಮುಚ್ಚಿಹಾಕುತ್ತಿರುವುದು ಮಾತ್ರ ವಿಷಾದಕರ. ರಾಜನಾರಾಯಣರ ಬಗ್ಗೆ ಅತೀವ ಸಿಟ್ಟುಗೊಂಡಿದ್ದವರಲ್ಲಿ ಈಗಲೂ ಕೂಡಾ ಆ ಸಿಟ್ಟು ಸಂಪೂರ್ಣ ಅಳಿಸಿಹೋಗಿಲ್ಲ—ನಾನೂ ಒಬ್ಬ. ಆದರೆ ಇತ್ತೀಚೆಗೆ ನಿಯತಕಾಲಿಕವೊಂದರಲ್ಲಿ ಮಾಜಿ ಸಂಸತ್ ಸದಸ್ಯ ಒ.ಪಿ. ತ್ಯಾಗಿ ಅವರೊಡನೆಯ ಸಂದರ್ಶನವೊಂದನ್ನು ಓದಿದ ನಂತರ, ರಾಜನಾರಾಯಣ್ ಈ ದೇಶಕ್ಕೆ ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಸಲ್ಲಿಸಿರುವ ಅಮೂಲ್ಯ ಸೇವೆಯ ಅರಿವಾಯಿತು.

ಒ.ಪಿ. ತ್ಯಾಗಿ ಎಂಬುವವರು ಯಾರೆಂದು ಓದುಗರಿಗೆ ತಿಳಿಸಿಹೇಳಬೇಕಿಲ್ಲವೇನೋ. ಪಾರ್ಲಿಮೆಂಟ್‌ನಲ್ಲಿ 'ಧಾರ್ಮಿಕ ಸ್ವಾತಂತ್ರ್ಯ ಮಸೂದೆ'ಯನ್ನು ಮಂಡಿಸುವ ಮೂಲಕ ದೇಶವನ್ನು ಮತ್ತೆ ಬ್ರಾಹ್ಮಣಶಾಹಿ ಕೂಪಕ್ಕೆ ತಳ್ಳಿ, ಸನಾತನೀ ಶಕ್ತಿಗಳ ಪ್ರಾಬಲ್ಯವನ್ನು ಪುನರುತ್ಥಾನಗೊಳಿಸಲು ಹವಣಿಸಿದ ಭ್ರಷ್ಟ ಹಿಂದೂ ಈತ. ಭ್ರಷ್ಟ ಹಿಂದೂ ಏಕೆಂದರೆ, ಹಿಂದೂ ಎಂಬ ಕಲ್ಪನೆಗೆ ಇವರು ಮಾಡಿರುವಷ್ಟು ಅಪಚಾರ ಇನ್ನಾರೂ ಮಾಡಿರಲಾರರು. ಇವರ ಪ್ರಕಾರ ಹಿಂದೂ ಧರ್ಮ ಸುಧರ್ಮವಾಗಿ ಭರತಖಂಡವನ್ನು ಆಳುತ್ತಿದ್ದಾಗ ಬೌದ್ಧ ಧರ್ಮವೆಂಬ

(೨೦ನೇ ಪುಟ ನೋಡಿ)

ಅಭಿಪ್ರಾಯ

ಸ. ಯು. ಸ. ಪುನಶ್ಚೇತನ

ಮಾನ್ಯರೆ,

ಕಳೆದ ಅಕ್ಟೋಬರ್ 16 ಹಾಗೂ 17ರಂದು ಹಾಸನದಲ್ಲಿ ನಡೆದ ಕರ್ನಾಟಕ ತರುಣ ಲೋಹಿಯಾವಾದಿಗಳ ಸಮ್ಮೇಳನ ಸನ್ನದ ಅಸಹ್ಯಕರ ರಾಜಕೀಯ ಸಂದರ್ಭದಲ್ಲಿ ತುಂಬ ಮಹತ್ವದ್ದಾಗಿತ್ತು. ಸಮ್ಮೇಳನದ ಮುಖ್ಯ ಅತಿಥಿಗಳಾಗಿದ್ದ ಶ್ರೀ ಕಿಷನ್ ಪಟ್ನಾಯಕ್ ಅವರು ಪ್ರಸಕ್ತ ರಾಜಕೀಯವನ್ನು ಕುರಿತಾದ ತಮ್ಮ ವಿಶ್ಲೇಷಣೆಯಲ್ಲಿ ಸಮಾಜವಾದಿಗಳು ಹೇಗೆ ಸತ್ವಹೀನರಾಗಿದ್ದಾರೆಂದು ಹೇಳುವ ಮೂಲಕ ಸಮಾಜವಾದೀ ಸಂಘಟನೆಯನ್ನು ಮತ್ತೆ ಪುನರುಜ್ಜೀವನಗೊಳಿಸಲು ಕಳಕಳಿಯ ಕರೆಯನ್ನು ಕೊಟ್ಟದ್ದು ತುಂಬ ಉತ್ತೇಜನ ಕಾರಿಯಾದ ಸಂಗತಿ.

ಕರ್ನಾಟಕದ ತರುಣ ಲೋಹಿಯಾವಾದಿಗಳ ಹಿಂದಿನ ಚಳುವಳಿಗಳ ವಿಫಲತೆ–ಸಫಲತೆಗೆ ಇನ್ನು ಮುಕ್ತವಾಗಿ ಚರ್ಚಿಸುವ ಮೂಲಕ ಆತ್ಮಾವ ಲೋಕನ ಮಾಡಿಕೊಳ್ಳಲು ಸಮ್ಮೇಳನದಲ್ಲಿ, ಕರ್ನಾಟಕದಲ್ಲಿ ಈಗ ಒಂದು ಪ್ರಬಲ ಎಡ ಪಂಥೀಯ ಸಂಘಟನೆಯಾಗಿರುವ ದಲಿತ ಸಂಘರ್ಷ ಸಮಿತಿಯ ಕೆಲವು ಗೆಳೆಯರು ಉಪಸ್ಥಿತರಿದ್ದದ್ದರಿಂದ ದಲಿತ ಸಂಘರ್ಷ ಸಮಿತಿಯ ಹುಟ್ಟಿನ ಐತಿಹಾಸಿಕ ಅನಿವಾರ್ಯತೆ ಬಗ್ಗೆ ಲೋಹಿಯಾವಾದಿಗಳು ತಮ್ಮನ್ನು ತಾವು ಪ್ರಶ್ನಿಸಿಕೊಳ್ಳಲು ಸಹಾಯವಾಯಿತು. ದಲಿತ ಸಂಘರ್ಷ ಸಮಿತಿಯ ಅನಿವಾರ್ಯತೆಯನ್ನು ಒಪ್ಪಿಕೊಂಡು ಅದರ ಜತೆ ಸಹಕರಿಸಿಕೊಂಡು ಸಮಾನಾಂತರವಾಗಿ ಇನ್ನು ಮುಂದೆ ಸಮಾಜವಾದೀ ಚಳುವಳಿಯು ಮುಂದುವರಿಯಬೇಕೆಂಬ ಹೆಚ್ಚಿನ ಗೆಳೆಯರ ಆಶಯ ಸಹಜವಾದುದೇ ಆಗಿತ್ತು. ಹೀಗೆ ಮುಂದುವರಿದದ್ದೇ ಆದರೆ, ಕ್ರಮೇಣ ಒಂದು ಹಂತದಲ್ಲಿ ಈ ಎರಡೂ ಸಂಘಟನೆಗಳು ಒಂದುಗೂಡಿ ಪ್ರಬಲ ಶಕ್ತಿಗಳಾಗುವುದರ ಬಗ್ಗೆ ಭರವಸೆಯ್ನು ತಾಳಲಾಯಿತು. ಅಲ್ಲದೆ, ಈ ಹಿಂದೆ ನಡೆದ ಸಮಾಜವಾದೀ ಚಳುವಳಿಯಲ್ಲಿನ ಮುಂಚೂಣಿಯಲ್ಲಿದ್ದ ತರುಣ ಮುಖಂಡರ ಹಾಗೂ ಸಿದ್ಧಾಂತದ ಅರೆ ವಿಶ್ಲೇಷಣೆಯ (ಕೆಲವೊಮ್ಮೆ ತಪ್ಪು ತಪ್ಪು ವಿಶ್ಲೇಷಣೆ)ಯ ಬಗ್ಗೆ ವಿಶೇಷ ಪ್ರಸ್ತಾಪ ಬಂದು ಆ ಬಗ್ಗೆ ಇನ್ನು ಮುಂದೆ ಎಚ್ಚರಿಕೆ ವಹಿಸಲು ತರುಣ ಗೆಳೆಯರು ಒತ್ತಾಯಿಸಿದ್ದು ಪ್ರಮುಖವಾದ ಅಂಶವಾಗಿತ್ತು. ಪ್ರಾಮಾಣಿಕ ಬ್ರಾಹ್ಮಣ ಗೆಳೆಯರನ್ನೂ ಒಳಗೊಳ್ಳಬೇಕೆಂಬುದು ಹಲವರ ಬಯಕೆಯಾಗಿತ್ತು. ಪ್ರಸಾರ ಮಾಧ್ಯಮದ ಹಿಡಿತವನ್ನಿಟ್ಟುಕೊಂಡಿರುವ ಬ್ರಾಹ್ಮಣವರ್ಗ ಹಾಗೂ ಶ್ರೀಮಂತ ಜಮೀಂದಾರೀ ವರ್ಗಗಳ ಬಗ್ಗೆ ಸರಿಯಾದ ತಿಳುವಳಿಕೆ ಮೂಡಿಸದೆ ಹೋದರೆ ಸಮಾಜವಾದೀ ಆಂದೋಲನ ಮತ್ತೆ ಹಾದಿ ತಪ್ಪಬಹುದೆಂಬ ಆತಂಕ ನಮ್ಮಂತಹ ಅನೇಕ ಗೆಳೆಯರಲ್ಲಿ ಉದ್ಭವಿಸಿದ್ದು ನಿಜ.

ಈ ಎಲ್ಲ ಅಂಶಗಳ ಚರ್ಚೆಗಳ ಫಲಿತಾಂಶವಾಗಿ ಕರ್ನಾಟಕದಲ್ಲಿ ಲೋಹಿಯಾ ಸಿದ್ಧಾಂತದ ಮೇಲೆ ಮತ್ತೆ 'ಸಮಾಜವಾದೀ ಯುವಜನ ಸಭಾ'ದ ಪುನಶ್ಚೇತನಕ್ಕೆ ತೀರ್ಮಾನ ಕೈಗೊಂಡಿದ್ದು, ಆ ಬಗ್ಗೆ ಸಂಘಟನೆ, ಸಾಹಿತ್ಯ ಪ್ರಚಾರ ಮುಂತಾದ ಚಟುವಟಿಕೆಗಳಿಗಾಗಿ, ನಮ್ಮ ಸಂಘಟನೆಯದೇ ಆದ 'ಪತ್ರಿಕೆ'ಯೊಂದರ ಅಗತ್ಯ ಹಾಗೂ ಹಣಕಾಸಿನ ಪೂರೈಕೆಗಾಗಿ ಪ್ರತಿ ದುಡಿಯುವ ಸದಸ್ಯರ ಸಂಬಳದ ಶೇ. 2 ರಷ್ಟು ವೇತನವನ್ನು ಕೊಡಬೇಕೆಂದೂ ನಿರ್ಧರಿಸಲಾಯಿತು. ಈಗ ಸದ್ಯಕ್ಕೆ ತುರ್ತಾಗಿ ಆಗಬೇಕಾಗಿರುವ ಕೆಲಸ ಅಂದರೆ 'ಲೋಹಿಯಾ' ಕೆಂಪು ಪುಸ್ತಕದ ಪುನರ್ಮುದ್ರಣ ಹಾಗೂ 'ಲೋಹಿಯಾ ಕೈಪಿಡಿ'ಯ ಮತ್ತೊಂದು ಹೊಸ ಪುಸ್ತಕದ ಪ್ರಕಟಣೆ. ಹಾಗೆಯೆ ಅಧ್ಯಯನ ಶಿಬಿರಗಳೂ ಕೂಡ. ಇಂಥ ಒಂದು ಸಮ್ಮೇಳನದ ತುರ್ತನ್ನು ಗುರುತಿಸಿ ಸಮರ್ಪಕವಾಗಿ ವ್ಯವಸ್ಥೆಗೊಳಿಸಿದ ಗೆಳೆಯರಾದ ಮುಜುನಾಥ ದತ್ತ ಹಾಗೂ 'ಜನತಾ ಮಾಧ್ಯಮ'ದ ವೆಂಕಟೇಶ ಮೂರ್ತಿ ಅಭಿನಂದನಾರ್ಹರು.

—ಬಿ. ರಾಜಣ್ಣ

ಪ್ರೊಡಕ್ಷನ್ ಕಂಟ್ರೋಲ್ ವಿಭಾಗ
ವಿ. ಐ. ಎಸ್. ಎಲ್. ಭದ್ರಾವತಿ

★

ನಿಷ್ಕ್ರಿಯ ಬಂಡಾಯ

ಮಾನ್ಯರೆ,

ಈ ವರ್ಷದ ಮಾರ್ಚ್ ತಿಂಗಳಲ್ಲಿ ನಾವು–ಎಡ ಪಂಥೀಯರು–ತುಂಬ ಮಹತ್ವಪೂರ್ಣ ಆಶಯಗಳನ್ನು ಹೊತ್ತು ಬಂಡಾಯದ ವೇದಿಕೆಯ ಅಡಿ ಒಂದಾಗಿದ್ದೆವು. ಸಾಮಾನ್ಯ ಗುರಿಗಳನ್ನು ಇಟ್ಟುಕೊಂಡು ಹೋರಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದೆವು. ನಾವು "ಪ್ರಜಾಪ್ರಭುತ್ವದ ರಕ್ಷಣೆಗೆ, ವಿಸ್ತರಣೆಗೆ ದುಡಿಯುತ್ತಿರುವ ಜನ" ಎಂದುಕೊಂಡೆವು.

ಇದು ಎಂಥಾ ಹುಸಿ ಗ್ರಹಿಕೆಯಾಗಿತ್ತು! ನಮ್ಮ ಈ ಗುರಿಗಳನ್ನು ಕಾರ್ಯರೂಪಕ್ಕೆ ತರಲು ನಾವು ಮಾಡಿದ್ದಾದರೂ ಏನು? ರಾಜ್ಯದ ಒಂದೆರಡು ಕಡೆ ಘೋಷಣೆಗಳನ್ನು ಕೂಗುವ ಸಭೆಯನ್ನು ನಡೆಸಿದ್ದಲ್ಲದೆ ಇನ್ನೇನು ಕಿಸಿದೆವು? ರಾಜ್ಯಮಟ್ಟದ ಸಂಚಾಲಕರಿಗೆ ಒಂದು ಸಭೆಯನ್ನು ಕರೆಯಲು ಕೂಡ ಸಾಧ್ಯವಾಗಲಿಲ್ಲ. ಏಕೆ?

ನಮ್ಮೆಲ್ಲರ ನಿಷ್ಕ್ರಿಯತೆ ಎಂದು ಕೊಂಡು ತೃಪ್ತಿಪಡೋಣವೆ? ಅಥವಾ ಬಂಡಾಯ ವೇದಿಕೆ ಎಂಬುದು ಅಂದು ನಾವು ಗ್ರಹಿಸಿಕೊಂಡಂತೆ ಎಡ ಪಂಥೀಯರೆಲ್ಲರ ಹೋರಾಟದ ಸಂಘಟನೆ ಎಂದು ತಿಳಿದದ್ದು ತಪ್ಪಾಯ್ತೆ?

ಹೌದೆಂದು ತೋರುತ್ತದೆ. ಬಂಡಾಯದ ಉದ್ಘಾಟನೆಗೆ ಬಂದ ಶ್ರೀ ಶ್ರೀಯಿಂದ ಹಿಡಿದು ಬಹುಪಾಲು ಮಂದಿ ಅವರು ಕಮ್ಯುನಿಸ್ಟರಾಗಿದ್ದರು. ಎಲ್ಲರೂ ಬಂಡಾಯ ಕಮ್ಯುನಿಸ್ಟರ ಸ್ವತ್ತು ಎನ್ನುತ್ತಿದ್ದಾಗ, ನಾನು "ಬಂಡಾಯ ಕಮ್ಯುನಿಸ್ಟರ ಸಂಘಟನೆ ಮಾತ್ರವಲ್ಲ" ಎಂದು ಸಮರ್ಥಿಸಿಕೊಂಡೆ ನನ್ನ ಗ್ರಹಿಕೆಯೇ ಮೂಲಭೂತವಾಗಿ ತಪ್ಪಾದಿತ್ತು.

'ಬಂಡಾಯ ಸಾಂಸ್ಕೃತಿಕ ಜಾಥಾ' ಎಂಬ ಕಾರ್ಯಕ್ರಮ ಎಂದು 'ಸಮುದಾಯ ಸಾಂಸ್ಕೃತಿಕ ಜಾಥಾ' ಆಯಿತೋ ಅಂದೇ ನಾಡಿನ ಅನೇಕ ತರುಣ ಸಮಾಜವಾದಿ ತರುಣರಿಗೆ ಬಂಡಾಯದ ಬಗ್ಗೆ ಭ್ರಮನಿರಸನವಾಯಿತು.

ಇನ್ನು ಎರಡೂವರೆ ತಿಂಗಳಲ್ಲಿ ಬರಲಿರುವ ಸಾರ್ವತ್ರಿಕ ಚುನಾವಣೆಯಲ್ಲಿ ಬಂಡಾಯಗಾರರ ನಿಲುವೇನು? ಯಾರಿಗಾದರೂ ಗೊತ್ತೆ? ಒಬ್ಬರು ಬಾಬು ಜಗಜೀವನ ರಾಮರನ್ನು ಸಮರ್ಥಿಸಿಕೊಂಡರೆ, ಮತ್ತೊಬ್ಬರು ಮಗದೊಬ್ಬರನ್ನು. ತತ್ವ ನಿಷ್ಠೆ ಎಂಬುದನ್ನು ಹುಡುಕಬೇಕಾಗಿದೆ.

ನಿಷ್ಕ್ರಿಯವಾಗಿ ಹೋಗಿರುವ ಬಂಡಾಯ ಸೋದರರು ಏನು ಹೇಳುತ್ತಾರೆ ಎಂಬುದರ ಬಗ್ಗೆ ಕುತೂಹಲಿಯಾಗಿದ್ದೇನೆ.

—ಶಿವರಾಮು ಕಾಡನಕುಪ್ಪೆ

ವಿದ್ಯಾವರ್ಧಕ ಕಾಲೇಜು, ಮೈಸೂರು–1

"ಆ ನಾಯಕರೆಲ್ಲಾ ಸಿದ್ಧಾಂತಗಳಲ್ಲಿ ಮುಳುಗಿಹೋಗಿದ್ದಾರೆ."

ಇಂದ್ರಾರೆಡ್ಡಿ ಎಂಬ ಹೆಸರು ಆಂಧ್ರದ ಯುವಜನತೆಯ ಬಂಡಾಯದ ಸಂಕೇತ. ಇಪ್ಪತ್ತನಾಲ್ಕು-ಇಪ್ಪತ್ತೈದರ ಈ ತರುಣ. ಈಗ ಹೈದರಾಬಾದ್‌ನಲ್ಲಿ ಲೋಹಿಯಾ ವಿಚಾರ ವೇದಿಕೆಯ ಆಶ್ರಯದಲ್ಲಿ ಯುವಜನತೆಯ ಸಂಘಟನೆಯಲ್ಲಿ ತೊಡಗಿದ್ದಾರೆ. ನಕ್ಸಲೀಯ ಚಳುವಳಿಯಿಂದ ಆಕರ್ಷಿತರಾಗಿ ಆಂಧ್ರದಲ್ಲಿ ಆ ಚಳುವಳಿಯ ಪ್ರಮುಖ ಕ್ರಿಯಾಶಕ್ತಿಗಳಲ್ಲಿ ಒಬ್ಬರಾಗಿ ಹೋರಾಡಿ ತುರ್ತು ಪರಿಸ್ಥಿತಿಯಲ್ಲಿ ಚಿತ್ರಹಿಂಸೆ ಅನುಭವಿಸಿದ ಈ ಧೀಮಂತ ಯುವಕ ಈಗ ಹೇಳುತ್ತಾರೆ; "ಈ ದೇಶವನ್ನು ಸಮರ್ಪಕವಾಗಿ ಅರ್ಥಮಾಡಿಕೊಂಡವರು ಲೋಹಿಯಾ ಒಬ್ಬರೇ ಎಂದು ನನಗನ್ನಿಸುತ್ತಿದೆ, ಈಗ". 'ಮಾನವ' ಇತ್ತೀಚೆಗೆ ಹೈದರಾಬಾದ್‌ನಲ್ಲಿ ಇಂದ್ರಾರೆಡ್ಡಿ ಅವರನ್ನು ಸಂದರ್ಶಿಸಿತು. ಸಂದರ್ಶನದ ಕೆಲವು ಭಾಗಗಳನ್ನು ಇಲ್ಲಿ ಕೊಡಲಾಗಿದೆ :

ಮಾನವ: ನೀವು ನಕ್ಸಲೀಯ ಚಳುವಳಿಗೆ ಧುಮುಕಿದ್ದು ಹೇಗೆ?

ಇಂದ್ರಾ : ನನ್ನ ಶಾಲಾದಿನಗಳಲ್ಲಿ ನಡೆದ ಹರಿಜನರು ಹಾಗೂ ಬುಡಕಟ್ಟಿನವರ ಹಾಸ್ಟಲ್‌ನಲ್ಲಿ ಕಂಡು ಬರುವ ದಾರಿದ್ರ್ಯದ ವಿರುದ್ಧದ ಮುಷ್ಕರವೊಂದರಲ್ಲಿ ನಾನು ಸಕ್ರಿಯವಾಗಿ ಪಾಲ್ಗೊಳ್ಳುವುದರೊಡನೆ ನನ್ನ ಈ ಚಟುವಟಿಕೆಗಳು ಆರಂಭವಾದವು. ಜತೆಗೆ ನನ್ನ ಗೆಳೆಯನೊಬ್ಬ ನಕ್ಸಲೀಯ ಗುಂಪುಗಳಲ್ಲಿ ಒಂದಾಗಿದ್ದ ಚಂದ್ರಪುಲ್ಲಾರೆಡ್ಡಿ ಗುಂಪಿನ ಪ್ರಕಟಣೆಯಾದ 'ಕೆಂಪು ವೈಭವ' ಎಂಬ ಪುಸ್ತಕವೊಂದನ್ನು ಓದಲೆಂದು ಕೊಟ್ಟ. ಈ ಪುಸ್ತಕ ನನ್ನನ್ನು ಈ ಚಟುವಟಿಕೆಗಳಲ್ಲಿ ಮುಂದುವರೆಯುವಂತೆ ಪ್ರೇರೇಪಿಸಿತು. ಜತೆಗೆ ನಮ್ಮ ಮುಷ್ಕರ ಯಶಸ್ವಿಯಾಗಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಸೌಲಭ್ಯ ಹೆಚ್ಚಾದ ಅಂಶವೂ, ಇದಕ್ಕೆ ಉತ್ತೇಜನ ನೀಡಿತು.

ಮಾ : ನೀವು ನಕ್ಸಲೀಯ ಚಳುವಳಿಯಲ್ಲಿ ಪಾಲ್ಗೊಂಡಿದ್ದಾಗ, ಈ ಚಳುವಳಿಯ ಯಶಸ್ಸಿನ ಬಗ್ಗೆ ಸಂಪೂರ್ಣ ಭರವಸೆ ಹೊಂದಿದ್ದಿರಾ?

ಇ : ಮೊದಮೊದಲಲ್ಲಿ ನಾನು ನಕ್ಸಲೀಯ ಚಳುವಳಿಯಲ್ಲಿದ್ದೇನೆ ಎಂಬ ಅರಿವೇ ನನಗಿರಲಿಲ್ಲ.ಅಲ್ಲಿ ನಡೆದಿದ್ದ ವಿದ್ಯಾರ್ಥಿ ಸಂಘಟನೆಗೆ ನಕ್ಸಲೀಯ ಶಕ್ತಿಗಳೇ ಕಾರಣವೆಂದು, ನನಗೆ ಕ್ರಮೇಣ ಅರಿವಾಗತೊಡಗಿತಷ್ಟೆ. ನಕ್ಸಲೀಯ ನಾಯಕರು ಶಿಕ್ಷಣದ ಅಂಗವಾಗಿ ಬೋಧಿಸುತ್ತಿದ್ದ ದ್ವಂದ್ವಾತ್ಮಕ ಭೌತವಾದ, ಮಾನವ ಚರಿತ್ರೆಯ ನಿರೂಪಣೆ, ರಷ್ಯನ್ ಹಾಗೂ ಚೀನೀಕ್ರಾಂತಿಯ ಪಾಠಗಳು ಇವೆಲ್ಲಾ ನನ್ನನ್ನು ರೋಮಾಂಚಿತಗೊಳಿಸುತ್ತಿದ್ದವು. ಆದ್ದರಿಂದ ಆಗ ಏನೋ ಮಾಡಬೇಕು ಎಂಬ ಉತ್ಸಾಹ ಇದ್ದಿತು ಎಂದಷ್ಟೇ ಹೇಳುವೆ. ಯಶಸ್ಸಿನ ಬಗ್ಗೆ ನಾನೆಂದೂ ಯೋಚನೆ ಮಾಡಿದ ಹಾಗೆ ನೆನಪಿಲ್ಲ.

ಮಾ: ಈ ಚಳುವಳಿಯ ಬಗ್ಗೆ ನಿಮ್ಮ ಭ್ರಮನಿರಸನ ಎಂದು ಆರಂಭವಾಯಿತು?

ಇ: ಭ್ರಮನಿರಸನ ಎಂದೇನೂ ಹೇಳಲಾರೆ. ಈ ಚಳುವಳಿ ಚಂದ್ರಪುಲ್ಲಾರೆಡ್ಡಿ ಗುಂಪು, ನಾಗಿರೆಡ್ಡಿ ಗುಂಪು, ಚಾರು ಮುಜುಂದಾರ್ ಗುಂಪು, ಲಿನ್ ಪಿಯಾವೋ ಗುಂಪು ಹೀಗೆ ಹತ್ತಾರು ಗುಂಪುಗಳಾಗಿ ಒಡೆಯಲಾರಂಭಿಸಿದ್ದು ನನ್ನನ್ನು ದಿಙ್ಮೂಢನನ್ನಾಗಿ ಮಾಡಿತು. ಇದೆಲ್ಲಾ ಕೆಲವರ ಬೌದ್ಧಿಕ ತೀಟೆ ಮಾತ್ರವೇನೋ ಎಂಬ ಅನುಮಾನ ಎದ್ದಿತು. ಶ್ರೀಕಾಕುಲಂ ಘಟನೆ ಇದಕ್ಕೆ ಸಾಕ್ಷಿ. ಪೋಲೀಸರ ಬೇಟೆಗೆ ಸಿಕ್ಕಿದವರು ನಾಯಕರನ್ನು ನಂಬಿ ಬಂಡೆದ್ದ ಬಡಜೀವಿಗಳು, ಹೆಂಗಸರು, ಮಕ್ಕಳು ಮಾತ್ರ. ಪೋಲೀಸರು ತಮ್ಮ ಬಂದೂಕಿನ ತುದಿಯಿಂದ ಬಸುರಿಯರ ಹೊಟ್ಟೆ ಸೀಳಿದ್ದು ಇನ್ನೂ ನನ್ನ ಕಣ್ಮುಂದಿದೆ. ಆಗ ಈ ನಾಯಕರು ಓಡಿಹೋದರು. ಅರಣ್ಯಗಳಿಂದ ಕಣ್ಮರೆಯಾಗಿ ಬಿಟ್ಟರು ಇಂತಹ ಘಟನೆ ಯಾರನ್ನು ತಾನೇ ಅಲುಗಾಡಿಸುವುದಿಲ್ಲ?

ಮಾ: ನೀವು ಲೋಹಿಯಾ ಪ್ರಣಾಳಿಯ ಹತ್ತಿರ ಬಂದದ್ದು ಹೇಗೆ?

ಇ; ತುರ್ತು ಪರಿಸ್ಥಿತಿ ಸಮಯದಲ್ಲಿ ನನ್ನನ್ನು ಚಿತ್ರಹಿಂಸೆಗೆ ಒಳಪಡಿಸಿ ನನ್ನಿಂದೇನೂ ರಹಸ್ಯ ಸುದ್ದಿ ಪಡೆಯಲಾಗದ ಪೋಲೀಸರು ಕೊನೆಗೆ ಇತರ ರಾಜಕೀಯ ಬಂದಿಗಳ ಜತೆ ನನ್ನ ದೂಡಿದರು. ಅಲ್ಲಿ ಲೋಹಿಯಾವಾದಿ ಸತ್ಯನಾರಾಯಣ ರೆಡ್ಡಿ ಅವರ ಪರಿಚಯವಾಯಿತು. ಅವರು ಅಲ್ಲಿನ ರಾಜಕೀಯ ಬಂದಿಗಳಿಗೆ ಲೋಹಿಯಾಸಿದ್ಧಾಂತದ ಬಗ್ಗೆ ಪ್ರತಿದಿನ ಪ್ರಾಥಮಿಕ ಪಾಠಗಳನ್ನು ಮಾಡುತ್ತಿದ್ದರು. ಲೋಹಿಯಾ ಅವರ 'ಇತಿಹಾಸ ಚಕ್ರ'ದ ಕಲ್ಪನೆ ನನ್ನನ್ನು ಚಿಂತನೆಗೆ ಹಚ್ಚಿತು. ನಾನು ಹಿಂದೆ ಕಲಿತ ಮಾರ್ಕ್ಸ್‌ವಾದೀ ಪಾಠಗಳನ್ನೂ ಇದನ್ನೂ ತೂಗಿ ತೂಗಿ ನೋಡತೊಡಗಿದೆ. ಲೋಹಿಯಾ ವಸ್ತುಸ್ಥಿತಿಗೆ ಹತ್ತಿರವಾಗಿದ್ದರು. ರಷ್ಯದಲ್ಲಿ ಲೆನಿನ್ ಮಾರ್ಗದರ್ಶನದಲ್ಲಿ ಮತ್ತು ಚೀನದಲ್ಲಿ ಮಾವೋ ಮಾರ್ಗದರ್ಶನದಲ್ಲಿ ಕಮ್ಯೂನಿಸಂ ಹೊಸರೂಪ ಪಡೆದಂತೆ, ಇಂಡಿಯಾದ ಸಂದರ್ಭಕ್ಕೆ ಅನುಗುಣವಾಗಿ ಕಮ್ಯೂನಿಸಂ, ಲೋಹಿಯಾ ಮಾರ್ಗದರ್ಶನದಲ್ಲಿ ಹೊಸ ರೂಪು ಪಡೆದಿದೆ. ನಿಜವಾದ ಕಮ್ಯೂನಿಸ್ಟ್ ಅರ್ಥದಲ್ಲಿ, ಲೋಹಿಯಾ ಒಬ್ಬರೇ ಇಂಡಿಯಾದ ಕಮ್ಯೂನಿಸ್ಟ್ ನಾಯಕ ಎಂಬ ಭಾವನೆ ನನ್ನಲ್ಲಿ ಮೊಳೆಯುತ್ತಿದೆ.

ಮಾ: ಇಂಡಿಯಾದಲ್ಲಿ ಕಮ್ಯೂನಿಸ್ಟ್ ಚಳವಳಿ ಯಶಸ್ವಿಯಾಗುವುದಿಲ್ಲವೇ?

ಇ: ಇದು, ಈ ಚಳುವಳಿ ಮುಂದೆ ಕಲಿಯಬಹುದಾದ ಪಾಠಗಳನ್ನು ಅವಲಂಬಿಸಿದೆ. ಜಾತಿಯ ವಾಸ್ತವವನ್ನ, ಅಧಿಕಾರ ವಿಕೇಂದ್ರೀಕರಣದ ಅಗತ್ಯವನ್ನು, ಸೈದ್ಧಾಂತಿಕ ರಾಷ್ಟ್ರೀಯತೆಯನ್ನು ಒಪ್ಪಿಕೊಳ್ಳದ ಹೊರತು ಕಮ್ಯೂನಿಸ್ಟ್ ಚಳುವಳಿ ಇಂಡಿಯಾದಲ್ಲಿ ಯಶಸ್ವಿಯಾಗಲಾರದು. ಚಳುವಳಿಗೆ ಮೂಲಭೂತ ಬದಲಾವಣೆಯಲ್ಲಿ ನಂಬಿಕೆ ನಿಜವಾಗಿಯೂ ಇದ್ದರೆ ಚಳುವಳಿ ತಾನೆದುರಿಸುವ ಘಟನೆಗಳಿಂದ ಪಾಠಗಳನ್ನು ಕಲಿತುಕೊಳ್ಳುತ್ತಾ ಹೋಗುತ್ತದೆ. ಆಗ ಸಹಜವಾಗಿ ಅದು ಲೋಹಿಯಾ ಪ್ರಣಾಳಿಯ ಹತ್ತಿರಕ್ಕೆ ಬರತೊಡಗುತ್ತದೆ. ಆದರೆ ಈ ಚಳುವಳಿಯ ನಾಯಕರು ಅದಕ್ಕೆ ಅವಕಾಶ ಕೊಡುವರಾ ಎಂಬುದು ಮುಖ್ಯ ಪ್ರಶ್ನೆ. ಆದರೆ ಆ ನಾಯಕರೆಲ್ಲಾ ಸಿದ್ಧಾಂತಗಳಲ್ಲಿ ಮುಳುಗಿಹೋಗಿದ್ದಾರೆ.

★

ಸಂಪಾದಕನ ಟಿಪ್ಪಣಿಗಳು

(೧೮ನೇ ಪುಟದಿಂದ)

ವಿನಾಶಕಾರೀ ಧರ್ಮವೊಂದು ತಲೆ ಎತ್ತಿ ಜನಜೀವನವನ್ನು ಹಾಳುಗೆಡಹಿತು. ನಂತರ ಇಸ್ಲಾಂ ಮತ್ತು ಕ್ರಿಶ್ಚಿಯನ್ ಎಂಬ ವಿಷಕಾರೀ ಧರ್ಮಗಳೂ ಎರಗಿ, ಸಮಾಜದ ನೈತಿಕ ಅವನತಿಗೆ ಕಾರಣವಾದವು! ಇದು ತ್ಯಾಗಿಯವರ ನೈಯಕ್ತಿಕ ವಿಶ್ಲೇಷಣೆ ಅಲ್ಲ; ಕೆಲವೇ ತಿಂಗಳುಗಳ ಹಿಂದೆ ನಮ್ಮನ್ನು ಆಳುತ್ತಿದ್ದ ಪಕ್ಷದ ದೊಡ್ಡ ಘಟಕವಾಗಿದ್ದ ಶಿಸ್ತಿನ ಸೇನೆಯೊಂದರ ವಿಶ್ಲೇಷಣೆ ಎಂಬುದು ಮುಖ್ಯ. ಈ ದೃಷ್ಟಿಯಿಂದ ನೋಡಿದಾಗ, ಜನತಾಪಕ್ಷವನ್ನು ಆಡಳಿತದಿಂದ ತಟಕ್ಕನೆ ಹೊರನೂಡುವ ಮೂಲಕ ರಾಜನಾರಾಯಣರು ಈ ದೇಶದ ಸಾಮಾಜಿಕ ಸುಭದ್ರತೆಗೆ ಸಲ್ಲಿಸಿರುವ ಕೊಡುಗೆಯ ಮೌಲ್ಯದ ಅರಿವಾದೀತೇನೋ! ರಾಜನಾರಾಯಣರು, ವೇಷ ಮರೆಸಿಕೊಂಡು ಕುರ್ಚಿ ಏರಿದ್ದ ವಿಷದ ಹಾವುಗಳನ್ನು ತಮ್ಮ ಒರಟು ಕಾರ್ಯವಿಧಾನದ ಮೂಲಕವೇ ಸದ್ಯಕ್ಕಾದರೂ ಕೆಳಕ್ಕೆ ತಳ್ಳಿದ್ದಾರೆ. ಅವರಿಗೆ, ಧರ್ಮದ ಅಫೀಮು ಸೇವಿಸದ ಪ್ರಾಂಜಲ ಮನಸ್ಸಿನ ಜನ ಋಣಿಯಾಗಿದ್ದಾರೆ.

ಬರೀ ಒಂದು ಜೀವನ ವಿಧಾನವಾಗಿದ್ದ 'ಹಿಂದೂ' ಎಂಬ ಕಲ್ಪನೆಯನ್ನು, ಮಠ, ನಿಯಮಾವಳಿ ಮುಂತಾಗಿ ಸೃಷ್ಟಿಸಿ ವ್ಯವಸ್ಥೆಯೊಂದನ್ನಾಗಿ ಮಾರ್ಪಡಿಸಿ, ಧರ್ಮ ಎಂಬ ಬಂಡವಾಳ ಮಾಡಿಕೊಂಡವರು ವಿಷದ ಹಾವುಗಳಲ್ಲದೇ ಮತ್ತೇನು? ಬುದ್ಧ ಬಂಡಾಯ ಎದ್ದುದೂ ಈ ದುರ್ವ್ಯವಸ್ಥೆಯ ವಿರುದ್ಧವೇ ಅಲ್ಲವೇ?

★

ಮಾನವ

ಅನುಭವದ ಎತ್ತರಗಳಿಗೆ
ಚಿಂತನೆಯ ಆಳಗಳಿಗೆ

ಇದು ಯುವಜನರ ವೇದಿಕೆ. ಯುವಜನ ಪರಸ್ಪರ ಚರ್ಚಿಸುತ್ತಾ ಒಟ್ಟಿಗೆ ಒಂದು ಖಚಿತ ದಿಕ್ಕಿನಲ್ಲಿ ಬೆಳೆಯುವ ಹೊಸ ಪ್ರಯತ್ನವಾಗಿ ರೂಪಿಸಲಾಗಿರುವ ಮಾಧ್ಯಮ; ಯುವಜನರ ಸಾಮರ್ಥ್ಯದ ಸರ್ವಸಾಧ್ಯತೆಗಳನ್ನು ಅನ್ವೇಷಿಸುವ ಒಂದು ಪ್ರಯೋಗ.

ಇಂತಹ ಎಲ್ಲ ಪ್ರಯೋಗಗಳೂ ವಿಫಲಗೊಂಡಿರುವುದು, ಇತರ ಎಲ್ಲ ಕಾರಣಗಳ ಜೊತೆ ಸಂಪನ್ಮೂಲಗಳ ಕೊರತೆಯಿಂದ ಕೂಡಾ ಎಂಬುದನ್ನು ನಾವು ನಿಮಗೆ ನೆನಪು ಮಾಡಿಕೊಡಬೇಕಿಲ್ಲ. ಆದ್ದರಿಂದ ಸಾಧ್ಯವಿದ್ದವರು ದಯ.ವಿಟ್ಟು ಆಜೀವ ಚಂದಾದಾರರಾಗಬೇಕೆಂದು ವೇದಿಕೆ ಕೋರುತ್ತದೆ.

ವಾರ್ಷಿಕ ಚಂದಾ : ೧೦ ರೂಪಾಯಿಗಳು
ಆಜೀವ ಚಂದಾ : ೩೦೦ ರೂಪಾಯಿಗಳು
(ಮೂರು ಕಂತುಗಳಲ್ಲಿ ಕೊಡಬಹುದು)